ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 27 ಸಂಚಿಕೆ 51 ಡಿಸೆಂಬರ್ 18, 2005 ಬೆಲೆ ರೂ. 3.00

ಪಂಚಾಯತ್ ಚುನಾವಣೆ




ಜನತೆಯ ಕೈಗೆ ಪರಮಾಧಿಕಾರದ ಆಶಯ



ಕುದುರೆಮುಖದ ಕತ್ತು ಹಿಚುಕಿದರೋ !


ಹೊರಗುತ್ತಿಗೆ ಎಂಬ ಮಹಾಮಾರಿಗೆ



ಮಾಹಿತಿ ಸಿಂಧು ಶಿಕ್ಷಕರ ತಲೆದಂಡ

- ಭವಿಷ್ಯ ನಿಧಿ ಬಡ್ಡಿ ಇಳಿಕೆ ಪ್ರತಿರೋಧ
- ಬಾಬಾಬುಡನ್ ಗಿರಿ : ಕೋಮುವಾದಿಗಳನ್ನು ಮಟ್ಟ ಹಾಕಿ
- ಮನಸ್ಸು ಕಲಕುವ 'ಭ್ರೂಣ'

ಪ್ರತಿಗಾಮಿ 'ವಿಶ್ವವಿದ್ಯಾಲಯ ಕಾಯ್ದೆ' ತಿದ್ದುಪಡಿ




ಭಗತ್ ಸಿಂಗ್ ತಂಡದ ಕ್ರಾಂತಿ ಕಿಡಿ

ಕಾಮ್ರೇಡ್ ಶಿವವರ್ಮ

ಕ್ರಾಂತಿಕಾರಿ ಹೋರಾಟಗಳ ಪ್ರಕ್ರಿಯೆಯಲ್ಲಿ ಸಮಾಜವಾದದತ್ತ ಆಕರ್ಷಿತರಾಗಿ ಶಹೀದ್ ಭಗತ್‌ಸಿಂಗ್‌ರ ಜೊತೆಗೂಡಿ 'ಹಿಂದೂಸ್ತಾನ್ ರಿಪಬ್ಲಿಕನ್ ಆರ್ಮಿ'ಯನ್ನು 'ಹಿಂದೂಸ್ತಾನ್ ಸೋಷಿಯಲಿಸ್ಟ್ ರಿಪಬ್ಲಿಕನ್ ಆರ್ಮಿ'ಯನ್ನಾಗಿ ಪರಿವರ್ತಿಸುವಲ್ಲಿ ಮಹತ್ವದ ಪಾತ್ರವಹಿಸಿದ ಕಾಂ.ಶಿವವರ್ಮ ಆ ಸಂಘಟನೆಯ ಬೆನ್ನೆಲುಬಿನಂತೆ ಕೆಲಸ ಮಾಡಿದ ಪ್ರಮುಖರಲ್ಲಿ ಒಬ್ಬರು. ಇದೇ ಕ್ರಾಂತಿಕಾರಿ ಪರಂಪರೆಯಲ್ಲಿ ಕಮ್ಯೂನಿಸ್ಟ್ ಪಕ್ಷ ಸೇರಿದ ಶಿವವರ್ಮಾ ಪಕ್ಷ ವಿಭಜನೆಯ ನಂತರ ಕೊನೆಯುಸಿರಿನವರೆಗೆ ಸಿಪಿಐ(ಎಂ) ಪಕ್ಷದ ಮುಖಂಡರಾಗಿ ದುಡಿದರು.

ಇಂದು ದೇಶ ಪ್ರೇಮವನ್ನು ಸಂಪೂರ್ಣವಾಗಿ ತಾವೇ ಗುತ್ತಿಗೆ ತೆಗೆದುಕೊಂಡಂತೆ ಮಾತನಾಡುವ ಸಂಘ ಪರಿವಾರ ಅಂದು ತಮ್ಮ 'ಹಿಂದೂ ರಾಷ್ಟ್ರ'ದ ಗುರಿಗೆ ಬೆಂಬಲ ನೀಡುತ್ತಾ ಅದೇ ಸಮಯದಲ್ಲಿ ತಮ್ಮ ಕುರ್ಚಿ ಹಿತಾಸಕ್ತಿಗಳಿಗಾಗಿ ಬ್ರಿಟೀಷರ ಏಜೆಂಟರಂತೆ ವರ್ತಿಸುತ್ತಿದ್ದ ಪಾಳೇಗಾರಿ ಪ್ರಭುಗಳಾದ ರಾಜ-ಮಹಾರಾಜರ ಆಸ್ಥಾನಗಳನ್ನು ಆಶ್ರಯಿಸಿತ್ತು. ಹಿಂದೂ-ಮುಸ್ಲಿಂ ಎಂದು ಒಡೆದು ಆಳುವ ಬ್ರಿಟೀಷರ ನೀತಿಯು ಸಂಘ ಪರಿವಾರದ ಗುರಿಗೂ ಪೂರಕ ಆಗಿದ್ದರಿಂದ ಸಂಘ ಪರಿವಾರಕ್ಕೆ ಬ್ರಿಟೀಷರೊಂದಿಗೆ ಯಾವ ವೈರುಧ್ಯವೂ ಇರಲಿಲ್ಲ. ಹೀಗಾಗಿ ಸುಲಿಗೆಕೋರ ಬ್ರಿಟೀಷರೊಂದಿಗೆ ಶಾಮೀಲಾಗಿದ್ದ ಸಂಘ ಪರಿವಾರ ದೇಶದ ಸ್ವಾತಂತ್ರ್ಯ ಚಳುವಳಿಗೆ ಬೆನ್ನು ತಿರುಗಿಸಿ ನಿಂತಿತು. ಇಡೀ ಆರೆಸ್ಸೆಸ್, ಬಿಜೆಪಿಯ ಹಿಂದಿನ ಅವತಾರ ಜನಸಂಘ ಇತ್ಯಾದಿ ಸಂಘ ಪರಿವಾರದಲ್ಲಿ ದುರ್ಬೀನು ಹಾಕಿ ಹುಡುಕಿದರೂ ಕಾಂ.ಶಿವವರ್ಮರಂತಹ ಒಬ್ಬ ಕ್ರಾಂತಿಕಾರಿ ಸಿಗುವುದು ಸಾಧ್ಯವಿಲ್ಲ. ಕಮ್ಯೂನಿಸ್ಟ್ ಚಳುವಳಿಯ, ಇಡೀ ದೇಶದ ಹೆಮ್ಮೆ ಕಾಂ.ಶಿವವರ್ಮ



ಭಾರತ ಇತಿಹಾಸದ ಪುಟಗಳಲ್ಲಿ ಅಚ್ಚಳಿಯದ ಮುದ್ರೆಯನ್ನೊತ್ತಿರುವ ಭಗತ್‌ಸಿಂಗ್ ಮತ್ತು ಸಹಚರರಲ್ಲಿ ಬಹುಮುಖ್ಯರಾದವರೇ ಶಿವವರ್ಮ. ಭಾರತದ ಸ್ವಾತಂತ್ರ್ಯ ಹೋರಾಟ ಪಥದಲ್ಲಿ ನೂರಾರು ಅರ್ಪಿತ ಕ್ರಾಂತಿಕಾರಿಗಳನ್ನು ನೇಣುಗಂಬಕ್ಕೇರಿಸಿದ್ದು ಹಲವಾರು ಜನರನ್ನು ಸೆರೆಮನೆಗೆ ತಳ್ಳಲಾಗಿದ್ದರೆ, ಭಗತ್‌ಸಿಂಗ್ ಮತ್ತು ಅವರ ಸಹಚರರು ಅನುಸರಿಸಿದ ಕ್ರಾಂತಿಕಾರಿ ಮಾರ್ಗದಿಂದಾಗಿ ವಿಶೇಷವಾದ ಸ್ಥಾನವನ್ನು ಪಡೆದಿದ್ದಾರೆ. ಶಿವವರ್ಮರವರು ಜನಿಸಿದ್ದು 1904ರ ಫೆಬ್ರುವರಿ 9ರಲ್ಲಿ ಉತ್ತರ ಪ್ರದೇಶದ ಹಾರ್ಡೋಯಿ ಜಿಲ್ಲೆಯಲ್ಲಿ. ಅವರು 17 ವರ್ಷದವರಿದ್ದಾಗ ಪ್ರಥಮ ಅಸಹಕಾರ ಚಳುವಳಿಯಲ್ಲಿ ಪಾಲ್ಗೊಳ್ಳುವ ಸಲುವಾಗಿ 1920-21ರಲ್ಲಿ ತಮ್ಮ ವ್ಯಾಸಂಗವನ್ನು ತೊರೆದು ಬಂದರು. ಸ್ವಾತಂತ್ರ್ಯ ಹೋರಾಟದ ಸಾವಿರಾರು ತೊರೆಗಳಿಗೆ ವಿದ್ಯುತ್ ಸ್ಪರ್ಶದ ಶಕ್ತಿಯನ್ನು ನೀಡಿ ಸಾಮ್ರಾಜ್ಯಶಾಹಿ ಶಕ್ತಿಯು ಬೆಚ್ಚಿ ಬೀಳುವಂತೆ ಮಾಡಿದ್ದು ಭಗತ್‌ಸಿಂಗ್‌ರವರ ಗುಂಪಾದ ಹಿಂದೂಸ್ತಾನ್ ಸೋಷಿಯಲಿಸ್ಟ್ ರಿಪಬ್ಲಿಕ್ ಆರ್ಮಿ (ಹೆಚ್‌ಎಸ್‌ಆರ್‌ಎ). ಭಗತ್‌ಸಿಂಗ್‌ರ ಸೇನೆಯ ಪ್ರಾಮುಖ್ಯತೆಯೆಂದರೆ ವ್ಯಕ್ತಿಗತ ಭಯೋತ್ಪಾದನೆ ಹಾಗೂ ಸಮರೋಪಾದಿಯ ಸಾಮೂಹಿಕ ಚಳುವಳಿ ಇವೆರಡರ ನಡುವೆ ಅತ್ಯಗತ್ಯ ವಾದ ಕೊಂಡಿಯನ್ನೇರ್ಪಡಿಸಿರುವುದು. ಭಗತ್‌ಸಿಂಗ್‌ರೊಂದಿಗೆ ರಾಜಗುರು ಮತ್ತು ಸುಖ್‌ದೇವ್‌ರನ್ನು 1931ರ ಮಾರ್ಚ್ 23ರಂದು ನೇಣುಗಂಬಕ್ಕೇರಿಸಿದುದು ಎಲ್ಲ ಭಾರತೀಯ ಪೀಳಿಗೆಯವರಲ್ಲು ವಿದ್ಯುತ್ ಕಂಪನ ಸೃಷ್ಟಿಸಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಹೊಸ ತಿರುವನ್ನು ಒದಗಿಸಿತು. ಈ ಯುವ ಕ್ರಾಂತಿಕಾರಿಗಳಲ್ಲಿ ಬಹುತೇಕರು ಇಪ್ಪತ್ತರ ಹರೆಯದವರಿದ್ದು ಅವರ ವಿರೋಚಿತ ಧೈರ್ಯ ಮತ್ತು ಬಲಿದಾನಗಳು ಮಾತ್ರವಲ್ಲದೆ ಸಮರೋಪಾದಿಯ ಸಾಮೂಹಿಕ ಚಳುವಳಿ ಮತ್ತು ವ್ಯಕ್ತಿಗತ ಭಯೋತ್ಪಾದನೆಯನ್ನು ಅವರು ಒಡಗೂಡಿಸಿದುದು ಅವರ ವಿಶಿಷ್ಟತೆ.

ಭಗತ್‌ಸಿಂಗ್‌ರ ತಂಡವು ಭಾರತೀಯ ಯುವಜನರಲ್ಲಿ ಸಂಚಲನವನ್ನುಂಟುಮಾಡಿ ಯುವಜನರ ಸ್ವಾಭಿಮಾನವನ್ನು ಬಡಿದೆಬ್ಬಿಸುವ ಶಕ್ತಿಯ ಹಿಂದೆ ಆತ್ಮವಿಶ್ವಾಸ ಮತ್ತು ಅಖಂಡ ಧೈರ್ಯದ ಪ್ರತೀಕವೇ ಎಂಬಂತಿದ್ದ ಶಿವವರ್ಮರಂತಹ ಬಹುಪ್ರಮುಖ ಕ್ರಾಂತಿಕಾರಿಗಳಿದ್ದರು. ಭಗತ್‌ಸಿಂಗ್ ರೊಂದಿಗೆ ಆರೋಪಕ್ಕೊಳಗಾಗಿದ್ದ ಒಂಬತ್ತು ಮಂದಿಯಲ್ಲೊಬ್ಬರಾಗಿ ಜೀವನಪರ್ಯಂತ ಗಡಿಪಾರು ಶಿಕ್ಷೆಗೊಳಗಾಗಿದ್ದ ಶಿವವರ್ಮರವರು ಭಗತ್‌ಸಿಂಗ್‌ರ ಪ್ರಮುಖ ಸಹಚರರಾಗಿದ್ದು ಉತ್ತರಪ್ರದೇಶದಲ್ಲಿ ಹೆಚ್‌ಎಸ್‌ಆರ್‌ಎಯ ಪ್ರಧಾನ ಸಂಘಟಕರಾಗಿದ್ದರು. ಶಿವವರ್ಮರವರು ಒಬ್ಬ ವಿಚಾರವಾದಿ ಮತ್ತು ಕೆಲಸಗಾರ ಎರಡೂ ಆಗಿದ್ದು, ಒಬ್ಬ ಹೋರಾಟಗಾರ ಹಾಗೂ ಸಂಘಟಕ, ಆಳವಾದ ಮಾನವೀಯ ಅಂತಃಕರಣವನ್ನು ಹೊಂದಿದ್ದ ದುರ್ದಮ್ಯ ಧೈರ್ಯವಿದ್ದ ಅಪರೂಪವಾದ ಕ್ರಾಂತಿಕಾರಿಯಾಗಿದ್ದರು. ಈ ಗುಣಗಳೇ ಅವರನ್ನು ಭಗತ್‌ಸಿಂಗ್ ಮತ್ತು ಇತರ ಕ್ರಾಂತಿಕಾರಿಗಳ ಬಳಿಗೆ ಸೆಳೆದದ್ದು. ಅವರು ಭೂಗತರಾಗಿದ್ದಾಗ, ಧೀರ್ಘಾವಧಿ ಸೆರೆವಾಸಗಳಲ್ಲಿ ಮತ್ತು ಐದು ದಶಕಗಳ ಕಾಲ ಕಮ್ಯೂನಿಸ್ಟ್ ಚಳುವಳಿಯ ನಾಯಕರಾಗಿ ಹಾಗೂ ಉತ್ತರಪ್ರದೇಶದಲ್ಲಿ ಮೊದಲು ಅವಿಭಜಿತ ಸಿಪಿಐ ಪಕ್ಷದ ಸಂಘಟಕರಾಗಿ, ನಂತರ ಸಿಪಿಐ(ಎಂ) ಪಕ್ಷದ ಸಂಘಟಕರಾಗಿ ಸಧೃಢತೆಯಿಂದ ಅವರು ಜೀವನದುದ್ದಂತ ಮುಂದುವರಿಯಲು ಆ ಗುಣಗಳೇ ಕಾರಣ.

> **ಕಾನ್ಪುರದ ವಿದ್ಯಾರ್ಥಿ ನಿಲಯದಲ್ಲಿ ಶಿವವರ್ಮರವರ ಕೊಠಡಿಯು ಕ್ರಾಂತಿಕಾರಿಗಳ ಸಭಾಸ್ಥಳವಾಗಿತ್ತು. ಅವರು ಓದುತ್ತಿದ್ದುದು, ವಾದಿಸುತ್ತಿದ್ದುದು, ಬಾಂಬ್ ದಾಳಿಗೆ ಯೋಜನೆಗಳನ್ನು ರೂಪಿಸುತ್ತಿದ್ದುದು ಮತ್ತು ಸಮಾಜವಾದದ ಬಗ್ಗೆ ಚರ್ಚಿಸುತ್ತಿದ್ದದ್ದೆಲ್ಲ ಇಲ್ಲಿಯೇ.**

ಚೌರಿಚೌರಾದ ಹಿಂಸಾತ್ಮಕ ಪ್ರಕರಣದ ನೆಪದಲ್ಲಿ ಮಹಾತ್ಮಗಾಂಧಿಯವರು ಅಸಹಕಾರ ಚಳುವಳಿಯನ್ನು ಹಠಾತ್ ಹಿಂತೆಗೆದುಕೊಂಡದ್ದು, ತಮ್ಮದೆಲ್ಲವನ್ನು ತೊರೆದು ಸ್ವಾತಂತ್ರ್ಯ ದಂಗೆಗೆ ಧುಮುಕಿದ್ದ ಶಿವವರ್ಮರಂತಹ ಅಸಂಖ್ಯಾತರಿಗೆ ಆಘಾತ ಮತ್ತು ದಿಗ್ಭ್ರಮೆಯುಂಟು ಮಾಡಿತು. ಬ್ರಿಟಿಷರನ್ನು ಕಿತ್ತೊಗೆಯಲು ಶಸಸ್ತ್ರ ಹೋರಾಟ ಅಗತ್ಯವೆಂದು ನಂಬಿದ್ದ ರಾಷ್ಟ್ರೀಯ ಚಳುವಳಿಯ ಸಮರೋಪಾದಿಯ ವಾಹಿನಿಗೆ ಅವರು ಬಹುಬೇಗ ಸೆಳೆಯಲ್ಪಟ್ಟರು. ಅಹಿಂಸಾವಾದದ ಇತಿಮಿತಿ ಮತ್ತು ಸಂದರ್ಭೋಚಿತ ಶಸ್ತ್ರ ಬಳಕೆ ಬಗ್ಗೆ ಆಳವಾದ ಚಡಪಡಿಕೆ ಅವರಲ್ಲಾಗಲೇ ಆರಂಭವಾಗಿತ್ತು.

ಅಷ್ಟರಲ್ಲಾಗಲೇ ಪ್ರಥಮ ಲಾಹೋರ್ ಪಿತೂರಿ ಮೊಕದ್ದಮೆಯಲ್ಲಿ ಜೀವಾವಧಿ ಶಿಕ್ಷೆಗೊಳಗಾಗಿದ್ದ ಸಚೀಂದ್ರನಾಥ ಸನ್ಯಾಲ್‌ರವರು ಹಿಂದೂಸ್ತಾನ್ ರಿಪಬ್ಲಿಕನ್ ಆರ್ಮಿಯನ್ನು ರಚಿಸಿದ್ದರು. ಕಾನ್ಪುರದಲ್ಲಿ ಈ ಭೂಗತ ಸಂಘಟನೆಯನ್ನು ಸೇರಿದ ಯುವವಿದ್ಯಾರ್ಥಿಗಳಲ್ಲಿ ಶಿವವರ್ಮ ಒಬ್ಬರಾಗಿದ್ದರು. ಆದರೆ 1925ರಲ್ಲಿ ಸಂಘಟನೆಯ ಬಹುತೇಕ ಹಿರಿಯ ನಾಯಕರುಗಳಿಗೆ ಕಕೋರಿ ಪಿತೂರಿ ಪ್ರಕರಣದಲ್ಲಿ ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆ ವಿಧಿಸಿದ್ದರಿಂದ ಈ ಗುಂಪು ಚದುರಿಹೋಯಿತು. ಇದಾದ ನಂತರ ಪಂಜಾಬ್‌ನ ಹೆಚ್‌ಆರ್‌ಎಯ ಮುಂದಾಳು ಸದಸ್ಯರಾದ ಭಗತ್‌ಸಿಂಗ್‌ರನ್ನು ಇವರು ಭೇಟಿ ಮಾಡಿದರು.

ಕಾನ್ಪುರದ ವಿದ್ಯಾರ್ಥಿ ನಿಲಯದಲ್ಲಿ ಶಿವವರ್ಮರವರ ಕೊಠಡಿಯು ಕ್ರಾಂತಿಕಾರಿಗಳ ಸಭಾಸ್ಥಳವಾಗಿತ್ತು. ಅವರು ಓದುತ್ತಿದ್ದುದು, ವಾದಿಸುತ್ತಿದ್ದುದು, ಬಾಂಬ್ ದಾಳಿಗೆ ಯೋಜನೆಗಳನ್ನು ರೂಪಿಸುತ್ತಿದ್ದುದು ಮತ್ತು ಸಮಾಜವಾದದ ಬಗ್ಗೆ ಚರ್ಚಿಸುತ್ತಿದ್ದದ್ದೆಲ್ಲ ಇಲ್ಲಿಯೇ. ಶಿವವರ್ಮರವರು ತಮ್ಮ ನೆನಪುಗಳು ಎಂಬ ಪುಸ್ತಕದಲ್ಲಿ ಹಲವಾರು ಕ್ರಾಂತಿಕಾರಿಗಳ ಒಡನಾಟ ಮತ್ತು ಭಗತ್‌ಸಿಂಗ್‌ರನ್ನು ತಾವು ಭೇಟಿ ಮಾಡಿದ ಮೊದಲ ಕ್ಷಣವನ್ನು ಹಿಡಿದಿಟ್ಟಿದ್ದಾರೆ. ಭಗತ್ ಗುಂಪಿನ ಸದಸ್ಯರಾಗಿದ್ದ ಶಿವವರ್ಮ ಮತ್ತು ಜಯದೇವ್‌ರು ಕಾನ್ಪುರದ ಡಿ.ಎ.ವಿ ಕಾಲೇಜಿನಲ್ಲಿ ಅಭ್ಯಸಿಸುತ್ತಿದ್ದರು. ಇವರೀರ್ವರನ್ನು ನೋಡಲು ಪಂಜಾಬಿನಿಂದ ಯುವಕನೊಬ್ಬ ಬರುತ್ತಾನೆಂದು ದೆಹಲಿಯಲ್ಲಿದ್ದ ಸ್ನೇಹಿತನಿಂದ ಇವರಿಗೆ ಪತ್ರ ಬರುತ್ತದೆ. ಈ ಮನುಷ್ಯನಾರು ಮತ್ತು ನಮ್ಮನ್ನು ಭೇಟಿ ಮಾಡುವ ಉದ್ದೇಶವಾದರೂ ಏನಿದೆಯೆಂದುಕೊಂಡು ಜಯದೇವ್ ಮತ್ತು ಶಿವವರ್ಮರಿಬ್ಬರು ಸಂದೇಹಪಡುತ್ತಾರೆ. ತಕ್ಷಣವೇ ತಮ್ಮ ಕೊಠಡಿಯಿಂದ ಎಲ್ಲ ಕ್ರಾಂತಿಕಾರಿ ಸಾಹಿತ್ಯವನ್ನು ಹೊರಸಾಗಿಸುತ್ತಾ ಅಪರಿಚಿತ ಪಂಜಾಬಿಯುವನಿಗೆ ಏನೂ ಕಾಣದಂತೆ ನಿಗಾವಹಿಸುತ್ತಾರೆ.

ರಂಜಿತ್ ಆಗಿ ಬಂದ ಭಗತ್ ಸಿಂಗ್ ಮಾರನೆಯ ದಿನ ಬೆಳಿಗ್ಗೆ, ಶಿವವರ್ಮರು ತನ್ನ ಅಧ್ಯಯನದಲ್ಲಿ ಮುಳುಗಿದ್ದಾಗ 'ಎತ್ತರದ ಮನುಷ್ಯ', ಬಹಳ ಸುಂದರವಾಗಿರುವ, ಸಣ್ಣ-ಕಣ್ಣುಗಳು, ತೀಕ್ಷ್ಣ ದೃಷ್ಟಿ, ಸಣ್ಣ ಗಡ್ಡ ಮತ್ತು ಸಿಖ್ ಟೋಪ್ಪಿಗೆ ಹೊಂದಿರುವ ಪಂಜಾಬಿ ಬರುತ್ತಾನೆ. ಯಾವುದೇ ಚಡಪಡಿಕೆ ಅಥವಾ ಔಪಚಾರಿಕತೆಯಿಲ್ಲದೆ ಕುಳಿತುಕೊಂಡ ಸಿಖ್ ಯುವಕ ಶಿವವರ್ಮರ ಕೈ ಕುಲುಕಿ ತಾನು ರಂಜಿತ್ ಎಂದು ಪರಿಚಯಿಸಿಕೊಂಡು ಒಂದಷ್ಟು ದಿವಸ ಅವರ ಕೊಠಡಿಯಲ್ಲಿ ಉಳಿದುಕೊಳ್ಳುತ್ತೇನೆಂದು ತಿಳಿಸುತ್ತಾನೆ. ಅವನ ಸ್ನೇಹ ಮನೋಭಾವ ಶಿವವರ್ಮರನ್ನು ಸಮಾಧಾನಗೊಳಿಸಿದರೂ ಸಹ ಜಯದೇವ್ ತನಗೆ ಗೊತ್ತಿಲ್ಲವೆಂದು ಶಿವವರ್ಮ ಸುಳ್ಳು ಹೇಳುತ್ತಾರೆ. ಅವರು ಸುಳ್ಳು ಹೇಳುತ್ತಿರುವುದು ತಿಳಿದು 'ರಂಜಿತ್' ಖಿನ್ನನಾಗುತ್ತಾನೆ. ಇದರಿಂದ ತನ್ನ ನಗು, ಸರಳ ಮಾತುಕತೆ, ಅನೌಪಚಾರಿಕ ಶೈಲಿ ಎಲ್ಲಕ್ಕೂ ಒಮ್ಮೆಲೆ ತಡೆಯೊಡ್ಡಿದಂತೆ ತನ್ನಲ್ಲಿದ್ದ ವಿಕ್ಟರ್ ಹ್ಯೂಗೋರವರ ಪ್ರಸಿದ್ಧ ಕೃತಿ 'ಲೆಸ್ ಮಿಸರಬಲ್ಸ್'ನ್ನು ತೆರೆದು ಓದಲಾರಂಭಿಸುತ್ತಾನೆ.

ಅಂದು ಮಧ್ಯಾಹ್ನ ಕಾಲೇಜಿನ ಮೆಸ್‌ನಲ್ಲಿ ಊಟಕ್ಕಾಗಿ ಶಿವವರ್ಮ 'ರಂಜಿತ್'ನನ್ನು ಕರೆದೊಯ್ಯುತ್ತಾರೆ. ಅಲ್ಲಿದ್ದ ಇನ್ನೊಬ್ಬ ವ್ಯಕ್ತಿಯೆಂದರೆ ಜಯದೇವ್. ಜಯದೇವ್ ಸದ್ದಿಲ್ಲದೆ ಬಂದು ತುಪ್ಪವನ್ನು ಬೇಳೆ ಪಲ್ಯಕ್ಕೆ ಹಾಕುವವರೆಗೂ ರಂಜಿತ್ ಅವನನ್ನು ನೋಡಿರುವುದಿಲ್ಲ. ಆಶ್ಚರ್ಯಚಕಿತರಾಗಿ ನೋಡುವ 'ರಂಜಿತ್' ಆ ವ್ಯಕ್ತಿಯೇ ಜಯದೇವ್ ಎಂದು ಮನಗಾಣುತ್ತಾರೆ. ಶಿವವರ್ಮರ ಬೆನ್ನಿಗೊಂದು ಗುದ್ದುಹಾಕಿ "ನಿನ್ನ ಸ್ನೇಹಿತರನ್ನು ನೀನೇ ಬಚ್ಚಿಟ್ಟುಕೊಳ್ಳಬೇಕೆಂದು ಮಾಡಿದ್ದೀಯೋ?" ಎಂದು ಛೇಡಿಸುತ್ತಾರೆ.

ಅಲ್ಲಿಂದ ಆರಂಭವಾದ ಅವರ ಸ್ನೇಹ, ಅವರು ಅತ್ಯುತ್ತಮ ಸ್ನೇಹಿತರಾಗಿ, ಹತ್ತಿರದ ಕಾಮ್ರೇಡ್‌ಗಳಾಗಿ ಭಗತ್‌ಸಿಂಗ್‌ರನ್ನು ನೇಣಿಗೇರಿಸುವ ಮುನ್ನ ಸೆರೆಮನೆಯ ಸರಳುಗಳ ಹಿಂದೆ ರಂಜಿತ್ ಹೆಸರಿನ ಭಗತ್‌ಸಿಂಗ್‌ರನ್ನು ಕಂಡು ಕಣ್ಣು ಕಿತ್ತುಬರುತ್ತಿದ್ದ ಕಣ್ಣೀರಿನಿಂದ ವಿದಾಯ ಹೇಳುವವರೆಗೂ ಅವರು ಒಬ್ಬನೇ ವ್ಯಕ್ತಿ ಎಂಬಂತೆ ಪ್ರಾಣ ಸ್ನೇಹಿತರಾಗಿದ್ದರು. ಪ್ರಪಂಚದ ಯಾವುದೇ ರಾಷ್ಟ್ರದ ಇತಿಹಾಸದ ಪುಟಗಳನ್ನು ತಿರುವಿ ಹಾಕಿದರೂ ಚಿಕ್ಕ ವಯಸ್ಸಿನ ಇಂತಹ ಅಪ್ರತಿಮ ಕ್ರಾಂತಿಕಾರಿಗಳನ್ನು ಕಾಣುವುದು ವಿರಳವೆಂದೇ ಹೇಳಬಹುದು. ಅಂತಹ ಎಷ್ಟೋ ಹಿರಿಮೆ, ಪರಂಪರೆ ಹೊಂದಿರುವ ಮೈನವಿರೇಳಿಸುವ ಸಾಹಸಗಾಥೆಗಳು ನಮ್ಮ ಸ್ವಾತಂತ್ರ್ಯ ಸಂಗ್ರಾಮದೊಳಗೆ ಹುದುಗಿವೆ.

1928ರ ಹೊತ್ತಿಗೆ, ರಾಷ್ಟ್ರವು ಪ್ರಕ್ಷುಬ್ಧ ಸ್ಥಿತಿಯಲ್ಲಿದ್ದು ಬ್ರಿಟೀಷ್ ವಿರೋಧಿ ಜನತೆಯ ಅಸಹನೆಯು ಕುದಿ ಏರುತ್ತಿತ್ತು. ಕಾನ್ಪುರದ ಕಾಮ್ರೇಡ್‌ಗಳು ಅಸ್ಪಷ್ಟವಾಗಿಯಾದರೂ ನಿಧಾನವಾಗಿ ಸಮಾಜವಾದಿ ಸಿದ್ಧಾಂತದೆಡೆಗೆ ಪ್ರಭಾವಕ್ಕೊಳಗಾಗುತ್ತಿದ್ದರು. ಸುಸಜ್ಜಿತವಾದ ಶಿಸ್ತುಬದ್ಧ ಕ್ರಾಂತಿಕಾರಿಗಳ ಗುಂಪಿನ ಶಸ್ತ್ರಯುದ್ಧದಲ್ಲೇ ಅವರೆಲ್ಲರೂ ನಂಬಿಕೆಯಿಟ್ಟಿದ್ದರು. ಆದರೆ ಭಗತ್‌ಸಿಂಗ್‌ರು ಅಖಿಲ ಭಾರತೀಯ ಸಂಘಟನೆ ಕಟ್ಟುವಲ್ಲಿ ಒತ್ತು ನೀಡಿದರು. ಬಂಗಾಳದ ಅನುಶಿಲನ್ ಮತ್ತು ಜುಗಾಂತರ್, ಪಂಜಾಬ್‌ನ ಗದರ್, ಉತ್ತರಪ್ರದೇಶ ಮತ್ತು ಬಿಹಾರದ ಹಿಂದೂಸ್ತಾನ ರಿಪಬ್ಲಿಕನ್ ಆರ್ಮಿ ಮುಂತಾದವುಗಳು ಸೇರಿದಂತೆ ದೇಶದ ವಿವಿಧ ಭಾಗಗಳಲ್ಲಿ ಅಲ್ಲಿಯವರೆಗೂ ಅವರು ಚದುರಿದ ಗುಂಪುಗಳಂತಿದ್ದರು.

(ಮುಂದುವರಿಯುವುದು)

ಪಂಚಾಯತ್ ಚುನಾವಣೆಗಳು : ಹೊಸ ಬದಲಾವಣೆಯ ಆಶಯ

ಈ ವಾರ ಕರ್ನಾಟಕ ಒಂದು ನೋಟ

— ಎಸ್.ವೈ.ಗುರುಶಾಂತ್

> **ಜನತೆಯ ಹಿತಗಳನ್ನು ಮೂಲೆ ಗುಂಪಾಗಿಸಿ, ಅಭಿವೃದ್ಧಿ ಕಡೆಗಣಿಸಿ ಭ್ರಷ್ಟಾಚಾರದ ಕೂಪಗಳಾಗಿರುವ ಪಂಚಾಯತ್‌ಗಳಲ್ಲಿ ಸ್ಥಾಪಿತ ಹಿತಾಸಕ್ತಿಗಳ ಹುನ್ನಾರಗಳಿಗೆ ತಡೆಯೊಡ್ಡಲು ಪಂಚಾಯತ್‌ಗಳು ಪ್ರತಿರೋಧದ ಕೇಂದ್ರಗಳಾಗುವುದು ಅಗತ್ಯವಿದೆ.**

ಜಿಲ್ಲಾ ಪಂಚಾಯತ್ ತಾಲ್ಲೂಕು ಪಂಚಾಯತ್‌ನ ಚುನಾವಣಾ ಕಣವೀಗ ನಿಚ್ಚಳವಾಗಿದೆ. ಗ್ರಾಮೀಣಾಭಿವೃದ್ಧಿ-ಅಧಿಕಾರ ವಿಕೇಂದ್ರೀಕರಣದ ಆಶಯಗಳ ದಿಶೆಯಲ್ಲಿ ಜನತೆ ತಮ್ಮ ಆಯ್ಕೆ ಮಾಡಿಕೊಳ್ಳಲಿದ್ದಾರೆ. ಇದೊಂದು ವ್ಯಾಪಕವಾದ ಪ್ರಜಾಸತ್ತಾತ್ಮಕ ಪ್ರಕ್ರಿಯೆಯಾಗಿದೆ. ಮತದಾರರನ್ನು ಒಲಿಸಿಕೊಳ್ಳಲು ಸೆಳೆಯಲು ವಿವಿಧ ರಾಜಕೀಯ ಪಕ್ಷಗಳು ಹಣಾಹಣಿಗೆ ಇಳಿದಿದ್ದಾರೆ.

ಕಾಂಗ್ರೆಸ್, ಜೆಡಿ(ಎಸ್) ಮತ್ತು ಬಿಜೆಪಿ ಪಕ್ಷಗಳು ಚುನಾವಣಾ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿವೆ. ಗ್ರಾಮೀಣ ಪ್ರದೇಶದ ಜನರನ್ನು 'ಮೇಲಕ್ಕೆತ್ತಿ' ಸ್ವರ್ಗ ಸೃಷ್ಟಿಸಿಕೊಡುವುದು ಅದರ ಭರವಸೆಗಳಲ್ಲಿದೆ. ಇಂತಹ ಭರವಸೆಗಳನ್ನು ಈಡೇರಿಸುವುದು ಮುಂದಿನ ಮಾತು. ಆದರೆ ಪ್ರಣಾಳಿಕೆಯಲ್ಲಿ ಏನಿದೆ ಎಂಬುದಾದರೂ ಜನರ ನಡುವೆ ವ್ಯಾಪಕವಾಗಿ ಹೋಗಲಿದೆಯೇ, ಅವುಗಳನ್ನು ಕೊಂಡೊಯ್ಯಲು ನಿಜಕ್ಕೂ ಇವರು ಆಸಕ್ತರೇ ಎಂಬುದು ಪ್ರಶ್ನೆಯಾಗಿದೆ. ಬಹುತೇಕ ಜನರತ್ತ ಈ ವಿಷಯಗಳನ್ನು ಕೊಂಡೊಯ್ಯುವುದಿಲ್ಲ. ಚುನಾವಣಾ ಬಳಿಕವೂ ಅದರ ಜಾರಿಯತ್ತ ಹೆಚ್ಚಿನ ಆಸಕ್ತಿ ಇರುವುದಿಲ್ಲ. ನೆನಪೂ ಸಹ ಹಾರಿಹೋಗಿರುತ್ತದೆ. ಪ್ರಕಟಿತ ಧ್ಯೇಯೋದ್ದೇಶಕ್ಕೆ ಕಟಿಬದ್ಧವಾಗುವ ರಾಜಕೀಯ ನಿಲುಮೆ, ಇಚ್ಛಾಶಕ್ತಿ, ಮುಖ್ಯವಾಗಿ ಜನಪರ ಕಾಳಜಿಯಿಲ್ಲವಾದರೆ ಅವೆಲ್ಲಾ ಕೇವಲ ಬಾಯಿಮಾತಿನ ವರಸೆಗಳು. ಚುನಾವಣಾ ಕಣದಲ್ಲಿ



ಪ್ರಸ್ತಾಪಿತವಾಗುವ ವಿಷಯಗಳು ಭಿನ್ನವಾಗಿರುತ್ತವೆ. ಬಹುತೇಕ ಸ್ಥಳೀಯ ಪ್ರಶ್ನೆಗಳು, ಪ್ರಧಾನ, ಇವುಗಳನ್ನು ಹಿಂದಕ್ಕಟ್ಟುವಲ್ಲಿ ಜಾತಿ, ಹಣ, ಹೆಂಡಗಳು, ಎಗ್ಗಿಲ್ಲದೇ ಬಳಸಲ್ಪಟ್ಟು ಬರಬಹುದಾದ ಫಲಿತಾಂಶಗಳನ್ನು ತೇಲು, ಮೇಲು ಮಾಡಿ ಮಣ್ಣುಮುಕ್ಕಿಸುತ್ತವೆ. ಗೆದ್ದುಹೋದ ಮೇಲೆ ಮತದಾರರನ್ನು ಮರೆಯುವ ಪ್ರತಿನಿಧಿಗಳು, ತಮ್ಮ ಆಯ್ಕೆ ಹಾಗೂ ಪ್ರತಿನಿಧಿಗಳನ್ನು ಪ್ರಶ್ನಿಸದ ಮನೋಭಾವ ಪ್ರಜಾಪ್ರಭುತ್ವವನ್ನು ಜೀವಂತಗೊಳಿಸುವಲ್ಲಿ ವಿಫಲವಾಗುತ್ತದೆ.

ಆದರೆ ಎಲ್ಲೆಲ್ಲಿ ಜನತೆಯ ಪ್ರಶ್ನೆಗಳಿಗಾಗಿ, ಅಭಿವೃದ್ಧಿಗಾಗಿ ಜನರ ವ್ಯಾಪಕ ಹೋರಾಟಗಳು ನಡೆದಿವೆಯೋ ಅಲ್ಲಿ ಚುನಾವಣಾ ವರಸೆಗಳು ಅಷ್ಟು ಯಶಸ್ಸು ಕಾಣುವುದಿಲ್ಲ. ಆಳುವ ಸರ್ಕಾರ, ಅಥವಾ ಸಂಸ್ಥೆಗಳ ನೀತಿಗಳೆದುರು ನಡೆವ ಸಂಘರ್ಷವು ರಾಜಕೀಯ ಎಚ್ಚರವನ್ನು ಮೂಡಿಸುತ್ತದೆ. ಎಡಶಕ್ತಿಗಳಿಗೆ ಇದೇ ಆಧಾರ, ಬಲ.

ಮುಂಬರುವ ದಿನಗಳಲ್ಲಿ ಪಂಚಾಯತ್ ಸಂಸ್ಥೆಗಳ ಹಾಗೂ ಸದಸ್ಯರ ಪಾತ್ರ ಮಹತ್ವದ್ದಿದೆ. ವಿಶ್ವಬ್ಯಾಂಕ್, ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳ ನೀತಿಗಳೂ, ಅದನ್ನು ಅನುಸರಿಸುವ ಕೇಂದ್ರ,ರಾಜ್ಯ ಸರ್ಕಾರಗಳು ಜನರ ಮೇಲೆ ಹಾಕುವ ಏಟುಗಳು ಇನ್ನೂ ಆಘಾತಕಾರಿಯಾಗಿ ಹೆಚ್ಚಲಿವೆ. ಇದಕ್ಕೆ ಪ್ರತಿರೋಧ ಒಡ್ಡುವಲ್ಲಿ ತಳಮಟ್ಟದ ಈ ಶಕ್ತಿಯ ಬೆಳವಣಿಗೆ ಅಗತ್ಯವಾದುದು.

ಈ ಪಂಚಾಯತ್ ಚುನಾವಣೆಗಳ ಬಳಿಕ ಬಿಜೆಪಿಯು ರಾಜ್ಯದಲ್ಲಿ ಪ್ರಜ್ವಲಿಸಲಿದೆ ಎಂದು ಅದರ ನಾಯಕರು ಡಂಗೂರ ಹೊಡೆಯುತ್ತಿದ್ದಾರೆ. ಆಂತರಿಕ ಕಲಹಗಳಲ್ಲೇ ಮುಳುಗಿರುವ, ಆರಿಸಿದ ಮತದಾರನ ಹಿತಕ್ಕೆ ಮುಳುವಾಗಿರುವ ಈ ಕೋಮುವಾದಿಗಳ ಕೂಟ ಚುನಾವಣೆಗಳ ಬಳಿಕ ಅದ್ಹೇಗೆ ದಿಢೀರನೆ ಬೆಳಗುವುದೋ? ಮೇಲಾಗಿ ಆ ಪಕ್ಷಗಳಲ್ಲಿನ ಅತೃಪ್ತಿಯ ಲಾಭ ಪಡೆದು ಪಕ್ಷಾಂತರ ಮಾಡಿಸಿಕೊಂಡು ಅಧಿಕಾರ ಲಾಲಸೆಗೆ ಜೋತುಬಿದ್ದಿರುವ ಬಿಜೆಪಿ ಭವಿಷ್ಯ ಮಂಕಾಗುವುದರಲ್ಲಿ ಅನುಮಾನವಿಲ್ಲ. ಈಗಲೂ ಅದು ಬಾಬಾಬುಡನ್‌ಗಿರಿ ವಿಷಯವನ್ನು ಒಳಗೊಂಡು ಕೋಮು ವಿಭಜನೆ, ವಿದ್ವೇಷವನ್ನೇ ಮೂಲ ಬಂಡವಾಳವನ್ನಾಗಿಸಿದೆ. ಇಂತಹ ಕೋಮುವಾದಿ ಫ್ಯಾಸಿಸ್ಟ್ ಸ್ವರೂಪದ ಶಕ್ತಿಗಳಿಗೆ ಕೆಳಹಂತಗಳಲ್ಲಿ ನೆಲೆ ಸಿಗದಂತೆ ಸೋಲಿಸುವುದು ಅತ್ಯಗತ್ಯವಿದೆ. ಜನ ಇತ್ತೀಚಿನ ಬಹುತೇಕ ಚುನಾವಣೆಗಳಲ್ಲಿ ಬಿಜೆಪಿಗೆ ಸೋಲಿನೇಟು ಕೊಟ್ಟಿದ್ದಾರೆ. ಅದು ಮತ್ತೆ ಹಾಗೆಯೇ ತನ್ನ ಜನವಿರೋಧಿ ನೀತಿಗಳಿಂದಾಗಿ ಸೋಲನ್ನಪ್ಪಿದರೂ ಪಾಠ ಕಲಿಯದೇ ಅದೇ ನೀತಿಗಳನ್ನು ಅನುಸರಿಸುತ್ತಿರುವ ಕಾಂಗ್ರೆಸ್‌ಗೂ ತಕ್ಕ ಪಾಠವನ್ನು ಜನತೆ ಕಲಿಸಬೇಕಿದೆ.

ಕೋಮು - ಜನದ್ರೋಹಿ ಆರ್ಥಿಕ ನೀತಿಗಳ ವಿರುದ್ಧ ಹೋರಾಡುತ್ತಿರುವ ದುಡಿವ ಜನರ ಕೈಗೇ ಅಧಿಕಾರ ದಕ್ಕಿಸಿಕೊಳ್ಳಲು ಸೆಣಸುತ್ತಿರುವ ಸಿಪಿಐ(ಎಂ) ಮುಂತಾದ ಎಡ ಶಕ್ತಿಗಳಿಗೆ ಬಲ ಹೆಚ್ಚುವುದು ಅತ್ಯಗತ್ಯವಾಗಿದೆ.

ಈ ಚುನಾವಣೆಗಳ ಫಲಿತಾಂಶವು ರಾಜಕೀಯ ರಂಗದಲ್ಲಿ ಹಲವಾರು ಹೊಸ ಸಂದರ್ಭಗಳನ್ನು ಹುಟ್ಟುಹಾಕಲಿದೆ. ಹೀಗಾಗಿ ಈ ಫಲಿತಾಂಶಗಳಿಗೆ ಅಷ್ಟೇ ಮಹತ್ವವೂ ಇದೆ. ಜನರ ಬಗ್ಗೆ, ಅಭಿವೃದ್ಧಿ ಬಗ್ಗೆ ಅಸಡ್ಡೆ, ವ್ಯಾಪಕ ಭ್ರಷ್ಟಾಚಾರದಲ್ಲಿ ಮುಳುಗೇಳುತ್ತಿರುವ ಅಧಿಕಾರದ ಕೇಂದ್ರಗಳಾಗುವುದನ್ನು ತಡೆಯಲು ನಿರ್ಣಾಯಕವಾಗಿ ಮತ ಹಾಕಬೇಕಾಗಿದೆ.

ನಿರ್ಬಂಧ ಅತ್ಯಗತ್ಯ

ಬಾಬಾಬುಡನ್‌ಗಿರಿ ಹಾಗೂ ಸುತ್ತಲಿನಲ್ಲಿ ಪ್ರಕ್ಷುಬ್ಧತೆ ಏರ್ಪಡುತ್ತಿದೆ. ಬಿಜೆಪಿ ಮೊದಲ ಹಂತದಲ್ಲಿ ರಾಜಕೀಯ ಜಾಥಾ ಮುಗಿಸಿ, ಸಂತರ ಸಮಾವೇಶ ಎಂಬುದನ್ನು ನಡೆಸಿದೆ. ಅಲ್ಲಿ ಸಂಘಪರಿವಾರದ ಅಜೆಂಡಾಗಳನ್ನೇ ಘೋಷಣೆಗಳಾಗಿ ಪ್ರಕಟಿಸಿ, ಸರ್ಕಾರಕ್ಕೆ ಫರ್ಮಾನು ಹೊರಡಿಸಿದೆ. ಅದರಂತೆ ಗುಹೆಯಲ್ಲಿ ದತ್ತ ವಿಗ್ರಹ ಸ್ಥಾಪನೆ, ಹವನ,ಹೋಮ, ವೈದಿಕ ರೀತ್ಯಾ ಪೂಜೆ, ಅರ್ಚಕರ ನೇಮಕ ಅಂತಿಮವಾಗಿ ದರ್ಗಾ ಹಾಗೂ ಮುಜಾವರ್‌ರನ್ನು ತೆಗೆದುಹಾಕುವುದು, ಸಾಮರಸ್ಯದ ಕೇಂದ್ರವನ್ನು ವೈದಿಕ ಆಚರಣೆಯ ಕೇಂದ್ರವನ್ನಾಗಿ ಮಾಡುವುದು. ಇದಕ್ಕಾಗಿ 13ರಂದು ಅನುಸೂಯದೇವಿ ಪೂಜೆ, ಗಣಪತಿ ಹೋಮ, 14ರಂದು ದುರ್ಗಾ ಹೋಮ, 15ರಿಂದ ದತ್ತ ಹೋಮ ಹಾಗೂ ಧಾರ್ಮಿಕ ಸಭೆ, ದತ್ತ ಮೆರವಣಿಗೆ ಇವು ಕಾರ್ಯಕ್ರಮಗಳು. ಇವಾವುಗಳು ನ್ಯಾಯಾಲಯದ ತೀರ್ಪಿನಂತೆ 1975ರ ಹಿಂದೆ ಇರದಿದ್ದ ಆಚರಣೆಗಳು. ಇದಕ್ಕಾಗಿ ಸಂಘಪರಿವಾರ, ಬಜರಂಗದಳದ ಮೂಲಕ ತಯಾರಿಗೆ ಇಳಿದಿದೆ. ಈ ಪ್ರಯತ್ನಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಆದ್ದರಿಂದ ಈ ಕಾರ್ಯಕ್ರಮವನ್ನು ನಿರ್ಬಂಧಿಸುವುದು ನಿಷೇಧಿಸುವುದು ಅತ್ಯಗತ್ಯವಾಗಿದೆ. ಆದ್ದರಿಂದ ಹೆಚ್ಚು ವಿಳಂಬಿಸದೆ ಸರ್ಕಾರ ನಿರ್ಬಂಧದ ಪ್ರಕಟಣೆ ಕೂಡಲೇ ಹೊರಡಿಸಬೇಕು.

ಕಡಿವಾಣ ಅಗತ್ಯ

ಕನ್ನಡವನ್ನು ಶಾಸ್ತ್ರೀಯ ಭಾಷೆಯಾಗಿ ಪರಿಗಣಿಸಬೇಕೆಂದು ಕೇಂದ್ರ ಸರ್ಕಾರವನ್ನು ಆಗ್ರಹಿಸಿ ಹಿರಿಯಸಾಹಿತಿ 'ದೇ.ಜ.ಗೌ'ರವರು ಮೈಸೂರಿನಲ್ಲಿ ನಿರಶನ ನಡೆಸುತ್ತಿದ್ದ ಸಂದರ್ಭದಲ್ಲಿ ಬೆಂಬಲಿಸಿ ಮಾತನಾಡುತ್ತಿದ್ದ ಖ್ಯಾತ ವಿಚಾರವಾದಿ ಪ್ರೊ.ರಾಮದಾಸ್‌ರವರ ಬಗ್ಗೆ ಅತ್ಯಂತ ಕೀಳು ಭಾಷೆಯಿಂದ ಬೈಯ್ದು ಹೊರನಡೆಯುವಂತೆ ಮಾಡಿದ ಘಟನೆ ನಡೆದಿದೆ. ಇದನ್ನು ನಡೆಸಿದ್ದು ಕನ್ನಡದ ಬಗ್ಗೆ ಗುತ್ತಿಗೆ ಹಿಡಿದಿರುವ ಕರ್ನಾಟಕ ರಕ್ಷಣಾ ವೇದಿಕೆಯವರು. ಇದು ಖಂಡನೀಯ. ಕನ್ನಡ, ಕರ್ನಾಟಕದ ಅಭಿವೃದ್ಧಿಯ ಕುರಿತಂತೆ ಮಾತನಾಡಿದ ರಾಮದಾಸ್ ಭಾಷೆ ಹಾಗೂ ಅಭಿವೃದ್ಧಿಯ 'ಮಸಾಲೆದೋಸೆ' ಮಾತುಗಳಿಂದ ಆಗುವುದು ಮಸಿ ಬಳಿಯುವುದರಿಂದ ಆಗದು ಎಂದು ನಿಷ್ಠುರ ಸತ್ಯವನ್ನು ನುಡಿದಿದ್ದಾರೆ. ಇದಕ್ಕೆ ರಕ್ಷಣಾ ವೇದಿಕೆ ಪುಂಡರು ಗಲಭೆ ಎಬ್ಬಿಸಿದ್ದಾರೆ, ಬೆದರಿಸಿದ್ದಾರೆ.

ರಾಮದಾಸ್‌ರವರ ಅಭಿಪ್ರಾಯಗಳ ಬಗ್ಗೆ ಭಿನ್ನ ಅಭಿಪ್ರಾಯ ಇರಬಹುದು. ಆದರೆ ಅದನ್ನು ತಡೆಯುವುದು ಅಪ್ರಜಾಸತ್ತಾತ್ಮಕವಾದುದು. ವೇದಿಕೆಯ ಯತ್ನಗಳು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಹಲ್ಲೆಯಾಗಿದೆ. ರಕ್ಷಣಾ ವೇದಿಕೆ ನಾಗರೀಕ ಕಾನೂನು ನೀತಿ ಸಂಹಿತೆಗಳನ್ನು ಧಿಕ್ಕರಿಸಿ ತಾವೇ ಆಜ್ಞೆಗಳನ್ನು ಜಾರಿಗೊಳಿಸುವ ಸಂವಿಧಾನೇತರ ಶಕ್ತಿಯಾಗಿ ವರ್ತಿಸುತ್ತಿದೆ. ಇದಕ್ಕೆ ಕಡಿವಾಣ ಹಾಕಲೇಬೇಕು.

ಇಷ್ಟೆಲ್ಲಾ ನಡೆಯುವಾಗ ಕಸಾಪದ ಅಧ್ಯಕ್ಷ ಪ್ರೊ.ಚಂಪಾ ಅಲ್ಲಿದ್ದರೂ ರಾಮದಾಸ್‌ರವರ ಅಭಿವ್ಯಕ್ತಿಗೆ ಅಡ್ಡಿ ಬರದಂತೆ ಮಧ್ಯಪ್ರವೇಶಿಸಲಿಲ್ಲ, ಮಾತ್ರವಲ್ಲ ಅವರೂ ರಾಮದಾಸ್‌ರವರ ಬಾಯಿಗೆ ಮಸಾಲೆ ಮುರಿದಿಕ್ಕುವ ಹಳೇ ಖಯಾಲಿಯ ಜೋಕ್ ಹಾರಿಸಿದರು. ತುರ್ತು ಪರಿಸ್ಥಿತಿಯಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹರಣ ಮಾಡಿದುದರ ವಿರುದ್ಧ ಜೈಲು ಕಂಡುಬಂದ ಚಂಪಾರವರೇ ಹೀಗೆ ಮಾಡಿದ್ದು, ರಕ್ಷಣಾ ವೇದಿಕೆಯವರಂತೆ ಆಡಿದ್ದು ಶೋಭೆ ತರುವ ವಿಷಯವಲ್ಲ.ರಕ್ಷಣಾ ವೇದಿಕೆಯ ಇಂತಹ ಕೃತ್ಯಗಳಿಗೆ ಕಡಿವಾಣ ಅಗತ್ಯ.

ಪ್ರತಿಗಾಮಿ 'ವಿಶ್ವ ವಿದ್ಯಾಲಯ ಕಾಯ್ದೆ' ತಿದ್ದುಪಡಿ

'ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ'ಗೆ ಸರ್ಕಾರವು ತಿದ್ದುಪಡಿ ತಂದು ವಿಶ್ವ ವಿದ್ಯಾಲಯದ ನೀತಿ ನಿರೂಪಕ ಅಂಗಗಳಾದ ಸಿಂಡಿಕೇಟ್-ಶೈಕ್ಷಣಿಕ ಪರಿಷತ್(ಅಕಾಡೆಮಿಕ್ ಕೌನ್ಸಿಲ್)ಗಳಿಗೆ ನಾಮಕರಣಗೊಳ್ಳುವ ಸದಸ್ಯರ ಅರ್ಹತೆಯನ್ನು ಈಗಿರುವ 'ಶಿಕ್ಷಣ ತಜ್ಞರು' ಎಂಬುದಕ್ಕೆ ಬದಲಿಗೆ 'ಶಿಕ್ಷಣಕ್ಕೆ ಸಲ್ಲಿಸಿರುವ ಸೇವೆ ಅಥವಾ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವವರು' ಎಂದು ಬದಲಿಸಲು ತೀರ್ಮಾನಿಸಿದೆ. ಇದು ಒಂದು ಅತ್ಯಂತ ಪ್ರಜಾಸತ್ತೆಯ ವಿರೋಧಿಯಾದ ಮತ್ತು ಶಿಕ್ಷಣ ವಿರೋಧಿಯಾದ ಕ್ರಮವಾಗಿದೆ.

ನಾಮಕರಣದ ಅರ್ಹತೆಯು 'ಶಿಕ್ಷಣ ತಜ್ಞರು' ಎಂದೇ ಇದ್ದಲ್ಲಿ, ಅಧಿಕಾರಸ್ಥ ರಾಜಕಾರಣಿಗಳ ಹಿಂಬಾಲಕರನ್ನು ನಾಮಕರಣ ಮಾಡಲು ತೊಡಕಾಗುತ್ತದೆ ಎಂಬುದು ಈ ತಿದ್ದುಪಡಿಯ ಹಿಂದಿನ ಪ್ರೇರಣೆ. ವಿ.ವಿ. ಕಾಯ್ದೆಯಲ್ಲಿ ಶಿಕ್ಷಣ ತಜ್ಞರು ಎಂದು ಇದ್ದಾಗಲೂ ಸಹ ಮಂತ್ರಿ ಮಹೋದಯರ ಬಾಲಂಗೋಚಿಗಳು ಮತ್ತು ಸಂಬಂಧಿಕರನ್ನು ಈ ಹಿಂದೆಯೂ ತುಂಬಲಾಗಿದೆ. ವಿಶ್ವ ವಿದ್ಯಾಲಯದ ಶಿಕ್ಷಣದ ಗುಣಮಟ್ಟ ಕುಸಿದು ವಿ.ವಿ.ಯು ಭ್ರಷ್ಟತೆಯ ಕೂಪಗಳಾಗಲು ಈ ನಾಮಕರಣಗಳ ಕೊಡುಗೆ ಕಡಿಮೆ ಏನಿಲ್ಲ.

ಇತ್ತೀಚೆಗೆ ರಾಜ್ಯ ಸರ್ಕಾರದ ಇಂತಹ ನಾಮಕರಣದ ಸೂಚನೆಗೆ ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಎಂ.ಎಸ್.ತಿಮ್ಮಪ್ಪನವರು - ಸರ್ಕಾರ ಸೂಚಿಸುತ್ತಿರುವವರಲ್ಲಿ ಹಲವರು ಶಿಕ್ಷಣ ತಜ್ಞರಲ್ಲ ಎಂಬ ನೆಲೆಯಲ್ಲಿ ವಿರೋಧಿಸಿ, ಸೂಚನೆಯನ್ನು ವಾಪಸ್ ಕಳುಹಿಸಿದ್ದರು. ಕೊನೆಗೆ ಸರ್ಕಾರ ಈ ಸೂಚನೆಯನ್ನು ವಾಪಸ್ ಪಡೆದುಕೊಳ್ಳಬೇಕಾಯಿತು.

ಹಿಂಬಾಗಿಲಿನಿಂದ ಸಾಧಿಸಲಾಗದ್ದನ್ನು ಈಗ ಮುಂಬಾಗಿಲು ಒಡೆದೇ ಸಾಧಿಸುತ್ತೇನೆ ಎಂದು ಸರ್ಕಾರ ಪ್ರಯತ್ನಿಸುತ್ತಿದೆ. ಈ ಒಟ್ಟು ತಿಕ್ಕಾಟಗಳಲ್ಲಿ ಸಮ್ಮಿಶ್ರ ಸರ್ಕಾರದ ಆಂತರಿಕ ವೈರುಧ್ಯಗಳೂ ಕೆಲಸ ಮಾಡುತ್ತಿರುವಂತೆ ತೋರುತ್ತಿದೆ.

ಹಿಂದೆ ಸೆನೆಟ್-ಸಿಂಡಿಕೇಟ್ ಅಕಾಡೆಮಿಕ್ ಕೌನ್ಸಿಲ್‌ಗಳಿಗೆ ಚುನಾಯಿತ ಪ್ರಾತಿನಿಧ್ಯ ರದ್ದು ಮಾಡುವಾಗ ಚುನಾಯಿತ ಪ್ರತಿನಿಧಿಗಳಿಂದ ವಿ.ವಿ. ಗುಣಮಟ್ಟ ಹಾಳಾಗಿದೆ, ಭ್ರಷ್ಟಾಚಾರ ಹೆಚ್ಚಾಗಿದೆ ಎಂದು ವಾದಿಸಲಾಗಿತ್ತು. ಹಾಗಿದ್ದರೆ ಈಗ ನಡೆಯುತ್ತಿರುವುದು ಏನೆಂದು ಸರ್ಕಾರ ಉತ್ತರಿಸಬೇಕಿದೆ.

ಸರ್ಕಾರದ ಈ ಕ್ರಮ ವಿದ್ಯಾರ್ಥಿಗಳು ಮತ್ತು ಶಿಕ್ಷಣ ಪ್ರೇಮಿಗಳ ದೊಡ್ಡ ಪ್ರತಿಭಟನೆಗೆ ವೇದಿಕೆಯನ್ನು ಸಜ್ಜುಗೊಳಿಸಿದೆ. ಭಾರತ ವಿದ್ಯಾರ್ಥಿ ಫೆಡರೇಷನ್(SFI), ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (DYFI) ಗಳು ಈಗಾಗಲೇ ಈ ಕ್ರಮನ್ನು ಖಂಡಿಸಿವೆ. ಪ್ರತಿಭಟನೆಯ ಸಿದ್ಧತೆ ನಡೆಸಿವೆ.

ಸೀಮೆ ಎಣ್ಣೆ, ಅಡುಗೆ ಅನಿಲ ಕೃತಕ ಅಭಾವ ಮತ್ತು ಬೆಲೆ ಏರಿಕೆ ನಿಗ್ರಹಿಸಲು ಮಹಿಳೆಯರ ಆಗ್ರಹ

ಡಿಸೆಂಬರ್ 1,2005 ರಂದು ಬೆಳಿಗ್ಗೆ ಬೆಂಗಳೂರಿನ ವಿವಿಧ ಭಾಗಗಳಿಂದ ಬಂದ ಮಹಿಳೆಯರು ಕಾರ್ಪೊರೇಷನ್ ಬಳಿಯ ಬನಪ್ಪ ಮೈದಾನದಲ್ಲಿ ಸೇರಿದರು. ಮೆರವಣಿಗೆಯಾಗಿ ಸಾಗಿ ಜಿಲ್ಲಾಧಿಕಾರಿಗಳ ಕಛೇರಿಗೆ ಬಂದರು. ಅವರು ಸುಮ್ಮನೆ ಬರಲಿಲ್ಲ. ನಮ್ಮ ತಲೆಗಳ ಮೇಲೆ ಸೌದೆಯ ಒಲೆಗಳನ್ನೆ ಹೊತ್ತು ಬಂದರು. ದಾರಿಯುದ್ದಕ್ಕೂ ಧಿಕ್ಕಾರ-ಘೋಷಣೆ, ಸೀಮೆ ಎಣ್ಣೆ ಅಡುಗೆ ಅನಿಲ ಪೂರೈಕೆ ಕಡಿತಗೊಳಿಸಿ ಕಾಳಸಂತೆ ಮಾರಾಟಕ್ಕೆ ಹಾಗೂ ಬೆಲೆ ಏರಿಕೆಗೆ ಅವಕಾಶ ನೀಡುತ್ತಿರುವ ಕೇಂದ್ರ, ರಾಜ್ಯ ಸರ್ಕಾರಗಳನ್ನು ತರಾಟೆ ತೆಗೆದುಕೊಂಡರು.

ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಅವರು ಮಾಡಿದ್ದೇನು?

ಒಲೆಗಳನ್ನು ಕಛೇರಿಯ ಮುಂಭಾಗದಲ್ಲಿಟ್ಟವರೇ, ಸೌದೆಯನ್ನು ಒಟ್ಟಿ ಬೆಂಕಿ ಇಟ್ಟರು. ನೀರಿನ ಪಾತ್ರೆ ಇಟ್ಟು ನೀರು ಕಾಸಿದರು. ಇದು ಸಾಂಕೇತಿಕ ಪ್ರತಿಭಟನೆ. ಸೀಮೆ ಎಣ್ಣೆ, ಗ್ಯಾಸ್ ಇಲ್ಲದಿದ್ದರೆ ಜನರು ಅದರಲ್ಲಿಯೂ ಮಹಿಳೆಯರು ಪಡಬೇಕಾದ ಪಾಡೇನು ಎಂದು ಅಧಿಕಾರಸ್ಥರಿಗೆ ಅಧಿಕಾರಿಗಳಿಗೆ ಮನವರಿಕೆ ಮಾಡಿಕೊಡಲು ಈ ಪ್ರತಿಭಟನೆ. ಇದನ್ನು ಉದ್ಘಾಟಿಸಿದವರು ಅ.ಭಾ. ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಎಸ್.ವಿಮಲ. ಸಂಘಟನೆಯ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಗೌರಮ್ಮ ಮುಂತಾದವರು ಈ ಸಂದರ್ಭಧಲ್ಲಿ ಮಾತನಾಡಿದರು.

ಕೇಂದ್ರ ಸರ್ಕಾರವು ಇತ್ತೀಚೆಗೆ ಪಡಿತರ ಅಂಗಡಿಗಳಿಗೆ ಸೀಮೆ ಎಣ್ಣೆ ಪೂರೈಕೆಯಲ್ಲಿ ಕಡಿತ ಮಾಡಿದೆ. ಇದರಿಂದಾಗಿ ತೀವ್ರ ಕೊರತೆಯುಂಟಾಗಿದ್ದು, ಬೆಲೆಯಲ್ಲಿ ಕೂಡಾ ಏರಿಕೆಯಾಗಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯಲ್ಲಿ ಏರಿಕೆಯಾಗಿದೆ ಎಂಬ ಸಬೂಬು ಹೇಳಿ, ಎಣ್ಣೆ ಕಂಪನಿಗಳಿಗಾಗುತ್ತಿರುವ ನಷ್ಟ ತುಂಬಲು ಈ ಬೆಲೆ ಏರಿಕೆ ಅನಿವಾರ್ಯ ಎಂದು ಕೇಂದ್ರ ಸರ್ಕಾರ ಹೇಳುತ್ತಿದೆ. ಅಲ್ಲದೇ ಸೀಮೆ ಎಣ್ಣೆ ಮತ್ತು ಅಡುಗೆ ಅನಿಲಗಳಿಗೆ ವಿವಿಧ ಹಂತದ ಬೆಲೆ ನಿಗದಿಯ ಪ್ರಸ್ತಾಪವೂ ಸರ್ಕಾರದ ಮುಂದಿದೆ. ಏನೇ ಇದ್ದರೂ ಜನಸಾಮಾನ್ಯರ ಪ್ರಾಣ ಹಿಂಡುವ ಬದಲು ಸರ್ಕಾರ ತೆರಿಗೆ ವಿಧಾನದಲ್ಲಿ ಮಾರ್ಪಾಟು, ಮುಂತಾಗಿ ಪರ್ಯಾಯ ಮಾರ್ಗಗಳನ್ನು ಯೋಚಿಸಬೇಕು ಎಂದು ಈ ಮುಖಂಡರುಗಳು ಸರ್ಕಾರಗಳನ್ನು ಒತ್ತಾಯಿಸಿದರು.

ಜನರ ಜೀವನಾವಶ್ಯಕ ಇಂಧನಗಳಾದ ಸೀಮೆ ಎಣ್ಣೆ, ಅಡುಗೆ ಅನಿಲಗಳು ಸರಿಯಾಗಿ ಪೂರೈಕೆಯಾಗದೆ ತೀವ್ರ ಸಮಸ್ಯೆಯಾಗಿದೆ. ಕೃತಕ ಅಭಾವ ಸೃಷ್ಟಿಸಿ ಲಾಭ ಕೊಳ್ಳೆ ಹೊಡೆಯುವ ಕಾಳಸಂತೆಕೋರರ ಪಿತೂರಿಗಳಿಂದಾಗಿ ಬೆಲೆಗಳೂ ಗಗನಕ್ಕೇರುತ್ತಿವೆ. ಇದರೊಂದಿಗೆ ಇನ್ನಿತರ ನಿತ್ಯ ಅಗತ್ಯ ವಸ್ತುಗಳ ಬೆಲೆಗಳೂ ಏರುತ್ತಿದ್ದು, ಜನರನ್ನು ಅದರಲ್ಲಿಯೂ ಮಹಿಳೆಯರನ್ನು ತೀವ್ರ ಸಂಕಷ್ಟಕ್ಕೆ ದೂಡಿವೆ. ಈ ಸಮಸ್ಯೆಗಳ ವಿರುದ್ಧ ರಾಷ್ಟ್ರವ್ಯಾಪಿ ಪ್ರತಿಭಟನೆಯ ಭಾಗವಾಗಿ ಬೆಂಗಳೂರಿನಲ್ಲಿ ನಡೆದ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಪ್ರತಿಭಟನೆ ವಿನೂತನವಾಗಿತ್ತು.

ಸೀಮೆ ಎಣ್ಣೆ ಅಭಾವದಿಂದಾಗಿ-ಲೀಟರ್ ಒಂದಕ್ಕೆ 35ರಿಂದ 50ರೂ.ಗಳವರೆಗೆ ಕಾಳಸಂತೆಯಲ್ಲಿ ಮಾರಾಟವಾಗುತ್ತಿದೆ. ಎಂದರೆ 10 ಲೀಟರ್ ಸೀಮೆ ಎಣ್ಣೆ ಬೆಲೆ ಒಂದು ಅಡುಗೆ ಅನಿಲ ಸಿಲಿಂಡರ್‌ಗಿಂತ ಹೆಚ್ಚು. ಅದರೊಂದಿಗೆ ಅಡುಗೆ ಅನಿಲ ಕೂಡ ಇದ್ದಕ್ಕಿದ್ದಂತೆ ಮಾಯವಾಗಿದೆ. ಈ ರೀತಿಯ ಅಭಾವಗಳು ಈಗಾಗಲೇ ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ಮಹಿಳೆಯರಿಗೆ ಗಾಯದ ಮೇಲೆ ಉಪ್ಪೆರಚಿದಂತಾಗಿದೆ. ಇದೇ ಸಂದರ್ಭದಲ್ಲಿ ಬೆಲೆ ಏರಿಕೆ ನಿಯಂತ್ರಿಸಿ ಕಾಳಸಂತೆಕೋರರನ್ನು ಹತ್ತಿಕ್ಕುವ ಬದಲು ಕೇಂದ್ರ ಪೆಟ್ರೋಲಿಯಂ ಖಾತೆ ಮಂತ್ರಿ ಮಣಿಶಂಕರ್ ಅಯ್ಯರ್‌ರವರು ಮಹಿಳೆಯರು ಸೀರೆ, ಬಟ್ಟೆಗಳ ಮೇಲೆ ಮಾಡುವ ವೆಚ್ಚ ಕಡಿತ ಮಾಡಿದರೆ ರೂ.100 ಸಿಲಿಂಡರ್ ಬೆಲೆ ಹೆಚ್ಚಳ ಭರಿಸಬಹುದು ಎಂದು ಹೇಳಿಕೆ ನೀಡಿದ್ದಾರೆ. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಇದನ್ನು ಖಂಡಿಸುತ್ತದೆ, ಒಪ್ಪುವುದಿಲ್ಲ ಎಂದು ಈ ಮುಖಂಡರು ಸ್ಪಷ್ಟಪಡಿಸಿದರು.



ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಡಿಸೆಂಬರ್ 1,2005ನ್ನು ಬೆಲೆ ಏರಿಕೆ ವಿರೋಧಿ ರಾಷ್ಟ್ರೀಯ ಬೇಡಿಕೆ ದಿನವನ್ನಾಗಿ ಘೋಷಿಸಿದ್ದು ಕೇಂದ್ರ ಸರ್ಕಾರ ತಕ್ಷಣ ಮಧ್ಯ ಪ್ರವೇಶಿಸಿ ಸಾರ್ವಜನಿಕ ಪಡಿತರ ವ್ಯವಸ್ಥೆ ಮೂಲಕ ಸೀಮೆ ಎಣ್ಣೆ ವಿತರಿಸುವಂತೆ, ಅಡುಗೆ ಅನಿಲವನ್ನು ಸಮರ್ಪಕವಾಗಿ ಸಬ್ಸಿಡಿ ದರದಲ್ಲಿ ಎಲ್ಲರಿಗೂ ಪೂರೈಸಬೇಕೆಂದು ಮುಖಂಡರು ಆಗ್ರಹಿಸಿದರು. ನಂತರ ಈ ಕೆಳಕಂಡ ಬೇಡಿಕೆಗಳನ್ನೊಳಗೊಂಡ ಮನವಿ ಪತ್ರವನ್ನು ಜಿಲ್ಲಾಧಿಕಾರಿಗಳಿಗೆ ಅರ್ಪಿಸಲಾಯಿತು.

ಬೇಡಿಕೆಗಳು

- ಕಡಿವಾಣವಿಲ್ಲದೆ ಏರುತ್ತಿರುವ ಜೀವನಾವಶ್ಯಕ ಬೆಲೆ ನಿಯಂತ್ರಿಸಬೇಕು.
- ಸೀಮೆ ಎಣ್ಣೆಯನ್ನು ಎಲ್ಲಾ ಪಡಿತರ ಅಂಗಡಿಗಳಲ್ಲಿ ಸಮರ್ಪಕ ಹಾಗೂ ಸಕಾಲಿಕವಾಗಿ ವಿತರಿಸಬೇಕು.
- ಕಾಳಸಂತೆಯಲ್ಲಿ ಸೀಮೆ ಎಣ್ಣೆ ಮಾರಾಟ ನಿಗ್ರಹಕ್ಕೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು.
- ಯಾವುದೇ ಷರತ್ತಿಲ್ಲದೇ ಎಲ್ಲರಿಗೂ ಅಡುಗೆ ಅನಿಲ ಸಬ್ಸಿಡಿ ದರದಲ್ಲಿ ವಿತರಣೆಯಾಗಬೇಕು.
- ರಾಜ್ಯ ಸರ್ಕಾರ ಪ್ರಸ್ತಾಪಿಸುತ್ತಿರುವ ವಿದ್ಯುತ್ ದರ ಏರಿಕೆ ಕೈಬಿಡಬೇಕು.


ಸಂಘಟನೆಯ ಜಿಲ್ಲಾ ಅಧ್ಯಕ್ಷೆ ಸುನಂದಾ, ರಾಜ್ಯ ಸಹ ಕಾರ್ಯದರ್ಶಿ ಕೆ.ಎಸ್.ಶಾರದಾ, ಕೆ.ಎಸ್.ಲಕ್ಷ್ಮಿ, ಯಶೋದಮ್ಮ ಮುಂತಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

■ **ಕೆ.ಎಸ್.ಶಾರದಾ**

ರಾಜ್ಯ ಸ್ವರೂಪ ಪಡೆದ ಆಟೋರಿಕ್ಷಾ ಚಾಲಕರ ಚಳುವಳಿ

ದರ ಪರಿಷ್ಕರಣೆ ಹಾಗೂ ಜೀವನ ಭದ್ರತೆಗೆ ಒತ್ತಾಯ

ಪೆಟ್ರೋಲ್, ಡೀಸೇಲ್, ಗ್ಯಾಸ್ ದರಗಳು ದೊಡ್ಡ ಪ್ರಮಾಣದಲ್ಲಿ ಏರಿದರೂ ಆಟೋರಿಕ್ಷಾಗಳ ದರಗಳನ್ನು ಕನಿಷ್ಟ ದರಗಳನ್ನು ಏರಿಸಲಾಗಿಲ್ಲ. ದುಡಿದದ್ದೆಲ್ಲಾ 'ಕೈಗೆ,ಬಾಯಿಗೆ' ಮಾತ್ರ ಸಾಕಾಗುತ್ತದೆಂಬಂತಿದ್ದ ಈ ಶ್ರಮಿಕ ವರ್ಗದ ಬದುಕು ಈಗ ಮತ್ತಷ್ಟು ದುಸ್ತರವಾಗಿದೆ. ಜೀವನ ಭದ್ರತೆಯಿಲ್ಲದೆ ಅತಂತ್ರ ಸ್ಥಿತಿಯಲ್ಲಿರುವ ಆಟೋರಿಕ್ಷಾ ಚಾಲಕರ ಸಂಘಟನೆಗೆ ರಾಜ್ಯವ್ಯಾಪಿ ಸ್ವರೂಪ ನೀಡುವ ಪ್ರಯತ್ನಗಳು ಸಾಗಿವೆ. ಇದೇ ನವೆಂಬರ್ 29,2005ರಂದು ರಾಜ್ಯವ್ಯಾಪಿ ನಡೆದ ಚಳುವಳಿಯ ಮೂಲಕ ಆಟೋರಿಕ್ಷಾ ಚಾಲಕರ ಬದುಕಿನ ಭದ್ರತೆಗೆ ಅಗತ್ಯ ಕ್ರಮ ಕೈಗೊಳ್ಳಲು ಸರ್ಕಾರವನ್ನು ಆಗ್ರಹಿಸಲಾಗಿದೆ.



ಆಟೋರಿಕ್ಷಾ ಮೀಟರ್ ದರಗಳನ್ನು ಪೆಟ್ರೋಲಿಯಂ ಉತ್ಪನ್ನಗಳ ದರ ಏರಿಕೆಯ ಹೊರೆಯನ್ನು ಸರಿದೂಗಿಸುವಂತೆ ಪರಿಷ್ಕರಿಸಬೇಕು. ಆಟೋರಿಕ್ಷಾ ಚಾಲಕರಿಗೆ ಕಲ್ಯಾಣ ಮಂಡಳಿ ರಚಿಸಬೇಕು. ಆ ಮೂಲಕ ಚಾಲಕರಿಗೆ ಪಿಂಚಣಿ, ಮಕ್ಕಳಿಗೆ ವಿದ್ಯಾರ್ಥಿ ವೇತನದ ಸೌಲಭ್ಯಗಳನ್ನು ನೀಡಬೇಕು. ಅಪಘಾತದಲ್ಲಿ ಚಾಲಕರು ಮಡಿದಲ್ಲಿ ಈಗ 50,000.00 ಇರುವ 'ಅಪಘಾತ ಪರಿಹಾರ ನಿಧಿ'ಯ ಪರಿಹಾರ ಮೊತ್ತವನ್ನು 1 ಲಕ್ಷಕ್ಕೇರಿಸಬೇಕು. ಚಾಲಕರು ಸಹಜ ಮರಣ ಹೊಂದಿದರೂ ಸಹ ಚಾಲಕನ ಕುಟುಂಬಕ್ಕೆ 50,000/- ರೂಗಳ ಪರಿಹಾರ ನೀಡಬೇಕು, ಚಾಲಕರಿಗೆ ಇ.ಎಸ್.ಐ ಸೌಲಭ್ಯ ಒದಗಿಸಬೇಕು. ಸಾರಿಗೆ ಇಲಾಖೆ ಅಧಿಕಾರಿಗಳ ಮತ್ತು ಪೊಲೀಸರ ಕಿರುಕುಳ ತಪ್ಪಿಸಬೇಕು. ಆಟೋ ಚಾಲಕರಿಗೆ ಬಡತನ ರೇಖೆಗಿಂತ ಕಡಿಮೆ ವರಮಾನದವರಿಗೆ ಕೊಡಲಾಗುವ ಹಳದಿ ಪಡಿತರ ಚೀಟಿ ನೀಡಬೇಕು, ಇತ್ಯಾದಿ ಹಲವು ಬೇಡಿಕೆಗಳ ಆಧಾರದಲ್ಲಿ ಕರ್ನಾಟಕ ರಾಜ್ಯ ಆಟೋರಿಕ್ಷಾ ಚಾಲಕರ ಒಕ್ಕೂಟದ ಸಂಘಟನಾ ಸಮಿತಿಯ ಕರೆಯಂತೆ ದಿನಾಂಕ 29.11.2005ರಂದು ರಾಜ್ಯಾದ್ಯಂತ ಆಟೋರಿಕ್ಷಾ ಚಾಲಕರ ಬೇಡಿಕೆ ದಿನಾಚರಣೆಯನ್ನು ಆಚರಿಸಲಾಗಿದೆ.

ಬೇಡಿಕೆ ದಿನಾಚರಣೆಯ ಭಾಗವಾಗಿ ಎಲ್ಲೆಡೆ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಗಿದೆ.

ಬೆಂಗಳೂರು (ಜಿಲ್ಲೆ)ಯಲ್ಲಿ ಕಾಂ.ಹೆಚ್.ಜಿ.ಶ್ರೀನಿವಾಸಮೂರ್ತಿ ಕಾರ್ಯಾಧ್ಯಕ್ಷರ ನೇತೃತ್ವದಲ್ಲಿ ಒಟ್ಟು 150 ಜನ ಚಾಲಕರು ಜಿಲ್ಲಾಧಿಕಾರಿ ಕಛೇರಿ ಮುಂದೆ ಧರಣಿ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಗಿದೆ.

ಹೊಸಪೇಟೆಯಲ್ಲಿ ಕಾಂ.ಪ್ರಸನ್ನಕುಮಾರ್ ಸಿಐಟಿಯು ರಾಜ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ 400 ಜನ ಚಾಲಕರು ಜಿಲ್ಲಾಧಿಕಾರಿ ಕಛೇರಿ ಮುಂದೆ ಧರಣಿ ನಡೆಸಿ, ಜಿಲ್ಲಾಧಿಕಾರಿಗಳಿಗೆ ಮನವಿಪತ್ರ ಸಲ್ಲಿಸಲಾಗಿದೆ.

ಬೆಳಗಾಂ ನಗರದಲ್ಲಿ ಬಸವರಾಜ.ಎಲ್.ಬಡಾನಾಯಕ್‌ರವರ ನೇತೃತ್ವದಲ್ಲಿ 300 ಜನ ಚಾಲಕರು ಜಿಲ್ಲಾಧಿಕಾರಿ ಕಛೇರಿ ಮುಂದೆ ಧರಣಿ ನಡೆಸಿ, ಜಿಲ್ಲಾಧಿಕಾರಿಗಳಿಗೆ ಮನವಿಪತ್ರ ಸಲ್ಲಿಸಲಾಗಿದೆ.

ರಾಯಚೂರು ನಗರದಲ್ಲಿ ಕೆ.ಮುದುಕಪ್ಪ ನೇತೃತ್ವದಲ್ಲಿ 100 ಜನ ಚಾಲಕರು ಜಿಲ್ಲಾಧಿಕಾರಿ ಕಛೇರಿ ಮುಂದೆ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿಪತ್ರ ಸಲ್ಲಿಸಲಾಗಿದೆ.

ದಾಂಡೇಲಿಯಲ್ಲಿ ಕಾಂ.ಹೆಚ್.ಬಿ.ನಾಯಕ್‌ರವರ ನೇತೃತ್ವದಲ್ಲಿ 70 ಜನ ಚಾಲಕರು ಜಿಲ್ಲಾಧಿಕಾರಿ ಕಛೇರಿ ಮುಂದೆ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿಪತ್ರ ಸಲ್ಲಿಸಲಾಗಿದೆ.

ಕುಂದಾಪುರದಲ್ಲಿ ಕಾಂ.ಕೆ.ಶಂಕರ್ ನೇತೃತ್ವಲದಲ್ಲಿ ಸಿಐಟಿಯು ಹಾಗೂ ಐಎನ್‌ಟಿಯುಸಿಗಳ ನೇತೃತ್ವದಲ್ಲಿ 350 ಜನ ಚಾಲಕರು ಜಿಲ್ಲಾಧಿಕಾರಿ ಕಛೇರಿ ಮುಂದೆ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿಪತ್ರ ನೀಡಿದ್ದಾರೆ.

ಬ್ರಹ್ಮಾವರದಲ್ಲಿ ಕಾಂ.ವಿಠ್ಠಲ್ ಪೂಜಾರಿ ನೇತೃತ್ವದಲ್ಲಿ ಒಟ್ಟು 160 ಜನ ಚಾಲಕರು ಜಿಲ್ಲಾಧಿಕಾರಿ ಕಛೇರಿ ಮುಂದೆ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿಪತ್ರ ನೀಡಿದ್ದಾರೆ.

ಮಂಗಳೂರು ನಗರದಲ್ಲಿ ರಾಜೇಶ್ ನಾಯಕ್ ನೇತೃತ್ವದಲ್ಲಿ ಒಟ್ಟು 50 ಜನ ಚಾಲಕರು ಜಿಲ್ಲಾಧಿಕಾರಿ ಕಛೇರಿ ಮುಂದೆ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿಪತ್ರ ನೀಡಿದ್ದಾರೆ.

ಮೂಕ

ಸತ್ಯ ಸಾವಿರ ಟನ್ನಿನ ತೂಕ
ಆದರೇನು ಮಾಡೋದು
ಬಾಯಿ ಇಲ್ಲದ
ಮೂಕ

- **ನರಸಿಂಹಪ್ಪ**
ಸಿಂಧನೂರು

ಹಾಂಕಾಂಗ್ ಡಬ್ಲ್ಯುಟಿಒ ಸಚಿವ ಮಟ್ಟದ ಸಭೆಯಲ್ಲಿ ದೇಶದ ಕೃಷಿ, ಕೈಗಾರಿಕೆ, ವ್ಯಾಪಾರ, ಶಿಕ್ಷಣ ಇತ್ಯಾದಿ ರಂಗಗಳ ವಿನಾಶಕ್ಕೆ ಕಾರಣವಾಗುವ ಶ್ರೀಮಂತ ದೇಶಗಳ ದುಷ್ಟ ಶರತ್ತುಗಳಿಗೆ ತಲೆಬಾಗದೆ ದೇಶದ ಹಿತಾಸಕ್ತಿಗಳನ್ನು ಎತ್ತಿಹಿಡಿಯಬೇಕೆಂಬುದು ದೇಶದ ಕೋಟಿ ಕೋಟಿ ಜನಗಳ ಆಶಯವಾಗಿದೆ.

ಜನಗಳ ಹಿತಾಸಕ್ತಿಗಳ ರಕ್ಷಣೆಗೆ ಸಿಪಿಐ(ಎಂ) ಆಗ್ರಹ

ಡಿಸೆಂಬರ್ 13ರಂದು ಹಾಂಗ್‌ಕಾಂಗ್‌ನಲ್ಲಿ ನಡೆಯಲಿರುವ ಡಬ್ಲ್ಯುಟಿಒ ಮಂತ್ರಿಮಟ್ಟದ ಸಭೆಯ ಬಗ್ಗೆ ಸಂಸತ್ತಿನ ಎರಡೂ ಸದನಗಳಲ್ಲಿ ಈ ಬಾರಿ ಚರ್ಚೆ ನಡೆದಿದೆ. ಇದೊಂದು ಹೊಸ ಬೆಳವಣಿಗೆ. ಡಬ್ಲ್ಯುಟಿಒ ಮಾತುಕತೆಗಳು ಆರಂಭವಾದಂದಿನಿಂದ ಇದುವರೆಗೂ ಯಾವುದೇ ಈ ರೀತಿಯ ಶೃಂಗಸಭೆಯ ಮೊದಲು ಭಾರತ ಮತ್ತು ಅದರ ಜನತೆಯನ್ನು ಬಾಧಿಸುವ ಆ ಪ್ರಶ್ನೆಗಳನ್ನು ಸಂಸತ್ತಿನಲ್ಲಿ ಚರ್ಚಿಸಿರಲಿಲ್ಲ. ಎನ್‌ಡಿಎಯ ಆರು ವರ್ಷಗಳ ಆಡಳಿತ ಕಾಲದಲ್ಲಿ ವಾಜಪೇಯಿ ಸರಕಾರ ಇಂತಹ ಚರ್ಚೆಗಳನ್ನು ನಡೆಸಲು ಸತತವಾಗಿ ನಿರಾಕರಿಸಿತ್ತು. ಶೃಂಗಸಭೆಯ ನಂತರವೇ ಸಂಬಂಧಪಟ್ಟ ಮಂತ್ರಿಗಳು ಸಂಸತ್ತಿನ ಮುಂದೆ ಹೇಳಿಕೆ ನೀಡುತ್ತಿದ್ದರು. ಆದರೆ ಮಾತುಕತೆಗೆ ಹೋಗುವ ಮೊದಲು ಸಂಸತ್ತಿನ ಅಭಿಪ್ರಾಯವನ್ನು ಎಂದೂ ಗವುನಕ್ಕೆ ತಗೊಳ್ಳುತ್ತಿರಲಿಲ್ಲ.

ಈ ಬಾರಿಯ ಡಬ್ಲ್ಯುಟಿಒ ಮಾತುಕತೆಗಳಲ್ಲಿ ಮುಖ್ಯವಾಗಿ ನಾಲ್ಕು ವಿಷಯಗಳ ಬಗ್ಗೆ ಮಾತುಕತೆ ನಡೆಯುತ್ತವೆ. ಅವೆಂದರೆ ಕೃಷಿ, ಕೃಷಿಯೇತರ ಮಾರುಕಟ್ಟೆ ಅವಕಾಶ, ಸೇವೆಗಳಲ್ಲಿ ವ್ಯಾಪಾರ ಹಾಗೂ ಬೌದ್ಧಿಕ ಆಸ್ತಿಯಲ್ಲಿ ವ್ಯಾಪಾರ ಅಥವಾ ಟ್ರಿಪ್ಸ್. ಈ ವಿಷಯಗಳ ಬಗ್ಗೆ ಸಂಸತ್ತಿನಲ್ಲಿ ಸಿಪಿಐ(ಎಂ) ಸರಕಾರದಿಂದ ನಿರ್ದಿಷ್ಟ ಭರವಸೆಯನ್ನು ಕೇಳಿತ್ತು.

ಕೃಷಿಯಲ್ಲಿ ವ್ಯಾಪಾರದ ಉದಾರೀಕರಣದ ವಿನಾಶಕಾರಿ ಪರಿಣಾಮಗಳು ಈಗಾಗಲೇ ನಮ್ಮ ಮುಂದಿವೆ. ಕೃಷಿ ಸರಕುಗಳ ಆಮದಿನ ಪ್ರಮಾಣದ ಮೇಲಿನ ಮಿತಿಗಳನ್ನು ಹಿಂದಿನ ಬಿಜೆಪಿ ಸರಕಾರ ತೆಗೆದುಹಾಕಿ ಆತ್ಮಹತ್ಯೆಗಳು, ಹಸಿವಿನಿಂದ ಸಾವುಗಳು ಹೆಚ್ಚುವಂತಾಯಿತು. ಈ ಕೃಷಿ ಸಂಕಟವನ್ನು ಗಮನದಲ್ಲಿಟ್ಟುಕೊಂಡು ಯುಪಿಎ ಸರಕಾರ ಭಾರತೀಯ ರೈತನಿಗೆ ಸಾಕಷ್ಟು ರಕ್ಷಣೆ ಸಿಗುವಂತೆ ಮಾಡಬೇಕು, ದ್ವಿದಳ ಧಾನ್ಯಗಳು, ಅಡುಗೆ ತೈಲ, ಹಣ್ಣು, ತರಕಾರಿಗಳು ಹಾಗೂ ಹೈನು ಉತ್ಪಾದನೆಗಳನ್ನು ವಿಶೇಷ ಉತ್ಪನ್ನಗಳಾಗಿ ಪರಿಗಣಿಸಿ ರಕ್ಷಣೆ ಪಡೆಯಬೇಕು ಎಂದು ಸಿಪಿಐ(ಎಂ) ಸಂಸತ್ತಿನಲ್ಲಿ ಚರ್ಚೆಯ ವೇಳೆಯಲ್ಲಿ ಗಮನ ಸೆಳೆದಿದೆ. ಎರಡನೆಯದಾಗಿ, ಪ್ರಾಥಮಿಕ ಉತ್ಪನ್ನಗಳು ಹಾಗೂ ಪ್ರಾಥಮಿಕ ಸಂಸ್ಕರಿತ ಉತ್ಪನ್ನಗಳ (ಉದಾ: ವನಸ್ಪತಿ ಎಣ್ಣೆ) ಬಗ್ಗೆ ವಿಶೇಷ ರಕ್ಷಣಾ ವ್ಯವಸ್ಥೆಯನ್ನು ಅಳವಡಿಸಬೇಕು; ಮೂರನೆಯದಾಗಿ, ಸುಂಕದರ ಇಳಿಕೆಗೆ ಸಂಬಂಧಪಟ್ಟಂತೆ ಭಾರತ ಮೇಲಿನ ಎರಡು ವಿಧಗಳನ್ನು ಬಿಟ್ಟು ಉಳಿದ ವಿಷಯಗಳಲ್ಲಿ ಅಭಿವೃದ್ಧಿ ಹೊಂದಿದ ದೇಶಗಳ 3:2 ಪ್ರಮಾಣದಲ್ಲಿ ಮಾತ್ರ ಸುಂಕದರ ಇಳಿಕೆಗೆ ಒಪ್ಪಿಕೊಳ್ಳಬೇಕು(ಅಂದರೆ ಅಭಿವೃದ್ಧಿ ಹೊಂದಿದ ದೇಶಗಳು ಶೇ.12 ಇಳಿಸಿದರೆ, ನಾವು ಶೇ.8 ಇಳಿಸುತ್ತೇವೆ ಎಂದು); ನಾಲ್ಕನೆಯದಾಗಿ, ಸಬ್ಸಿಡಿಗಳು ಹಾಗೂ ಸುಂಕದರಗಳಿಗೆ ಸಂಬಂಧಪಟ್ಟಂತೆ ಕನಿಷ್ಠ ಮಟ್ಟವನ್ನು ಇನ್ನಷ್ಟು ಇಳಿಸಲು ಸಾಧ್ಯವಿಲ್ಲ ಎನ್ನಬೇಕು; ಐದನೆಯದಾಗಿ, ಅಭಿವೃದ್ಧಿ ಹೊಂದಿರುವ ದೇಶಗಳು ತಮ್ಮ ಕೃಷಿಗೆ ನೀಡುವ ಅಗಾಧ, ಪ್ರಮಾಣದ ಸಬ್ಸಿಡಿಗಳು ಅಂತರಾಷ್ಟ್ರೀಯ ವ್ಯಾಪಾರವನ್ನು ವಿರೂಪಗೊಳಿಸಿದ್ದು ಅವನ್ನು ಗಮನಾರ್ಹ ಪ್ರಮಾಣದಲ್ಲಿ ಇಳಿಸಬೇಕು ಎಂದು ಒತ್ತಡ ಹಾಕಬೇಕು ಹಾಗೂ ಅಂತಿಮವಾಗಿ, ಭಾರತೀಯ ಕೃಷಿ ರಫ್ತುಗಳ ಮೇಲೆ ಸುಂಕಗಳನ್ನು ಬಿಟ್ಟು ಬೇರೇನೂ ಅಡೆ,ತಡೆಗಳು ಇರದಂತೆ ಮಾಡಬೇಕು.

ಇನ್ನು, ಕೃಷಿಯೇತರ ಮಾರುಕಟ್ಟೆ ಅವಕಾಶದ ಪ್ರಶ್ನೆಯಲ್ಲಿ ಅಭಿವೃದ್ಧಿಶೀಲ ದೇಶಗಳು ತಮ್ಮ ಸುಂಕದರಗಳನ್ನು ಇಳಿಸಬೇಕೆಂಬ ಯಾವುದೇ ಒತ್ತಡವನ್ನು ಪ್ರತಿರೋಧಿಸಬೇಕು. ಏನೇ ಆಗಲಿ, ಭಾರತ ತನ್ನ ಸುಂಕದರಗಳನ್ನು ಅಭಿವೃದ್ಧಿಶೀಲ ದೇಶಗಳಿಗಿಂತ ಕಡಿಮೆ ಮಾಡಬಾರದು ಎಂದು ಸಿಪಿಐ(ಎಂ) ಸೂಚಿಸಿದೆ. ಸೇವೆಗಳಲ್ಲಿ ವ್ಯಾಪಾರಕ್ಕೆ ಸಂಬಂಧಪಟ್ಟಂತೆ ಯಾವುದೇ ಹೊಸ ವಲಯಗಳನ್ನು ತೆರೆಯಬಾರದು, ಸಾಮಾಜಿಕ ವಲಯಗಳನ್ನು ತೆರೆಯಬಾರದು, ಟ್ರಿಪ್ಸ್‌ಗೆ ಸಂಬಂಧಪಟ್ಟಂತೆ ಹಿಂದಿನ ಒಪ್ಪಂದಗಳಿಂದಾಗಿ ಔಷಧಿಗಳ ಬೆಲೆಗಳು ಏರಿರುವುದನ್ನು ಹಾಗೂ ದೇಶೀ ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಗೆ ಧಕ್ಕೆ ಬಂದುದನ್ನು ಪರಿಶೀಲಿಸಿ ಅವುಗಳ ಪರಾಮರ್ಶೆ ನಡೆಸುವಂತೆ ಒತ್ತಾಯಿಸಬೇಕು ಎಂದು ಸಿಪಿಐ(ಎಂ) ಹೇಳಿದೆ.

ಅಭಿವೃದ್ಧಿಶೀಲ ದೇಶಗಳ ಹಿತಾಸಕ್ತಿಗಳನ್ನು ರಕ್ಷಿಸಲು, ಅಮೇರಿಕಾ ಮತ್ತಿತರ ಅಭಿವೃದ್ಧಿ ಹೊಂದಿದ ದೇಶಗಳ ಪ್ರಹಾರಗಳನ್ನು ಸಾಮೂಹಿಕವಾಗಿ ಪ್ರತಿರೋಧಿಸಲು ಇತರ ಅಭಿವೃದ್ಧಿಶೀಲ ದೇಶಗಳೊಡಗೂಡಿ ಸಹಕಾರ ಮತ್ತು ಸೌಹಾರ್ದದ ಸಂಬಂಧಗಳನ್ನು ಸರಕಾರ ಬಲಗೊಳಿಸಬೇಕು ಎಂದೂ ಸಿಪಿಐ(ಎಂ) ಆಗ್ರಹಪಡಿಸಿದೆ.

ಈ ಮಾತುಕತೆಗಳು ಪೂರ್ಣವಾಗುವಂತಹ ಯಾವುದೇ ಫಲಿತಾಂಶ ಹಾಂಕಾಂಗ್ ಮಂತ್ರಿಮಟ್ಟದ ಶೃಂಗಸಭೆಯಿಂದ ಬರಲಿಕ್ಕಿಲ್ಲ, ಮುಂದಿನ ವರ್ಷ ಮತ್ತೊಂದು ಮಂತ್ರಿಮಟ್ಟದ ಶೃಂಗಸಭೆ ಬೇಕಾದೀತು. ಏನೇ ಆಗಲಿ ಇವು ಭಾರತ ಮತ್ತು ಅದರ ಜನತೆಯ ಹಿತದೃಷ್ಟಿಯಿಂದ ಯುಪಿಎ ಸರಕಾರ ಗಮನದಲ್ಲಿಟ್ಟುಕೊಳ್ಳಲೇಬೇಕಾದ ವಿಷಯಗಳು ಎಂದು ಸಿಪಿಐ(ಎಂ) ಸಂಸತ್ತಿನಲ್ಲಿ ಒತ್ತಿ ಹೇಳಿದೆ. ○

"ಆಹಾರಕ್ಕಾಗಿ ತೈಲ" ಸಂಪೂರ್ಣ ತನಿಖೆಗೆ ಆಗ್ರಹ

ಇರಾಕ್‌ನ 'ಆಹಾರಕ್ಕಾಗಿ ತೈಲ' ಯೋಜನೆಯ ಕುರಿತು ತನಿಖೆ ನಡೆಸಿದ ವೋಲ್ಕರ್ ವರದಿ ಬಗ್ಗೆ ಮುಂದುವರೆದಿರುವ ಆರೋಪ ಪ್ರತ್ಯಾರೋಪಗಳಿಗೆ ಪ್ರತಿಕ್ರಿಯಿಸಿರುವ ಸಿಪಿಐ(ಎಂ) ಪಕ್ಷವು ಸಂಬಂಧಪಟ್ಟ ಎಲ್ಲಾ ಮಾಹಿತಿಗಳನ್ನು, ವಿಷಯಗಳನ್ನು ಇದಕ್ಕಾಗಿ ನೇಮಿಸಿದ ನ್ಯಾಯಮೂರ್ತಿ ಪಾಠಕ್ ತನಿಖಾ ಸಮಿತಿಗೆ ಒದಗಿಸಬೇಕು ಹಾಗೂ ತೈಲ ಕಾಂಟ್ರಾಕ್ಟ್‌ಗಳ ಎಲ್ಲಾ ನೇರ ಹಾಗೂ ಪರೋಕ್ಷ ಫಲಾನುಭವಿಗಳನ್ನು ಒಳಗೊಳ್ಳುವಂತೆ ತನಿಖೆಯನ್ನು ವಿಸ್ತರಿಸಬೇಕು ಎಂದು ಸಿಪಿಐ(ಎಂ) ಹೇಳಿದೆ.

ವೋಲ್ಕರ್ ಸಮಿತಿ ವರದಿ ಅಂತಿಮ ಎಂದು ಪರಿಗಣಿಸಬಾರದು ಎಂಬುದು ಪಕ್ಷದ ನಿಲುವಾಗಿದ್ದು ಇರಾಕ್ ಮೇಲೆ ನಿರ್ಬಂಧಗಳನ್ನು ಹೇರಿದ್ದಂತಹ ಸಂದರ್ಭದಲ್ಲಿ ಅದು ನಡೆದಿದೆ. ಹಾಗೂ ಇರಾಕ್ ಮೇಲೆ ಅತಿಕ್ರಮಣ ನಡೆಸಿದ ಸಂದರ್ಭಧಲ್ಲಿ ಅಮೇರಿಕ ವಶಪಡಿಸಿ ಕೊಂಡಿರುವ ದಾಖಲೆಗಳನ್ನು ಪರಿಶೀಲಿಸಿಲ್ಲ ಎಂದು ಸಿಪಿಐ(ಎಂ) ನೆನಪಿಸಿಕೊಟ್ಟಿದೆ.

ಅವ್ಯವಹಾರದಲ್ಲಿ ಎಲ್ಲಿ ಅಚಾತುರ್ಯ ನಡೆದಿದೆ ಎಂಬುದರ ಬಗ್ಗೆ ತಿಳಿಯಲು ತನಿಖೆಯನ್ನು ನಡೆಸಿ ಅದರ ಆಧಾರದಲ್ಲಿ ಕ್ರಮ ಕೈಗೊಳ್ಳಬೇಕು. ಕ್ರೊವೇಶಿಯಾದಲ್ಲಿನ ಭಾರತದ ಮಾಜಿ ರಾಯಭಾರಿ ಅನಿಲ್ ಮಥಾರಾಣಿ ಹೇಳಿಕೆಗಳನ್ನು ಸೇರಿದಂತೆ ಎಲ್ಲ ಮಹತ್ವದ ದಾಖಲೆಗಳ ಬಗ್ಗೆ ತನಿಖೆಗೊಳಪಡಿಸಬೇಕು ಎಂಬುದು ಸಿಪಿಐ(ಎಂ)ನ ಆಗ್ರಹವಾಗಿದೆ.

ವೋಲ್ಕರ್ ವರದಿಯಲ್ಲಿ ಪಟ್ಟಿ ಮಾಡಿದ ತೈಲ ಯೋಜನೆಯಲ್ಲಿನ ಅತಿದೊಡ್ಡ ಕಾಂಟ್ರಾಕ್ಟೇತರ ಫಲಾನುಭವಿಯ ಕುರಿತ ತನಿಖೆ ನಡೆಸಬೇಕೆಂದು ಬಿಜೆಪಿ ಒತ್ತಾಯ ಹೇರದಿರುವುದು ಆಶ್ಚರ್ಯಕಾರಿ. ಬಿಜೆಪಿ ನೇತೃತ್ವದ ಸರ್ಕಾರಕ್ಕೂ ಈ ವ್ಯವಸ್ಥೆಗೂ ಏನಾದರೂ ಸಂಬಂಧವಿತ್ತೇ ಎಂಬ ಶಂಕೆಯನ್ನು ಮೂಡಿಸಿದೆ ಎಂದು ಸಿಪಿಐ(ಎಂ) ಅಭಿಪ್ರಾಯಪಟ್ಟಿದೆ.

ದಿಲ್ಲಿಯಲ್ಲಿ ನಲ್ವತ್ತು ಸಾವಿರ ಅಸಂಘಟಿತರ ಮತ ಪ್ರದರ್ಶನ

ತಕ್ಷಣ ಅಸಂಘಟಿತ ಕಾರ್ಮಿಕರ ಶಾಸನ ತರಲು ಆಗ್ರಹ



ನವದೆಹಲಿಯಲ್ಲಿ ಡಿಸೆಂಬರ್ 8ರಂದು ಸುಮಾರು ನಲ್ವತ್ತು ಸಾವಿರ ಅಸಂಘಟಿತ ಕಾರ್ಮಿಕರು ಮತಪ್ರದರ್ಶನ ನಡೆಸಿದರು. ಸಿಐಟಿಯು ಈ ಮತಪ್ರದರ್ಶನಕ್ಕೆ ಕರೆ ನೀಡಿತ್ತು. ಭಾರತ ಸರಕಾರ ತಕ್ಷಣವೇ ಅಸಂಘಟಿತ ವಲಯದ ಕಾರ್ಮಿಕರಿಗೆ ಕಾರ್ಮಿಕ ಹಕ್ಕುಗಳು, ಸೇವಾ ಶರತ್ತುಗಳು ಹಾಗೂ ಸಾಮಾಜಿಕ ಭದ್ರತಾ ಕ್ರಮಗಳನ್ನು ಕುರಿತಂತೆ ಒಂದು ಸಮಗ್ರ ಶಾಸನ ತರಲು ತಕ್ಷಣವೇ ಕ್ರಮ ಕೈಗೊಳ್ಳಬೇಕೆಂದು ಪ್ರದರ್ಶನಕಾರರು ಒತ್ತಾಯಿಸಿದರು. ಡಿಸೆಂಬರ್ 9-10ರಂದು ಭಾರತೀಯ ಕಾರ್ಮಿಕ ಸಮ್ಮೇಳನದ 40ನೇ ಅಧಿವೇಶನದ ಮುನ್ನಾದಿನ ಈ ಮತಪ್ರದರ್ಶನ ನಡೆದಿದೆ. ಈ ಅಧಿವೇಶನದ ಅಜೆಂಡಾದಲ್ಲಿ ಈ ಪ್ರಶ್ನೆಯಿತ್ತು.

ರ್‍ಯಾಲಿ ಅಂಗೀಕರಿಸಿದ ಪ್ರಧಾನ ನಿರ್ಣಯ ಯುಪಿಎ ಸರಕಾರ ತನ್ನ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಭರವಸೆ ನೀಡಿದ್ದರೂ ಆ ಬಗ್ಗೆ ನಿಷ್ಕ್ರಿಯವಾಗಿರುವುದಕ್ಕೆ ತನ್ನ ಕ್ರೋಧವನ್ನು ವ್ಯಕ್ತಪಡಿಸಿತು. ಅಧಿಕಾರಕ್ಕೆ ಬಂದು 18 ತಿಂಗಳಾದರೂ ಅಸಂಘಟಿತ ವಲಯದ ಕಾರ್ಮಿಕರ ಮಸೂದೆಯನ್ನು ಅಂತಿಮಗೊಳಿಸಲಾಗಿಲ್ಲ. ಆದರೆ ಇದೇ ಸರಕಾರ ಮಾಲಕರಿಗೆ ಮತ್ತು ಬಂಡವಾಳಶಾಹಿಗಳಿಗೆ ಪ್ರಯೋಜನ ತರುವ ಹಲವು ಶಾಸನಗಳನ್ನು ತರಲು ಏನೇನೂ ವಿಳಂಬ ಮಾಡಿಲ್ಲ, ಪಿಎಫ್‌ಆರ್‌ಡಿಎ ಮಸೂದೆ, ವಿಶೇಷ ಆರ್ಥಿಕ ವಲಯ ಮಸೂದೆ, ವಿವಿಧ ಕಾರ್ಮಿಕ ಕಾನೂನುಗಳಲ್ಲಿ ಮಾಲಕರ ಭದ್ರತೆಗಳನ್ನು ಉಪೇಕ್ಷಿಸುವ ಎರಡು ಮಸೂದೆಗಳನ್ನು ಅದು ಈಗಾಗಲೇ ತಂದಿದೆ. ಯುಪಿಎ ಸರಕಾರದ ಇಂತಹ ಕಾರ್ಮಿಕವಿರೋಧಿ ನಿಲುವನ್ನು ಸಹಿಸಿಕೊಂಡಿರಲು ಸಾಧ್ಯವಿಲ್ಲವೆಂದು ನಿರ್ಣಯ ಎಚ್ಚರಿಸಿದೆ. ಫಿರೋಜಾಬಾದಿನಲ್ಲಿ ಗಾಜಿನ ಬಳೆ ಕಾರ್ಮಿಕರ ಹೋರಾಟಕ್ಕೆ ನೇತೃತ್ವ ನೀಡಿದ್ದಕ್ಕಾಗಿ ಸಿಐಟಿಯು ಮುಖಂಡ ಮುಖೇಶ್‌ಯಾದವ್‌ರನ್ನು ಜೈಲಿನಲ್ಲಿಟ್ಟು ಹಿಂಸಿಸುತ್ತಿರುವುದನ್ನು ಖಂಡಿಸಿದ ರ್‍ಯಾಲಿ ಅವರನ್ನು ತಕ್ಷಣ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದೆ.

ಈ ಬೃಹತ್ ರ್‍ಯಾಲಿಯನ್ನು ಉದ್ದೇಶಿಸಿ ಸಿಐಟಿಯು ಅಧ್ಯಕ್ಷ ಎಂ.ಕೆ.ಪಂಧೆ, ಪ್ರಧಾನ ಕಾರ್ಯದರ್ಶಿ ಚಿತ್ತಬ್ರತ ಮಜುಂದಾರ್, ಅಖಿಲ ಭಾರತ ಅಸಂಘಟಿತ ವಲಯದ ಕಾರ್ಮಿಕರ ಸಮನ್ವಯ ಸಮಿತಿ (ಸಿಐಟಿಯು)ಯ ಸಂಚಾಲಕ ಪಿ.ಕೆ.ಗಂಗೂಲಿ ಹಾಗೂ ಸಿಐಟಿಯು ಕಾರ್ಯದರ್ಶಿಗಳಾದ ಡಬ್ಲ್ಯು.ಆರ್.ವರದರಾಜನ್ ಹಾಗೂ ತಪನ್‌ಸೇನ್ ಮಾತನಾಡಿದರು. ಸಂಸತ್ತಿನಲ್ಲಿ ಸಿಪಿಐ(ಎಂ) ಗುಂಪಿನ ಮುಖಂಡ ಬಸುದೇವ ಆಚಾರ್ಯ ಹಾಗೂ ಸಿಪಿಐ(ಎಂ) ಸಂಸತ್ ಸದಸ್ಯೆಯಾದ ಬೃಂದಾ ಕಾರತ್ ಕೂಡಾ ಮತಪ್ರದರ್ಶಕರನ್ನುದ್ದೇಶಿಸಿ ಮಾತನಾಡಿದರು.

ಇತರ ಕೇಂದ್ರಕಾರ್ಮಿಕ ಕೇಂದ್ರಗಳ ಮುಖಂಡರು, ಎಸ್‌ಎನ್ ಠಾಕೂರ್ (ಎಐಟಿಯುಸಿ), ಥಂಪನ್ ಥಾಮಸ್ (ಹೆಚ್‌ಎಂಎಸ್), ಎಎನ್‌ಡೋಗ್ರಾ (ಬಿಎಂಎಸ್), ಆರ್.ಕೆ.ಶರ್ಮಾ (ಯುಟಿಯುಸಿ, ಎಲ್‌ಎಸ್) ಹಾಗೂ ಸಂತೋಷ್‌ರಾಯ್(ಎಐಸಿಸಿಟಿಯು) ಕೂಡಾ ಸಭೆಯನ್ನು ಅಭಿನಂದಿಸುತ್ತಾ ಈ ದಿಕ್ಕಿನಲ್ಲಿ ಐಕ್ಯ ಹೋರಾಟವನ್ನು ಬಲಗೊಳಿಸುವ ಭರವಸೆ ನೀಡಿದರು. ವಿವಿಧ ರಾಜ್ಯಗಳಿಂದ ಬಂದ ಸಿಐಟಿಯು ಮುಖಂಡರು ಹಾಗೂ ಹಲವು ಸಿಪಿಐ(ಎಂ) ಸಂಸತ್ ಸದಸ್ಯರು ಕೂಡಾ ಈ ಮತಪ್ರದರ್ಶನದಲ್ಲಿ ಭಾಗವಹಿಸಿದರು. ಈ ಸಭೆಯಿಂದ ಪ್ರಧಾನ ಮಂತ್ರಿಗಳಿಗೆ ಕಾರ್ಮಿಕರ ಬೇಡಿಕೆಗಳನ್ನು ಕುರಿತ ಒಂದು ಮನವಿ ಪತ್ರವನ್ನು ಕಳಿಸಲಾಯಿತು.

ಕೋಮುವಾದಿ ಬಿಜೆಪಿ ಮತ್ತದರ ಕೂಟವನ್ನು ಸೋಲಿಸಿ - ಜನವಿರೋಧಿ

ಸಿಪಿಐ(ಎಂ) ಮನವಿ

- ಪಂಚಾಯತ್ ಸಂಸ್ಥೆಗಳು ಬಲಗೊಳ್ಳಲಿ, ಗ್ರಾಮೀಣ ಅಭಿವೃದ್ಧಿಯ ಎಲ್ಲ ಅಧಿಕಾರ, ಹಣ ಪಡೆಯುವಂತಾಗಲಿ, ಪಂಚಾಯತ್ ರಾಜ್ ಮತ್ತು ಗ್ರಾಮೀಣ ಅಭಿವೃದ್ಧಿ ನಿರ್ದೇಶನಾಲಯ ಸ್ಥಾಪನೆಯಾಗಲಿ.
- ಕಂಟ್ರಾಕ್ಟರ್‌ಗಳ, ಶ್ರೀಮಂತರ ಹಿಡಿತ ಕೊನೆಗೊಳ್ಳಲಿ, ಪಂಚಾಯತ್‌ಗಳು ಸಾಮಾನ್ಯ ಜನತೆಯ ನಿಯಂತ್ರಣಕ್ಕೊಳಪಡಲಿ,
- ಭೂಹೀನ ರೈತರು ಮತ್ತು ಬಡ ರೈತರಿಗೆ ಭೂಮಿ ನೀಡುವ ತೀವ್ರ ಭೂ ಸುಧಾರಣೆ ಜಾರಿಯಾಗಲಿ.
- ಭ್ರಷ್ಟಾಚಾರ ತೊಲಗಲಿ, ಮನೆ, ನಿವೇಶನ, ಅಂತ್ಯೋದಯ, ಹಾಗೂ ಹಳದಿ ಪಡಿತರ ಚೀಟಿ ಎಲ್ಲ ಬಡವರಿಗೂ ದೊರೆಯಲಿ.
- ಕುಡಿಯುವ ನೀರು, ರಸ್ತೆ, ಸೇತುವೆ, ಚರಂಡಿ ಎಲ್ಲಾ ಗ್ರಾಮಗಳ ಹಕ್ಕಾಗಲಿ.

2005ರ ಡಿಸೆಂಬರ್ 19 ಹಾಗೂ 23 ರಂದು ಕರ್ನಾಟಕದ ತಾಲೂಕು ಹಾಗೂ ಜಿಲ್ಲಾ ಪಂಚಾಯತ್‌ಗಳಿಗೆ ಚುನಾವಣೆಗಳು ನಡೆಯಲಿವೆ. ಗ್ರಾಮೀಣ ಪ್ರದೇಶದ ಜನರು ತಮ್ಮ ಪ್ರದೇಶಗಳ ಅಭಿವೃದ್ಧಿಗೆ ಹೊಣೆಗಾರರಾಗಬೇಕಾದವರನ್ನು ಅಂದು ಚುನಾಯಿಸುವ ಮೂಲಕ ತಮ್ಮ ಹೊಣೆಗಾರಿಕೆಯನ್ನು ಎಚ್ಚರಿಕೆಯಿಂದ ನಿರ್ವಹಿಸಬೇಕಾಗಿದೆ.

ಕರ್ನಾಟಕದ ವಿವಿಧ ರಾಜಕೀಯ ಪಕ್ಷಗಳು ಪಂಚಾಯತ್ ಚುನಾವಣೆಗಳನ್ನು ಕೇವಲ ವಿಧಾನ ಸಭಾ ಚುನಾವಣೆಗಳಿಗೆ ರಂಗ ತಾಲೀಮು ಎಂದು ಭಾವಿಸಿವೆ. ತಮ್ಮ ಬಲಾಬಲಗಳನ್ನು ಪರೀಕ್ಷಿಸಿಕೊಳ್ಳಲು ಸಿದ್ಧತೆಗಳನ್ನು ಮಾಡುತ್ತಿವೆ. ಪಂಚಾಯತ್ ಸಂಸ್ಥೆಗಳನ್ನು ಭ್ರಷ್ಟತೆಯ ಕೂಪವನ್ನಾಗಿ ಮಾಡಿ, ಗ್ರಾಮೀಣ ಅಭಿವೃದ್ಧಿಯ ಹಣದಲ್ಲಿ ಬಹಳ ಭಾಗವನ್ನು ತಿಂದು ತೇಗುವ ಆಳುವ ವರ್ಗಗಳ ಪಕ್ಷಗಳು ಮತ್ತಷ್ಟು ಇನ್ನಷ್ಟು ನುಂಗಿ ನೀರು ಕುಡಿಯಲು ಮತದಾರರಿಗೆ ಕೈ ಮುಗಿಯುತ್ತಾ ಅಂಗಲಾಚುತ್ತಿವೆ. ಹಣ, ಹೆಂಡಗಳ ಹೊಳೆ ಹರಿಸಿ, ಜಾತಿ, ಕುಲಗಳನ್ನು ಬಳಸಿ, ಧರ್ಮ, ಧರ್ಮಗಳ ನಡುವೆ ದ್ವೇಷ ಹುಟ್ಟಿಸಿ ತಮ್ಮ ಬೇಳೆ ಬೇಯಿಸಿಕೊಳ್ಳಲು ಜನರಿಗೆ ಮಂಕುಬೂದಿಯೆರಚಿ ಅಯ್ಕೆಯಾಗಲು ಪ್ರಯತ್ನಿಸುತ್ತಿವೆ. ಗ್ರಾಮೀಣ ಪ್ರದೇಶಗಳಲ್ಲಿ ಸ್ವಯಂ ಘೋಷಿತ ತೆರಿಗೆಯ ಹೆಸರಲ್ಲಿ ಹೆಚ್ಚು ತೆರಿಗೆ ಹಾಕುವ, ಕುಡಿಯುವ ನೀರಿನ ದರ ಏರಿಸುವ, ಏರಿದ ದರಗಳಲ್ಲಿ ತೆರಿಗೆ ನೀಡಲಾಗದ ಬಡವರಿಗೆ ಕುಡಿಯಲು ನೀರು ದಕ್ಕದಂತೆ ಮಾಡುವ ತಂತ್ರಗಳು ನಡೆಯುತ್ತಿವೆ. ಇಂತಹ ಸಂದರ್ಭದಲ್ಲಿ ಗ್ರಾಮೀಣ ಜನ ತಮ್ಮ ಮತವನ್ನು ವಿಚಾರ ಮಾಡಿ ಚಲಾಯಿಸಬೇಕಾಗಿದೆ.

ಗ್ರಾಮೀಣ ಅಭಿವೃದ್ಧಿಗೆ ಸಂಬಂಧಿಸಿದ ಎಲ್ಲ ಅಧಿಕಾರ ಹಣ ಪಂಚಾಯತ್ ಸಂಸ್ಥೆಗಳಿಗೆ ದಕ್ಕಬೇಕು

ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಸಂಬಂಧಿಸಿದ ಎಲ್ಲ ಅಧಿಕಾರವೂ, ಗ್ರಾಮೀಣ ಪ್ರದೇಶದ ಎಲ್ಲ ಸಂಪನ್ಮೂಲಗಳ ಮೇಲಿನ ಹಿಡಿತವು ಪಂಚಾಯತ್ ಸಂಸ್ಥೆಗಳಿಗೆ ದಕ್ಕಬೇಕು ಎಂಬುದು ಸಿಪಿಐ(ಎಂ) ಪಕ್ಷದ ಮೂಲಭೂತ ಸಿದ್ಧಾಂತ, ಗ್ರಾಮೀಣ ಪ್ರದೇಶದ ಮೂಲಭೂತ ಸಂಪತ್ತಾದ ಭೂಮಿ, ಅದಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳೂ ಪಂಚಾಯತ್‌ನ ಅಧೀನಕ್ಕೊಳಪಡಬೇಕು. ಕೃಷಿ, ಕೃಷಿಯೇತರ ಭೂಮಿಯ ಮೇಲಿನ ಹಿಡಿತ, ಖಾತೆ, ಪಹಣಿ, ಮ್ಯುಟೇಷನ್, ಮೊದಲಾದ ದಾಖಲೆಗಳು, ಸರ್ಕಾರಿ ಭೂಮಿಯನ್ನು ವಿನಿಯೋಗಿಸುವ ಹಕ್ಕು, ಮನೆಗಾಗಿ ನಿವೇಶನಗಳನ್ನು, ವಿನ್ಯಾಸಗಳನ್ನು ರೂಪಿಸುವ ಅಧಿಕಾರ ಅದನ್ನು ವಿವಿಧ ಜನರಿಗೆ ಮಾರುವ, ಬಡವರಿಗೆ ಉಚಿತವಾಗಿ ನೀಡುವ ಅಧಿಕಾರ ಪಂಚಾಯತ್ ಸಂಸ್ಥೆಗಳಲ್ಲಿರಬೇಕು. ಗ್ರಾಮ ಲೆಕ್ಕಿಗ, ಕಂದಾಯ ಅಧಿಕಾರಿಗಳು, ಕೃಷಿ, ಪಶು ಸಂಗೋಪನೆ, ಮೀನುಗಾರಿಕೆ, ಗ್ರಾಮೀಣ ಕೈಗಾರಿಕೆಗಳು, ಶಿಕ್ಷಣ, ಆರೋಗ್ಯ ಎಲ್ಲವೂ ಪಂಚಾಯತ್ ಸಂಸ್ಥೆಗಳ ಅಡಿಯಲ್ಲಿರಬೇಕು. ಅದಕ್ಕೆ ಬೇಕಾದ ತಜ್ಞ ಸಿಬ್ಬಂದಿಯನ್ನು ಪಂಚಾಯತ್ ಸಂಸ್ಥೆಗಳ ಪೂರ್ಣ ನಿಯಂತ್ರಣಕ್ಕೆ ತರಬೇಕು ಎಂಬುದು ಸಿಪಿಐ(ಎಂ)ನ ನಿಲುವು.

ಈ ಎಲ್ಲ ಅಭಿವೃದ್ಧಿಯ ಹೊಣೆಯ ಜೊತೆ ಜೊತೆಗೆ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳು ಈ ಎಲ್ಲ ಅಭಿವೃದ್ಧಿಗಾಗಿ ಮೀಸಲಿಟ್ಟ ಬಜೆಟ್‌ನ್ನು ಪಂಚಾಯತ್ ಸಂಸ್ಥೆಗಳಿಗೆ ವರ್ಗಾಯಿಸಬೇಕು. ಈ ಮೂಲಕ ರಾಜ್ಯ ಸರ್ಕಾರದ ಬಜಟ್‌ನ ಶೇ 50ಕ್ಕಿಂತ ಹೆಚ್ಚು ಭಾಗ ಪಂಚಾಯತ್ ಸಂಸ್ಥೆಗಳಿಗೆ ನೀಡಬೇಕು ಎಂಬುದು ಸಿಪಿಐ(ಎಂ)ನ ಒತ್ತಾಯ. ಇಷ್ಟು ದೊಡ್ಡ ಪ್ರಮಾಣದ ಹೊಣೆಗಾರಿಕೆ ಇರುವ ಹಣ ವಿನಿಯೋಗಿಸುವ ಈ ಸಂಸ್ಥೆಗಳಿಗೆ ತಮ್ಮದೇ ಸಿಬ್ಬಂದಿಯಿಲ್ಲ. ವಿಶೇಷ ತರಬೇತಿಯೂ ಇಲ್ಲ. ಅದಕ್ಕಾಗಿ ಪಂಚಾಯತ್ ರಾಜ್ ನಿರ್ದೇಶನಾಲಯ ಸ್ಥಾಪಿಸಬೇಕು. ಅದಕ್ಕಾಗಿ ಪದವಿ, ಸ್ನಾತಕೋತ್ತರ ಪದವಿ ಶಿಕ್ಷಣ ನೀಡಬೇಕು.

ಇಂದು ಪಂಚಾಯತ್ ಸಂಸ್ಥೆಗಳಿಗೆ ಅನೇಕ ಇಲಾಖೆಗಳನ್ನು ವರ್ಗಾಯಿಸಲಾಗಿದೆ ಎಂದು ಹೇಳಲಾಗುತ್ತಿದ್ದರೂ ಸಿಬ್ಬಂದಿಯ ಮೇಲೆ ನಿಜವಾದ ಅಧಿಕಾರವಿಲ್ಲ. ಭೂಮಿಗೆ ಸಂಬಂಧಪಟ್ಟ ಯಾವುದೂ ಜನರಿಂದ ಚುನಾಯಿತವಾದ ಪಂಚಾಯತ್ ಸಂಸ್ಥೆಗಳ ಕೈಯಲ್ಲಿಲ್ಲ. ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ, ತಹಸೀಲ್ದಾರ, ಕಂದಾಯ ನಿರೀಕ್ಷಕರ, ಗ್ರಾಮಲೆಕ್ಕಿಗ ಇವರುಗಳದ್ದೇ ದರಬಾರು. ರಾಜ್ಯ ಬಜೆಟ್‌ನಲ್ಲಿ ಕೇವಲ 20-25 ಭಾಗ ಹಣ ಮಾತ್ರ ಪಂಚಾಯತ್ ಸಂಸ್ಥೆಗಳಿಗೆ ದೊರೆಯುವುದು. ಹೀಗಾಗಿ ಪಂಚಾಯತ್ ಸಂಸ್ಥೆಗಳು ನಿಜವಾದ ಅಭಿವೃದ್ಧಿ ಕೈಗೊಳ್ಳಲಾಗದೆ ಅಸಹಾಯಕ ಪರಿಸ್ಥಿತಿಯಲ್ಲಿವೆ. ಗ್ರಾಮೀಣ ಪ್ರದೇಶದ ಜನರು ಕೆಲಸವಿಲ್ಲದೆ ಒದ್ದಾಡುತ್ತಿದ್ದರೂ ಉದ್ಯೋಗ ನೀಡುವ ಅವಕಾಶವಿಲ್ಲದಂತಾಗಿದೆ. ಗ್ರಾಮೀಣ ಕೈಗಾರಿಕೆಗಳನ್ನು ಉತ್ತಮ ಪಡಿಸಲು, ಪಂಚಾಯತ್ ಸಂಸ್ಥೆಗಳೇ ಕೈಗಾರಿಕೆಗಳನ್ನು ಸ್ಥಾಪಿಸಲು ಅಧಿಕಾರ ಹಾಗೂ ಹಣ ಎರಡೂ ಇಲ್ಲ. ಈ ಪರಿಸ್ಥಿತಿಯನ್ನು ನಿವಾರಿಸಲು ಪಂಚಾಯತ್ ಸಂಸ್ಥೆಗಳನ್ನು ಬಲಪಡಿಸುವುದು ಅಗತ್ಯವಾಗಿದೆ.

ಪಂಚಾಯತ್ ಮೇಲೆ ಜನತೆಯ ನಿಯಂತ್ರಣ, ಭ್ರಷ್ಟಾಚಾರ ನಿರ್ಮೂಲನೆ

ಪಂಚಾಯತ್ ಸಂಸ್ಥೆಗಳಿಗೆ ಇನ್ನೂ ಹೆಚ್ಚು

ಜಾತಿ-ಹಣ-ಹೆಂಡ-ಸುಳ್ಳು ಭರವಸೆ-ಕೋಮುವಾದಗಳ ಆಧಾರದಲ್ಲಿ ಚುನಾವಣೆ ಪಕ್ಷಗಳಿಗಿಂತ ಭಿನ್ನವಾಗಿ ತನ್ನ ಎಂದಿನ ಜನಪರ ಚಳುವಳಿಯ ಮುಂದುವರಿಕೆಯ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ಭಾವಿಸಿದೆ. ಪಂಚಾಯತ್ ಚುನಾವಣೆಗಳ ಅಧಿಕಾರ ವಿಕೇಂದ್ರೀಕರಣದ ಮೂಲಕ ಪಂಚಾಯತ್‌ಗಳನ್ನು ಬಲಪಡಿಸುವ ಹಾಗೂ ಒದಗಿಸುವ ನಿಟ್ಟಿನಲ್ಲಿ ಪಂಚಾಯತ್‌ಗಳ ಮೇಲೆ ಬಡವರು - ರೈತರು - ಜನಸಾಮಾ ಕಣ್ಣೋಟವನ್ನಿಲ್ಲಿ ಪ್ರಸ್ತುತ ಪಡಿಸಿದೆ. ಈ ಜನಪರ ಅಂಶಗಳ ಆಧಾರದಲ್ಲಿ ರಾಜ್ಯದ ಸಿಪಿಐ(ಎಂ) ಪಕ್ಷದ ಕಣ್ಣೋಟ - ಗುರಿ - ಆಗ್ರಹಗಳ ಬಗ್ಗೆ ಬರೆದಿದ್ದಾರೆ ಪಕ್ಷದ ರಾ

ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್ ಚ

ಗ್ರಾಮೀಣ ಅಭಿವೃದ್ಧಿ - ಅಧಿಕಾರ ವಿ

ಜನರ ನಿಯಂತ್ರಣಕ್ಕೆ ಪಂಚಾಯ

ಸಿಪಿಐ(ಎಂ) ಆಗ್ರ

ಅಧಿಕಾರ, ಹಣ ಬೇಕು ಎಂದು ಒತ್ತಾಯಿಸು ವಾಗಲೇ ಈಗ ನೀಡುತ್ತಿರುವ ಹಣದ ಬಹು ಭಾಗ ಭ್ರಷ್ಟಾಚಾರಕ್ಕೆ ಒಳಗಾಗಿ ಪೋಲಾಗುತ್ತಿದೆ ಎಂಬುದು ನಮ್ಮದುರಿನ ವಾಸ್ತವ. ಕಂಟ್ರಾಕ್ಟರ್‌ಗಳು (ಗುತ್ತಿಗೆದಾರರು) ಅಧಿಕಾರಿಗಳು, ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್, ಗ್ರಾಮ ಪಂಚಾಯತ್‌ನ ಭ್ರಷ್ಟ ಸದಸ್ಯರು, ಅಧ್ಯಕ್ಷರು ಇವರ ಕೂಟ ನುಂಗಿ ಹಾಕುತ್ತಿದೆ. ಇದನ್ನು



ಪಂಚಾಯತ್ ಚುನಾವಣೆಗಳಲ್ಲಿ ಸಿಪಿಐ(ಎಂ) ಸ್ಪರ್ಧೆ

ರಾಜ್ಯದ 27 ಜಿಲ್ಲೆಗಳ ಪೈಕಿ 14 ಜಿಲ್ಲೆಗಳಲ್ಲಿ ಸಿಪಿಐ(ಎಂ) ಸ್ಪರ್ಧಿಸುತ್ತಿದ್ದು ಒಟ್ಟು 31 ಜಿಲ್ಲಾ ಪಂಚಾಯತ್ ಹಾಗೂ 115 ತಾಲ್ಲೂಕು ಪಂಚಾಯತ್ ಕ್ಷೇತ್ರಗಳಲ್ಲಿ ಸ್ಪರ್ಧೆಯನ್ನು ನೀಡಿದೆ. ಕೋಲಾರದಲ್ಲಿ 13 ಜಿಲ್ಲಾ ಪಂಚಾಯತ್ ಮತ್ತು 46 ತಾಲ್ಲೂಕು ಪಂಚಾಯತ್ ಕ್ಷೇತ್ರಗಳಿಗೆ ಸ್ಪರ್ಧಿಸುತ್ತಿದ್ದು, ಗುಲ್ಬರ್ಗ ಜಿಲ್ಲೆಯಲ್ಲಿ 6 ಜಿಲ್ಲಾ ಪಂಚಾಯತ್ ಹಾಗೂ 27 ತಾಲ್ಲೂಕು ಪಂಚಾಯತ್ ಕ್ಷೇತ್ರಗಳಿಗೆ ಸ್ಪರ್ಧಿಸಲಾಗುತ್ತಿದೆ. ಜಿಲ್ಲಾವಾರು ವಿವರ ಈ ಕೆಳಗಿನಂತಿದೆ.

ಜಿಲ್ಲೆ	ಜಿಲ್ಲಾ ಪಂಚಾಯತ್	ತಾಲ್ಲೂಕು ಪಂಚಾಯತ್
ಕೋಲಾರ	13	46
ಗುಲ್ಬರ್ಗ	6	27
ದ.ಕ	1	10
ಉಡುಪಿ	1	7
ಬೆಂಗಳೂರು	-	2
ಬಳ್ಳಾರಿ	1	4
ರಾಯಚೂರು	1	1
ಉ.ಕನ್ನಡ	1	-
ಕೊಪ್ಪಳ	2	5
ಕೊಡಗು	2+1*	1+2*
ಮಂಡ್ಯ	1	3
ಮೈಸೂರು	1	3
ತುಮಕೂರು	-	2
ಬೆಳಗಾಂ(ರಾಮದುರ್ಗ)	2	2
ಒಟ್ಟು	30+1	111+4

* ಸಿಪಿಐ(ಎಂ) ಬೆಂಬಲಿತ ಅಭ್ಯರ್ಥಿಗಳು

ನಿಯಂತ್ರಿಸಲೆಂದು ರೂಪಿಸಿದ ಗ್ರಾಮ ಸಭೆಗಳು, ವಾರ್ಡ್ ಸಭೆಗಳು ಸರಿಯಾಗಿ ನಡೆಯುತ್ತಿಲ್ಲ. ರೈತರು, ಕೂಲಿಕಾರರು ಕೆಲಸಕ್ಕೆ ಹೊಲಗದ್ದೆಗಳಿಗೆ ಹೋದ ಸಮಯದಲ್ಲಿ ಬಂದು ಕಾಟಾಚಾರಕ್ಕೆ ಕೇವಲ ದಾಖಲು ಮಾಡಿಕೊಳ್ಳಲೆಂದೇ ಸಭೆಗಳನ್ನು ನಡೆಸುವ ಪ್ರವೃತ್ತಿ ಇದೆ. ಇದರಿಂದ ಫಲಾನುಭವಿಗಳ ಆಯ್ಕೆಯಲ್ಲಿ ಪಕ್ಷಪಾತ, ಗ್ರಾಮದ ಕಾಮಗಾರಿಗಳಲ್ಲಿ ದೊಡ್ಡ ಪ್ರಮಾಣದ ಅನ್ಯಾಯಗಳು ಜರುಗುತ್ತಿವೆ.

ಪಂಚಾಯತ್ ಸಂಸ್ಥೆಗಳ ಚುನಾವಣೆಗಳಲ್ಲಿ ಹಣದ ಹೊಳೆಯೇ ಹರಿದು, ಬಡ ಜನರ ಅಶಕ್ತೀಕರಣವಾಗಿ, ಗ್ರಾಮದ ಎಲ್ಲಾ ಸಾಮಾನ್ಯ ಜನರ ಅಧಿಕಾರದ ಸಾಧನವಾಗಬೇಕಾದ ಪಂಚಾಯತ್ ಸಂಸ್ಥೆಗಳು ಹಣವಂತರ, ದೊಡ್ಡ ಭೂಮಾಲಕರ, ಕಂಟ್ರಾಕ್ಟರ್ (ಗುತ್ತಿಗೆದಾರರು)ಗಳ ಕೈಯಲ್ಲಿ ಸಿಕ್ಕು ನಲುಗುತ್ತಿವೆ.

ತೀವ್ರ ಭೂ ಸುಧಾರಣೆಯಾಗಬೇಕು - ಜನರ ನಿಯಂತ್ರಣ ಸಾಧಿಸಬೇಕು

ಇಂತಹ ಪರಿಸ್ಥಿತಿ ನಿವಾರಣೆಯಾಗಬೇಕಾದರೆ ಗ್ರಾಮಾಂತರ ಪ್ರದೇಶಗಳಲ್ಲಿ ದರ್ಬಾರು ಮಾಡುವ, ಚುನಾವಣೆಗಳಲ್ಲಿ ಭ್ರಷ್ಟಾಚಾರವೆಸಗುವವರ ಸೊಕ್ಕಿಗೆ ಕಾರಣವಾದ ಹೆಚ್ಚುವರಿ ಭೂಮಿಯನ್ನು ತೀವ್ರ ಭೂ ಸುಧಾರಣೆಯ ಮೂಲಕ ವಶಪಡಿಸಿಕೊಂಡು ಬಡವರಿಗೆ ಹಂಚಬೇಕು. ಗೇಣಿದಾರರು ಇರುವ ಕಡೆ ಆ ಭೂಮಿಯನ್ನು ಖಾಯಮ್ಮಾಗಿ ಸಾಗುವಳಿ ಮಾಡುವ ಹಕ್ಕನ್ನು ಅವರಿಗೆ ನೀಡಬೇಕು. ಸರ್ಕಾರಿ ಭೂಮಿಯನ್ನು ಸಾಗುವಳಿಗಾಗಿ, ನಿವೇಶನಗಳಿಗಾಗಿ ಬಡ ರೈತರಿಗೆ ಕೂಲಿಕಾರರಿಗೆ ನೀಡಬೇಕು. ಸಂಜೆ ಅಥವಾ ಮುಂಜಾನೆ ಎಲ್ಲರೂ ಗ್ರಾಮದಲ್ಲಿರುವಾಗ ಗ್ರಾಮ ಸಭೆಗಳನ್ನು ವಾರ್ಡ್ ಸಭೆಗಳನ್ನು ದಿನಕ್ಕೊಂದರಂತೆ ವಿವರವಾಗಿ ನಡೆಸಬೇಕು. ಹಾಗೇ ನಡೆಸದ ಪಂಚಾಯಿತಿಗಳ ಮೇಲೆ, ಪಂಚಾಯತ್ ಸಂಸ್ಥೆಗಳ ಭ್ರಷ್ಟಾಚಾರದ ಮೇಲೆ ದೂರು ಸಲ್ಲಿಸುವ ಅವಕಾಶ, ಹಾಗೂ ಅವುಗಳ ತನಿಖೆಗಾಗಿ ಪ್ರತ್ಯೇಕ ವ್ಯವಸ್ಥೆಯಾಗಬೇಕು. ವಾರ್ಡ/ಗ್ರಾಮ ಮಟ್ಟಗಳಲ್ಲಿ ಜಾಗೃತ ಸಮಿತಿಗಳ ರಚನೆ ಹಾಗೂ ಕಾಮಗಾರಿಗಳ ಬಿಲ್‌ಗಳನ್ನು ಈ ಸಮಿತಿಗಳ ಮೂಲಕ ಮಂಜೂರಾಗುವಂತೆ ಕಾನೂನು ತಿದ್ದುಪಡಿ ಮಾಡಬೇಕು.

ಪಶ್ಚಿಮ ಬಂಗಾಳದ ಪಂಚಾಯತ್ ವ್ಯವಸ್ಥೆ, ಕೇರಳದ ಜನ ರೂಪಿತ ಯೋಜನೆಗಳು

...ಂಗ್ರೆಸ್‌ನ್ನು ಎದುರಿಸಿ, ಪಾಠ ಕಲಿಸಿ - ಸಿಪಿಐ[ಎಂ] ಬಲವನ್ನು ಹೆಚ್ಚಿಸಿ

...ಲು ಯತ್ನಿಸುವ ಬಂಡವಾಳಶಾಹಿ ...ಾಗವೇ ಈ ಚುನಾವಣೆಗಳು ಎಂದು ...ರ್ಗದಲ್ಲಿ ಸೂಕ್ತ ಬಜೆಟ್ ಬೆಂಬಲ - ... ಮೂಲಭೂತ ಸಮಸ್ಯೆಗಳಿಗೆ ಪರಿಹಾರ ... ಹಿಡಿತ ಸಾಧಿಸಬೇಕೆಂಬ ತನ್ನ ...ಾಯತ್ ಚುನಾವಣಾ ಕಣಕ್ಕಿಳಿದಿದೆ.

...ರ್ಗದರ್ಶಿ ಜಿ.ಎನ್.ನಾಗರಾಜ್

...ವಣೆಗಳು - 2005

...ದ್ರೀಕರಣ

... ರಾಜ್ಯ ವ್ಯವಸ್ಥೆ -



28 ವರ್ಷಗಳ ಕಾಲ ರಾಜ್ಯ ಸರ್ಕಾರ ನಡೆಸಿ ದಾಖಲೆ ಮಾಡಿರುವ ಪಶ್ಚಿಮ ಬಂಗಾಳ ಸಿಪಿಐ(ಎಂ) ನೇತೃತ್ವದ ಎಡ ರಂಗದ ಸರ್ಕಾರದ ಸಾಧನೆಗೆ ಅತ್ಯುತ್ತಮ ಪಂಚಾಯತ್ ವ್ಯವಸ್ಥೆಯೇ ಅಡಿಪಾಯ. ತೀವ್ರವಾದ ಭೂಸುಧಾರಣೆಯನ್ನು ಪಂಚಾಯತ್ ಸಂಸ್ಥೆಗಳ ಮೂಲಕವೇ ಜಾರಿ ಮಾಡಿ, ಭೂಹೀನರಿಗೆ, ಬಡ ರೈತರಿಗೆ, ದಲಿತರಿಗೆ 22 ಲಕ್ಷ ಎಕರೆ ಭೂಮಿ, 30 ಲಕ್ಷ ಗೇಣಿದಾರರಿಗೆ ಖಾಯಂ ಸಾಗುವಳಿ ಹಕ್ಕು ನೀಡಿದ ಫಲವಾಗಿ ಅಲ್ಲಿ ತಾಲೂಕು ಪಂಚಾಯಿತಿ, ಜಿಲ್ಲಾ ಪಂಚಾಯ್ತಿಗಳಲ್ಲಿ ಸದಸ್ಯರಾಗಿ ಅಧ್ಯಕ್ಷರಾಗಿ ಸಾಮಾನ್ಯ ರೈತರು, ಬಡ ರೈತರು ಹಾಗೂ ಕೂಲಿಕಾರರು ಆಯ್ಕೆಯಾಗುತ್ತಾರೆ. ಪಂಚಾಯ್ತಿಗಳಿಗೆ ಕೇಂದ್ರ ಸರ್ಕಾರದ ಗ್ರಾಮೀಣ ಅಭಿವೃದ್ಧಿ ಯೋಜನೆಗಳ ಪೂರ್ಣಹಣ ಹಾಗೂ ರಾಜ್ಯ ಸಕಾರದ ಬಜೆಟ್‌ನ ಶೇ55 ಭಾಗ ಪಂಚಾಯತ್ ಸಂಸ್ಥೆಗಳಿಗೇ ದೊರೆಯುತ್ತದೆ. ಗ್ರಾಮ ಸಭೆ, ವಾರ್ಡ್ ಸಭೆ, ವಾರ್ಡ್ ಮಟ್ಟದ ಸಮಿತಿಗಳ ವಿಚಕ್ಷಣೆಯಿಂದಾಗಿ ಯೋಜನೆಗಳಲ್ಲಿ ಭ್ರಷ್ಟಾಚಾರವಾಗದಂತೆ ನಿಯಂತ್ರಣ ಸಾಧ್ಯವಾಗಿದೆ. ಇಲ್ಲಿ ಅರಣ್ಯ ಅಭಿವೃದ್ದಿ, ಕೃಷಿ, ಪಶುಸಂಗೋಪನೆ, ಗ್ರಾಮೀಣ ಕೈಗಾರಿಕೆ, ಆರೋಗ್ಯ ವ್ಯವಸ್ಥೆ ಕಾಮಗಾರಿ, ವಿದ್ಯುತ್ ಸೀಡಿಕೆ, ಸಣ್ಣ ನೀರಾವರಿಗಳ ಜೊತೆಗೆ ಭೂ ಸುಧಾರಣೆ, ಭೂದಾಖಲೆಗಳ ಅಧಿಕಾರವೂ ಪಂಚಾಯತ್‌ಗಳದ್ದೇ ಆಗಿದೆ.

ಪಂಚಾಯತ್‌ಗಳದ್ದೆ ಒಂದು ಸಿಬ್ಬಂದಿ ವ್ಯವಸ್ಥೆ, ನಿರ್ದೇಶನಾಲಯ ಇದೆ. ಇವುಗಳ ಸಾಧನೆ ವಿಶ್ವ ಸಂಸ್ಥೆಯ ಅಂಗ ಸಂಸ್ಥೆಗಳಿಂದಲೇ ಪ್ರಶಂಸೆಗೊಳಗಾಗಿದೆ. ಈ ಮಾದರಿಯನ್ನು ಅನುಸರಿಸಿಯೇ ಕೇಂದ್ರ ಸರ್ಕಾರ ಸಂವಿಧಾನಕ್ಕೆ 73 ನೇ ತಿದ್ದುಪಡಿ ಮಾಡಿ ಪಂಚಾಯತ್ ರಾಜ್ಯ ವ್ಯವಸ್ಥೆಯನ್ನು ಬಲಪಡಿಸಿದ್ದು. ಹೀಗೆ ದೇಶಕ್ಕೆ ಮಾದರಿಯಾಗುವಂತೆ ವ್ಯವಸ್ಥೆಯನ್ನು ರೂಪಿಸಿ ಅದು ಬಡವರ ನಿಯಂತ್ರಣದಲ್ಲಿರುವಂತೆ ಮಾಡಿ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಿದ ಕೀರ್ತಿ ಸಿಪಿಐ(ಎಂ)ಗೆ ಸೇರಿದೆ.

ಕೇಂದ್ರ ಸರ್ಕಾರ, ದಿಲ್ಲಿಯ ಯೋಜನಾ ಆಯೋಗ, ರಾಜ್ಯ ಸರ್ಕಾರಗಳು ಒಂದೇ ಮಂತ್ರ ಎನ್ನುವಂತೆ ನಿಯಮಗಳನ್ನು ಮಾರ್ಗದರ್ಶಿ ಸೂತ್ರಗಳನ್ನು ಮಾಡುವುದಕ್ಕೆ ಬದಲಾಗಿ ಕೇರಳ ಹಾಗೂ ಪ.ಬಂಗಾಳದಲ್ಲಿ ಗ್ರಾಮಗಳಿಗೆ ಬೇಕಾದ ಅಭಿವೃದ್ಧಿ ಯೋಜನೆಗಳಿಗೆ ಆಯಾ ಗ್ರಾಮದ ಜನರೇ ತಮಗೆ ಬೇಕಾದ ಯೋಜನೆಗಳನ್ನು ರೂಪಿಸಿ ತಾವೇ ಜಾರಿ ಮಾಡಲು ಅವಕಾಶ ನೀಡಿದ ಉದಾಹರಣೆ ಬೇರೆ ಎಲ್ಲಿಯೂ ಇಲ್ಲ.

ಬಿಜೆಪಿ ಕೋಮುವಾದ; ರೈತ ವಿನಾಶದ ಧೋರಣೆಗಳು

ಇತ್ತೀಚಿಗೆ ದೇಶವನ್ನು 6 ವರ್ಷಗಳ ಕಾಲ ಆಳಿ ಗ್ರಾಮೀಣ ಪ್ರದೇಶವನ್ನು ಪೂರ್ಣವಾಗಿ ನಿರ್ಲಕ್ಷಿಸಿದ ವಿಶ್ವ ಬ್ಯಾಂಕ್, ವಿಶ್ವ ವ್ಯಾಪಾರ ಸಂಸ್ಥೆಗಳ ಶರತ್ತುಗಳಿಗೆ ರೈತರನ್ನು ಕೂಲಿಕಾರರನ್ನು ಬಲಿ ಕೊಟ್ಟು, ನೀರಾವರಿ, ಗ್ರಾಮೀಣ ಅಭಿವೃದ್ದಿ ಬರಗಾಲ ಪರಿಹಾರಗಳಿಗೆ ಹಣವನ್ನು ತೀವ್ರವಾಗಿ ಕಡಿತಮಾಡಿದ ಬಿಜೆಪಿ ಹಾಗೂ ಜೆಡಿ(ಯು) ಮೊದಲಾದ ಪಕ್ಷಗಳಿಗೆ, ದೇಶಾದ್ಯಂತ ಹಿಂದು ಮುಸ್ಲಿಂ ಗಲಭೆಗಳಿಗೆ ಕಾರಣವಾದ ಮತ್ತು ಕೋಮುವಾದವನ್ನು ಬೆಳೆಸುತ್ತಿರುವ ಬಿಜೆಪಿಗೆ ದೇಶದ ಜನತೆ ತಕ್ಕ ಪಾಠ ಕಲಿಸಿದ್ದಾರೆ. ರಾಜ್ಯದಲ್ಲಿ ಹೆಚ್ಚು ಶಾಸಕರಿರುವ ಬಿಜೆಪಿಯು ಬಾಬಾ ಬುಡನ್ ಗಿರಿ ವಿವಾದ, ಗೋಯಾತ್ರೆಗಳ ಹೆಸರಿನಲ್ಲಿಯೂ ಅಲ್ಲಲ್ಲಿ ದರ್ಗಾ ಮಸೀದಿಗಳ ಮೇಲೆ ಧಾಳಿಯೆಸಗಿ ಕೋಮುಗಲಭೆಗಳನ್ನು ಹುಟ್ಟುಹಾಕಲು ನಿರಂತರ ಪ್ರಯತ್ನ ನಡೆಸಿದೆ. ಪಕ್ಷದೊಳಗೆ ಅಖಿಲ ಭಾರತ ಮಟ್ಟದಲ್ಲಿ ಹಾಗೂ ರಾಜ್ಯದಲ್ಲಿ ತಮ್ಮ ತಮ್ಮಲ್ಲಿಯೇ ಕಿತ್ತಾಡಿಕೊಳ್ಳುತ್ತಾ ಜನರ ಸಮಸ್ಯೆಗಳನ್ನು ಕಡೆಗಣಿಸಿದೆ. ಇಂತಹ ಬಿಜೆಪಿಯನ್ನು ಪಂಚಾಯತ್ ಚುನಾವಣೆಗಳಲ್ಲಿ ಜನತೆ ಮಣ್ಣು ಮುಕ್ಕಿಸಬೇಕಿದೆ.

ಕಾಂಗ್ರೆಸ್ ಪಕ್ಷದ ರೈತ ವಿರೋಧಿ ನೀತಿಗಳು

ಕೇಂದ್ರದಲ್ಲಿ ಹಾಗೂ ರಾಜ್ಯದಲ್ಲಿ ಇಂದು ಅಧಿಕಾರದ ಚುಕ್ಕಾಣಿ ಹಿಡಿದಿರುವ ಕಾಂಗ್ರೆಸ್, ಹಿಂದಿನ ಬಿಜೆಪಿ ಸರ್ಕಾರದ ಆರ್ಥಿಕ ನೀತಿಗಳನ್ನೆ ಮುಂದುವರೆಸುತ್ತಾ ಗ್ರಾಮೀಣ ಜನರಿಗೆ ಮತ್ತಷ್ಟು ಸಮಸ್ಯೆಗಳನ್ನು ತರುತ್ತಿದೆ. ಕೃಷಿ ಉತ್ಪನ್ನಗಳನ್ನು ಅತ್ಯಂತ ಅಗ್ಗವಾಗಿ ವಿದೇಶದಿಂದ ಆಮದು ಮಾಡುವುದು, ಕೈಗಾರಿಕೆಗಳನ್ನು ನಾಶ ಮಾಡುವುದು, ಬೀಜ, ಔಷಧಿಗಳ ಬೆಲೆ ವಿಪರೀತವಾಗಿ ಏರುವ ವಿಶ್ವವ್ಯಾಪಾರ ಸಂಸ್ಥೆಯ ಒಪ್ಪಂದಗಳನ್ನು ಮಾಡಿಕೊಳ್ಳಲು ಹೊರಟಿದೆ. ಗ್ರಾಮೀಣ ಉದ್ಯೋಗ ಯೋಜನೆಯನ್ನು ದೇಶಾದ್ಯಂತ ಜಾರಿಗೆ ತರಲು, ಅದಕ್ಕೆ ಹಣ ಬಿಡುಗಡೆ ಮಾಡಲು ಅನಗತ್ಯ ವಿಳಂಬ ಮಾಡುತ್ತಿದೆ. ಅನೇಕ ಯೋಜನೆಗಳನ್ನು ಪಂಚಾಯತ್ ಗಳಿಗೆ ಹಸ್ತಾಂತರಿಸುತ್ತೇವೆಂದು ಅದಕ್ಕೆ ಬೇಕಾದ ಹಣ ನೀಡದೇ ಸಿಬ್ಬಂದಿ ಕಡಿತ ಮಾಡಿ ತನ್ನ ಹೊಣೆಗಾರಿಕೆಯಿಂದ ನುಣುಚಿಕೊಳ್ಳಲು ಯತ್ನಿಸುತ್ತಿದೆ. ಕಾಂಗ್ರೆಸ್‌ನ ಬಗ್ಗೆ ತೀವ್ರ ಅತೃಪ್ತಿಯನ್ನು ಕಾಂಗ್ರೆಸ್ಸನ್ನು ತಿರಸ್ಕರಿಸುವ ಮೂಲಕ ವ್ಯಕ್ತಗೊಳಿಸಬೇಕಿದೆ. ಆ ಮೂಲಕ ಕಾಂಗ್ರೆಸ್‌ಗೆ ಪಾಠ ಕಲಿಸಬೇಕಿದೆ.

ಪಂಚಾಯತ್ ವ್ಯವಸ್ಥೆ, ಗ್ರಾಮೀಣ ಅಭಿವೃದ್ಧಿಯಲ್ಲಿ ದೇಶಕ್ಕೆ ಮಾದರಿಯಾದ, ಕೋಮುವಾದ, ಜಾತಿವಾದಗಳ ವಿರುದ್ಧ ದೃಢವಾಗಿ ಹೋರಾಡುವ, ವಿಶ್ವಬ್ಯಾಂಕ್- ವಿಶ್ವ ವ್ಯಾಪಾರ ಸಂಸ್ಥೆ, ವಿದೇಶಿ ಬಂಡವಾಳದ ಹಿಡಿತದ ವಿರುದ್ಧ, ರೈತರ ಸಂರಕ್ಷಣೆಗಾಗಿ, ಬಡವರಿಗೆ ಉದ್ಯೋಗ, ಹಳದಿ ಕಾರ್ಡ್, ಮನೆ ನಿವೇಶನಗಳಿಗಾಗಿ, ಬಡವರಿಗೆ ಭೂ ಹಂಚಿಕೆಗಾಗಿ ಸೆಣಸಾಡುತ್ತಿರುವ ಸಿಪಿಐ(ಎಂ) ಪಕ್ಷವನ್ನು ಗೆಲ್ಲಿಸಿ ಜನತೆ ಬೆಂಬಲಿಸಬೇಕಿದೆ.

ಸಿಪಿಐ(ಎಂ) ಪಕ್ಷವು ಪಂಚಾಯ್ತಿಗಳಲ್ಲಿ ಹಾಗೂ ಹೊರಗೂ ಜನತೆಯ ಹಿತವನ್ನು ಎತ್ತಿ ಹಿಡಿಯಲು ನಿರಂತರ ಹೋರಾಟ ನಡೆಸುತ್ತಾ ಬಂದಿದೆ. ○

ಪಂಚಾಯತ್ ವ್ಯವಸ್ಥೆ ಬಗ್ಗೆ ಸಿ.ಪಿ.ಐ(ಎಂ)ನ ಕಣ್ಣೋಟ ಮತ್ತು ಗುರಿ

- ಗ್ರಾಮೀಣ ಅಭಿವೃದ್ದಿಯ ಎಲ್ಲ ಅಧಿಕಾರ ಹಾಗೂ ಹಣವನ್ನು ಪಂಚಾಯತ್ ಸಂಸ್ಥೆಗಳಿಗೆ ವರ್ಗಾಯಿಸಬೇಕು. ರಾಜ್ಯ ಬಜೆಟ್ಟಿನ ಶೇ.50ರಷ್ಟನ್ನು ಪಂಚಾಯತ್‌ಗಳಿಗೆ ನೀಡಬೇಕು. ಪ್ರತಿ ಗ್ರಾಮ ಪಂಚಾಯತ್ ಅನುದಾನವನ್ನು ರೂ.10 ಲಕ್ಷಕ್ಕೆ ಹೆಚ್ಚಿಸಬೇಕು.
- ಪಂಚಾಯತ್ ಸಂಸ್ಥೆಗಳಿಗೆ ತಜ್ಞರಾದ ನಿರ್ದಿಷ್ಠ ಸಿಬ್ಬಂದಿ ವ್ಯವಸ್ಥೆ ರೂಪಿಸಬೇಕು. ಪಂಚಾಯತ್ ರಾಜ್ ಹಾಗೂ ಗ್ರಾಮೀಣ ಅಭಿವೃದ್ಧಿ ನಿರ್ದೇಶನಾಲಯ ಸ್ಥಾಪಿಸಬೇಕು. ಗ್ರಾಮ ಪಂಚಾಯ್ತಿ ಸಿಬ್ಬಂದಿ ಖಾಯಂಗೊಳಿಸಬೇಕು.
- ಭ್ರಷ್ಟಾಚಾರ ನಿರ್ಮೂಲನ ದೃಷ್ಟಿಯಿಂದ ಗ್ರಾಮಸಭೆ, ವಾರ್ಡ ಸಭೆಗಳನ್ನು ವ್ಯವಸ್ಥಿತವಾಗಿ ಜನ ಇರುವ ವೇಳೆ ನಡೆಸಬೇಕು. ಕ್ರಿಯಾ ಯೋಜನೆಗಳನ್ನು ರೂಪಿಸಿ ಗ್ರಾಮ ಸಭೆಯಲ್ಲಿ ಅಂಗೀಕಾರ ಪಡೆಯಬೇಕು. ವಾರ್ಡ್ ಜಾಗೃತ ಸಮಿತಿಗಳನ್ನು ರೂಪಿಸಿ, ಅವುಗಳ ಅಂಗೀಕಾರವಿಲ್ಲದೆ ಕಾಮಗಾರಿಗಳ ಬಿಲ್ ಪಾವತಿ ಮಾಡಬಾರದು.
- ಪಂಚಾಯತ್ ಸಂಸ್ಥೆಗಳನ್ನು ದೊಡ್ಡ ಭೂಮಾಲಿಕರ ಕಂಟ್ರಾಕ್ಟರ್‌ಗಳ, ಶ್ರೀಮಂತರ ಹಿಡಿತದಿಂದ ಮುಕ್ತಗೊಳಿಸಬೇಕು. ತೀವ್ರ ಭೂಸುಧಾರಣೆ ಜಾರಿಗೆ ತರಬೇಕು. ಬಡವರಿಗೆ ಭೂಮಿ ಹಂಚಬೇಕು.
- ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಎಲ್ಲಾ ಜಿಲ್ಲೆಗಳಲ್ಲಿ ಜಾರಿಗೆ ತರಬೇಕು. ಅಂತ್ಯೋದಯ, ಹಳದಿ ಕಾರ್ಡಗಳನ್ನು ಹೆಚ್ಚು ಮಾಡಬೇಕು.
- ವಿಶ್ವ ಬ್ಯಾಂಕಿನ ಒತ್ತಡಕ್ಕೊಳಗಾಗಿ ತರುತ್ತಿರುವ ಸ್ವಯಂ ಘೋಷಿತ ಆಸ್ತಿತೆರಿಗೆ, ತೆರಿಗೆ ಹೆಚ್ಚಳ, ಕುಡಿಯುವ ನೀರು ದರ ಹೆಚ್ಚಳಗಳನ್ನು ರದ್ದು ಪಡಿಸಬೇಕು.
- ಬಡತನ ನಿರ್ಮೂಲನ ಯೋಜನೆಗಳಿಗೆ ಹೆಚ್ಚು ಹಣ ನೀಡಿ ಗ್ರಾಮ ಸಭೆಗಳ ನಿಯಂತ್ರಣಕ್ಕೊಳಪಡಿಸಿ.
- ಗ್ರಾಮೀಣ ವಸತಿ ಹಾಗೂ ನಿವೇಶನ ಹಂಚಿಕೆಯ ಅಧಿಕಾರವನ್ನು ಗ್ರಾಮ ಪಂಚಾಯತ್‌ಗಳಿಗೆ ನೀಡಿ. ಭೂಮಿ ದಾಖಲೆಯನ್ನು ಪಂಚಾಯತ್‌ಗಳ ಹಿಡಿತಕ್ಕೆ ನೀಡಿ. ಪಂಚಾಯತ್‌ಗಳ ಮೇಲೆ ಜಿಲ್ಲಾಧಿಕಾರಿ, ಉಪ ವಿಭಾಗಧಿಕಾರಿಗಳ ಹಿಡಿತ ತಪ್ಪಿಸಬೇಕು.
- ಆಯಾಯ ಗ್ರಾಮಗಳ ಯೋಜನೆಗಳನ್ನು ಆಯಾ ಗ್ರಾಮದ ಜನರೆ ರೂಪಿಸಿಕೊಳ್ಳುವ ಜನರೂಪಿತ ಯೋಜನೆ ಜಾರಿಗೆ ತರಬೇಕು.
- ಜಿಲ್ಲಾ ಯೋಜನಾ ಸಮಿತಿಗಳನ್ನು ಸದೃಢಗೊಳಿಸಬೇಕು.
- ಗ್ರಾಮ ಪಂಚಾಯತ್ ಸದಸ್ಯರಿಗೆ 1000 ರೂಪಾಯಿ, ತಾಲೂಕು ಪಂಚಾಯತ್ ಸದಸ್ಯರಿಗೆ 2000 ರೂ, ಜಿಲ್ಲಾ ಪಂಚಾಯತ್ ಸದಸ್ಯರಿಗೆ 3000 ರೂಪಾಯಿ ಸಂಭಾವನೆ ನೀಡಿ.
- ಪಂಚಾಯತ್ ವ್ಯವಸ್ಥೆಯ ಹೊರಗೆ, ನೀರು ನಿರ್ವಹಣ ಸಮಿತಿ, ಶಾಲಾ ಅಭಿವೃದ್ಧಿ ಸಮಿತಿ, ಆಶ್ರಯ ಸಮಿತಿ, ಬರ ಪರಿಹಾರ ಕಾಮಗಾರಿ ಸಮಿತಿ ಇತ್ಯಾದಿಗಳನ್ನು ರಚಿಸುವುದನ್ನು ನಿಲ್ಲಿಸಿ. ಪಂಚಾಯತ್ ಗಳ ಅಡಿಯಲ್ಲಿ ತಂದು ಪಂಚಾಯತ್ ಗಳನ್ನು ಬಲ ಪಡಿಸಿ ಪಂಚಾಯತ್‌ಗಳನ್ನು ಬಲಪಡಿಸುವಂತೆ, ಅಧಿಕಾರಿಗಳನ್ನು ಅವುಗಳಿಗೆ ಅಧೀನರನ್ನಾಗಿ ಮಾಡಬೇಕು.

ಪಿ.ಎಫ್ ಬಡ್ಡಿ ಇಳಿಕೆ : ಸಿಐಟಿಯು ವಿರೋಧ

ಕಾರ್ಮಿಕರ ಭವಿಷ್ಯ ನಿಧಿಗೆ ನೀಡುವ ಬಡ್ಡಿದರನ್ನು ಕೇಂದ್ರ ಸರ್ಕಾರ ಕಡಿತಗೊಳಿಸುವುದಕ್ಕೆ ಕಾರ್ಮಿಕ ಸಂಘಟನೆಗಳು ತೀವ್ರ ವಿರೋಧ ವ್ಯಕ್ತಪಡಿಸಿವೆ. ಕಾರ್ಮಿಕರ ಭವಿಷ್ಯನಿಧಿ ಸಂಘಟನೆಯ ಕೇಂದ್ರ ಮಂಡಳಿಯಲ್ಲಿ ಬಡ್ಡಿದರ ಪ್ರಮಾಣ ಕುರಿತು ಈ ಕೆಳಗಿನಂತೆ ನಿರ್ಣಯ ಕೈಗೊಳ್ಳಲಾಗಿದೆ.

2005-06 ನೇ ಸಾಲಿಗೆ ಭವಿಷ್ಯನಿಧಿ ಮೇಲಿನ ಬಡ್ಡಿಯನ್ನು ಶೇ.8ಕ್ಕೆ ಇಳಿಸುವುದಾಗಿ ಹೇಳಿದ ಇಪಿಎಫ್‌ಒ ಪ್ರಸ್ತಾವನೆಯನ್ನು ಕೇಂದ್ರಮಂಡಳಿಯಲ್ಲಿ ಕಾರ್ಮಿಕರ ಪ್ರತಿನಿಧಿಗಳು ತೀವ್ರವಾಗಿ ವಿರೋಧಿಸಿದ್ದಾರೆ.

ಕಾರ್ಮಿಕರ ಪ್ರತಿನಿಧಿಗಳ ಅಭಿಪ್ರಾಯಗಳನ್ನು ಪರಿಗಣಿಸಿ ಬಡ್ಡಿಕುರಿತ ನಿರ್ಣಯ ಕೈಗೊಳ್ಳಲು ಕೇಂದ್ರ ಟ್ರಸ್ಟೀ ಮಂಡಳಿಯು ಅಧ್ಯಕ್ಷರಿಗೆ ಅಧಿಕಾರ ನೀಡಿದೆ ಹಾಗೂ ಬಡ್ಡಿಯನ್ನು ನಿಗಧಿಪಡಿಸುವ ಈ ಪ್ರಕ್ರಿಯೆಯಲ್ಲಿ ಪ್ರಧಾನಿಗಳು ಮಧ್ಯಪ್ರವೇಶಿಸಬೇಕೆಂದೂ ಮಂಡಳಿಯು ಕೋರಿದೆ. ಈ ಹಿನ್ನೆಲೆಯಲ್ಲಿ ಕಾರ್ಮಿಕ ಸಚಿವಾಲಯ ಪ್ರಕಟಿಸುವ ಬಡ್ಡಿದರವು ಅನ್ವಯಿಸುವುದಿಲ್ಲ.

ಭವಿಷ್ಯನಿಧಿಯ ಮೇಲಿನ ಬಡ್ಡಿದರ ಇಳಿಕೆಯನ್ನು ಸಿಐಟಿಯು ತೀವ್ರವಾಗಿ ವಿರೋಧಿಸಿದೆ ಹಾಗೂ ಈ ವಿಷಯವಾಗಿ ಕೇಂದ್ರ ಮಂಡಳಿಯ ಒಳಗೂ ಹೊರಗೂ ಕಾರ್ಮಿಕರ ವ್ಯಾಪಕ ಚಳುವಳಿಯನ್ನು ಸಂಘಟಿಸುವುದಾಗಿ ಸಿಐಟಿಯು ಎಚ್ಚರಿಸಿದೆ.



ಅನಗತ್ಯ ಔಷಧಿಗಳು !

ನಮ್ಮ ಆರೋಗ್ಯದ ಜವಾಬ್ದಾರಿಯನ್ನು ಕೇವಲ ವೈದ್ಯರು - ಔಷಧ ಕಂಪನಿಗಳಿಗೆ ಬಿಡಲಾಗದು - ಓದಿ

ಔಷಧಿಗಳು ನೋವು ನಿವಾರಿಸಲು, ರೋಗ ಗುಣಪಡಿಸಲು, ಜೀವ ಉಳಿಸಲು ಉತ್ತಮ ಸಾಧನಗಳಾಗಿವೆ. ಆಧುನಿಕ ವಿಜ್ಞಾನದಲ್ಲಿ ಹಲವಾರು ಆವಿಷ್ಕಾರಗಳಿರುವುದರಿಂದ ಅನೇಕ ಔಷಧಿಗಳು ಲಭ್ಯವಾಗುತ್ತವೆ. ಆದ್ದರಿಂದ ನಮ್ಮ ಮಾರುಕಟ್ಟೆಯಲ್ಲಿ ಇಂದು 20 ವರ್ಷ ಹಿಂದಕ್ಕೆ ಸಿಗುತ್ತಿದ್ದ ಔಷಧಿಗಿಂತ ಹೆಚ್ಚು ಔಷಧಿಗಳು ಸಿಗಲೇಬೇಕಲ್ಲವೇ, ನಿಜ, ಆದರೆ ಮಾರುಕಟ್ಟೆಯಲ್ಲಿ ಔಷಧಿ ಸಂಖ್ಯೆ ಹೆಚ್ಚಾಗಿರಲು ಹೊಸ ಔಷಧಿಗಳು ಕಾರಣವಲ್ಲ, ಸಮ್ಮಿಶ್ರ ಔಷಧಿಗಳು ಕಾರಣವಾಗಿವೆ.

ಎರಡು ಅಥವಾ ಹೆಚ್ಚು ಜಾತಿಸೂಚಕ (Generic) ಔಷಧಿಗಳಿಂದ, ಔಷಧಿಗಳನ್ನು ತಯಾರಿಸಿ ಅದಕ್ಕೆ ಔಷಧಿ ಕಂಪೆನಿಯ ಹೆಸರು ಕೊಟ್ಟು, ಅದನ್ನು ಮಾರಲಾಗುವುದು. ಒಂದು ಔಷಧಿಯಲ್ಲಿ ಎರಡು ಅಥವಾ ಹೆಚ್ಚು ಔಷಧಿಗಳು ಇದ್ದಲ್ಲಿ ಅದನ್ನು ಸಂಮಿಶ್ರ ಔಷಧಿ ಎನ್ನುವರು. ಉದಾ : ನ್ಯೂರೋಬಿಯಾನ್ ಸಂಮಿಶ್ರ ಔಷಧಿ. ಅದರಲ್ಲಿ ವಿಟಮಿನ್ ಬಿ1, ಬಿ6, ಬಿ12 ಇರುತ್ತದೆ.

ಔಷಧಿ ಶಾಸ್ತ್ರದಲ್ಲಿ ಕೊಟ್ಟ ಔಷಧಿ ಪಟ್ಟಿಯಲ್ಲಿ, ಎಲ್ಲವೂ ಒಂದೇ ಔಷಧಿ ಘಟಕವುಳ್ಳದ್ದಾಗಿದೆ. ಯಾವುದೇ ಔಷಧಿ ಪಠ್ಯ ಪುಸ್ತಕದಲ್ಲಿಯೂ ಇದೇ ಒಂದೇ ಘಟಕ ಔಷಧಿಗಳನ್ನು ವಿವರಿಸಲಾಗಿದೆ. ವಿಶ್ವ ಆರೋಗ್ಯ ಸಂಸ್ಥೆಯೂ ಕೇವಲ ಒಂದು ಘಟಕದ ಔಷಧಿಗಳನ್ನೇ ಅಗತ್ಯ ಔಷಧಿ ಪಟ್ಟಿಯಲ್ಲಿ ಸೇರಿಸಿದೆ. ಆದರೆ ಎರಡು ಅಗತ್ಯ ಔಷಧಿಗಳನ್ನು ಸೇರಿಸಿದಾಗ್ಯೂ ಅದು ಅನಗತ್ಯ ಔಷಧಿಯೇ ಆಗುತ್ತದೆ !

ಆದ್ದರಿಂದ ಎರಡು ಅಥವಾ ಹೆಚ್ಚು ಔಷಧಿ ಘಟಕಗಳಿರುವ ಔಷಧಿಗಳು ಅನಗತ್ಯ ಔಷಧಿಗಳೆಂದು ಹೇಳಬಹುದು. ಇದು ಔಷಧಿ ಕಂಪೆನಿಯ ಸೃಷ್ಟಿ. ಲಾಭಗಳಿಸಲು ಮಾಡುವ ಹುನ್ನಾರ. ಚಿಕಿತ್ಸೆಗೆ ಎರಡು ಅಥವಾ ಹೆಚ್ಚು ಘಟಕಗಳ ಉಪಯೋಗದ ಅಗತ್ಯವಿಲ್ಲ, ಅಗತ್ಯಬಿದ್ದರೂ ವೈದ್ಯರೇ ಎರಡು ಔಷಧಿಗಳನ್ನು ಬರೆದುಕೊಡಬಹುದು. ಆದ್ದರಿಂದ ಸಂಮಿಶ್ರ ಔಷಧಿಗಳ ಉಪಯೋಗಕ್ಕಿಂತ ಅಡ್ಡ ಪರಿಣಾಮವೇ ಹೆಚ್ಚು ಹಾಗೂ ಈ ಔಷಧಿಗಳು ದುಬಾರಿಯಾಗುವುದರಿಂದ ಚಿಕಿತ್ಸೆಗೆ ಅನಗತ್ಯ ವೆಚ್ಚಮಾಡಿದಂತಾಗುತ್ತದೆ. ಸಂಮಿಶ್ರ ಔಷಧಿ 'ವಿಕೋರಿಲ್' ಉಪಯೋಗಿಸುವವರಿಗೆ ಆ ಔಷಧಿಯಲ್ಲಿ ಯಾವ ಯಾವ ಔಷಧಿ ಘಟಕವಿದೆ ಯೆಂದು ಕೆಲವು ಬಾರಿ ಗೊತ್ತೇ ಇರುವುದಿಲ್ಲ. ಅದು ನೆಗಡಿ ಕಡಿಮೆ ಮಾಡಲು ಎಂದು ಮಾತ್ರ ಗೊತ್ತಿರುತ್ತದೆ.

"ಮಾರುಕಟ್ಟೆಯಲ್ಲಿ ದೊರಕುವ ಔಷಧಿಗಳನ್ನು ಅರ್ಥಮಾಡಿಕೊಳ್ಳಲು ಕಷ್ಟವಾಗುತ್ತದೆ. ಏಕೆಂದರೆ ಹಲವಾರು ಔಷಧಿಗಳಲ್ಲಿ ಒಂದೇ ಘಟಕದ ಅಗತ್ಯ ಔಷಧಿಗಿಂತ ಹಲವಾರು ಘಟಕಗಳುಳ್ಳ ಅನಗತ್ಯ ಅಪಾಯಕಾರಿ ಸಂಮಿಶ್ರ ಔಷಧಿಗಳೇ ಹೆಚ್ಚು" ಎಂದು ಮಹಾರಾಷ್ಟ್ರದ ಔಷಧಿ ನಿಯಂತ್ರಣದ ಭ್ರಷ್ಟಾಚಾರವನ್ನು ಹೊರಗೆಳೆದ ಜಸ್ಟಿಸ್ ಲೆಂಟಿನ್, 'ಲೆಂಟಿನ್ ಸಮಿತಿಯ ವರದಿಯಲ್ಲಿ' ಹೇಳಿದ್ದಾರೆ. ಇದು ಇಂದಿಗೂ ಸತ್ಯ.

ಮಾರುಕಟ್ಟೆಯಲ್ಲಿ ಒಂದೇ ಘಟಕದ ಔಷಧಿಯ ಬದಲು ಸಂಮಿಶ್ರ ಔಷಧಿಗಳೇ ಸುಲಭವಾಗಿ ದೊರಕುತ್ತದೆ. ಈ ಔಷಧಿಗಳು ಅನಗತ್ಯ ಔಷಧಿಗಳಾಗಿರುವುದರಿಂದ ನಿಷೇಧಿಸಲು ಯೋಗ್ಯವಾಗಿವೆ. ಆದರೆ ಔಷಧಿ ಕಂಪೆನಿಗಳು 'ಈ ಔಷಧಿ ಹೆಚ್ಚು ಪರಿಣಾಮಕಾರಿ', 'ವೈಜ್ಞಾನಿಕವಾಗಿ ರುಜುವಾತಾಗಿದೆ', 'ಚಿಕಿತ್ಸೆ ಸುಲಭ' ಇತ್ಯಾದಿ ಇತ್ಯಾದಿಗಳನ್ನು ಹೇಳುತ್ತಾ ಬಂದಿವೆ ಹಾಗೂ ವೈದ್ಯರೂ ಅದನ್ನು ನಂಬಿದ್ದಾರೆ ಹಾಗೂ ಔಷಧಿ ಕಂಪೆನಿಯಿಂದ ಪ್ರಭಾವಿತರಾಗಿದ್ದಾರೆ. ಸಂಮಿಶ್ರ ಔಷಧಿಗಳಲ್ಲಿ ಅನೇಕ ಅಪಾಯಕರ ಘಟಕಗಳನ್ನು ಸೇರಿಸಿರುತ್ತಾರೆ. ಉದಾ ನೋವು ನಿವಾರಕಗಳಲ್ಲಿ ಕೆಫೀನ್. "ಸಂಮಿಶ್ರ ಔಷಧಿ ಉಪಯೋಗದಿಂದ ಯಾವ ತೊಂದರೆ" ಎಂದು ವೈದ್ಯರೇ ಪ್ರಶ್ನೆ ಕೇಳುತ್ತಾರೆ. ಅದಲ್ಲದೆ ಒಂದೇ ಘಟಕವಿರುವ ಔಷಧಿಗೆ ಏಕೆ ಹೆಚ್ಚು ಔಷಧಿಗಳನ್ನು ಸೇರಿಸಿಲ್ಲ ಎಂದು ಔಷಧಿ ಕಂಪೆನಿಯ ಮಾರಾಟಗಾರರಿಗೆ ಕೇಳುತ್ತಾರೆ. ವೈದ್ಯರೇ ಇಂತಹ ಸಂಮಿಶ್ರ ಔಷಧಿಗಳನ್ನು ಪ್ರೋತ್ಸಾಹಿಸುತ್ತಿರುವಾಗ ಔಷಧಿ ಕಂಪೆನಿಗಳು, ಸಂಮಿಶ್ರ ಔಷಧಿಗಳನ್ನು ತಯಾರಿಸುವುದು ಸಹಜ.

ಔಷಧಿ ನಿಯಂತ್ರಣ ಮಂಡಳಿ ಔಷಧಿ ತಯಾರಿಕೆಯಲ್ಲಿ ವೈಜ್ಞಾನಿಕತೆಯ ಬಗ್ಗೆ ತಲೆ ಕೆಡಿಸಿಕೊಂಡೇ ಇಲ್ಲ. ಭಾರತದಲ್ಲಿ ಔಷಧಿ ನಿಯಂತ್ರಣ ಮಂಡಳಿಯ ಬೇಜವಾಬ್ದಾರಿ, ಭ್ರಷ್ಟಾಚಾರ ಈಗಾಗಲೇ ಕರ್ನಾಟಕದಲ್ಲಿ ಸೇರಿ ಅನೇಕಕಡೆಗಳಲ್ಲೂ ಸಿದ್ಧವಾಗಿದೆ. ಆದ್ದರಿಂದಲೇ ಭಾರತದಲ್ಲಿ ಇಂತಹ ಪರಿಸ್ಥಿತಿ ಕಂಡುಬರುತ್ತದೆ. ಆದರೆ ಅನೇಕ ದೇಶಗಳಲ್ಲಿ ಈ ತರಹದ ಅನಗತ್ಯ ಔಷಧಿಗಳು ದೊರಕುವುದೇ ಇಲ್ಲ ! ಭಾರತದಲ್ಲಿ, ಅನಕ್ಷರತೆ ಹಾಗೂ ಔಷಧಿ ಅಂಗಡಿಗಳಿಂದ ಔಷಧಿ ಚೀಟಿ ಇಲ್ಲದೇ ಖರೀದಿಸುವ ಪರಿಪಾಠ ಇರುವುದರಿಂದ, ಸಂಮಿಶ್ರ ಔಷಧಿಯು ಅಪಾಯಕರ.

ಇಂತಹ ಪರಿಸ್ಥಿತಿ ಬದಲಾಗಬೇಕಾದರೆ ಜನಸಾಮಾನ್ಯರಿಗೆ ಈ ವಿಷಯ ತಿಳಿಯಬೇಕು ಹಾಗೂ ಇದರ ವಿರುದ್ಧ ಕೆಲವು ಕ್ರಮ ತೆಗೆದುಕೊಳ್ಳಬೇಕು.

- ಔಷಧಿಯನ್ನು ಖರೀದಿಸಿದ ಕೂಡಲೇ ಅದರ ಘಟಕಗಳನ್ನು ಪರೀಕ್ಷಿಸಿ
- ಒಂದಕ್ಕಿಂತ ಹೆಚ್ಚು ಘಟಕಗಳಿದ್ದಲ್ಲಿ ವೈದ್ಯರನ್ನು ವಿವರ ಕೇಳಿ.
- ಒಂದಕ್ಕಿಂತ ಹೆಚ್ಚು ಘಟಕಗಳಿರುವ ವೈಜ್ಞಾನಿಕವಾದ ಔಷಧಿಗಳು ಟ್ರೈಮೆಥೋಪ್ರಿಂ ಮತ್ತು ಸಲ್ಫಾಮೆಥಾಕ್ಸಜೋಲ್ ಇವುಗಳ ಸಮ್ಮಿಶ್ರ ಔಷಧಿಗಳಾದ ಸೆಪ್ಟ್ರಾನ್, ಬ್ಯಾಕ್ಟ್ರಿಂ ಇವು ಮಾರುಕಟ್ಟೆಯಲ್ಲಿ ದೊರೆಯುತ್ತವೆ. ಆದರೆ ಐರನ್ ಮತ್ತು ಫೋಲಿಕ್ ಆಸಿಡ್ ಈ ಸಂಮಿಶ್ರ ಔಷಧಿಗಳು ಜನರಿಗೆ ಅಗತ್ಯವಾದರೂ ಸಹ ಮಾರುಕಟ್ಟೆಯಲ್ಲಿ ದೊರಕುವುದಿಲ್ಲ. ಏಕೆಂದರೆ ಇವು ತುಂಬಾ ಅಗ್ಗದ ಔಷಧಿಗಳು. ಇದಲ್ಲಿ ಲಾಭ ಕಡಿಮೆ. ಈಸ್ಟ್ರೋಜೆನ್ ಮತ್ತು ಪ್ರೋಜೆಸ್ಟಿರೋನ್‌ಗಳ ಸಂಮಿಶ್ರ ಔಷಧಿಯಾದ ಲಿಂಡಿಯಾಲ್ ಇತ್ಯಾದಿಗಳು ಮಾರುಕಟ್ಟೆಯಲ್ಲಿ ದೊರಕುತ್ತಿವೆ.
- ಹೆಚ್ಚು ಘಟಕಗಳಿರುವ ವಿಟಮಿನ್, ಖನಿಜಗಳು ನೆಗಡಿ ಚಿಕಿತ್ಸೆಗಳ ಟಾನಿಕ್‌ಗಳನ್ನು ಉಪಯೋಗಿಸದಿರಿ. ವಿಟಮಿನ್ ಹಾಗೂ ಖನಿಜಗಳ ಕೊರತೆ ಕಂಡಲ್ಲಿ ಆ ವಿಟಮಿನ್ ಹಾಗೂ ಖನಿಜವನ್ನು ಮಾತ್ರ ಉಪಯೋಗಿಸಿ.
- ಸಕ್ಕರೆ ಕಾಯಿಲೆ, ರಕ್ತದೊತ್ತಡ ಔಷಧಿ ಉಪಯೋಗಿಸುವಾಗ ಔಷಧಿ ಘಟಕಗಳಾವುವು ಎಂದು ಕಂಡು ಹಿಡಿಯಿರಿ.
- ಸಾಮಾನ್ಯವಾಗಿ ಎಲ್ಲ ಗುಂಪಿನ ಔಷಧಿಗಳಲ್ಲೂ ಸಂಮಿಶ್ರ ಔಷಧಿಗಳಿವೆ. ಉಪಯೋಗಿಸುವಾಗ ಜಾಗರೂಕತೆ ವಹಿಸಿ.

ಮಾರುಕಟ್ಟೆಯಲ್ಲಿ ದೊರಕುವ ಅನಗತ್ಯ ಸಂಮಿಶ್ರ ಔಷಧಿಗಳು :

ನೆಗಡಿ ಚಿಕಿತ್ಸೆಗಳು - ಸಿನರಿಲ್, ಕೋಲ್ಡ್ ಆಕ್ಟ್
ನೋವು ನಿವಾರಕಗಳು- ಕ್ರೋಸಿನ್ ಪ್ಲಸ್, ಡಾರ್ಟ್ ಇತ್ಯಾದಿ
ಆಂಟಿಬಯಾಟಿಕ್‌ಗಳು - ನೋವೋಕ್ಲಾಕ್ಸ್ ಇತ್ಯಾದಿ
ಎಲ್ಲ ನೋವುನಿವಾರಕ ಮುಲಾಮುಗಳು
ಹಾರ್ಮೋನುಗಳು - ಆಕ್ಷಮ್ ಪ್ರೊಲೋಂಗೇಟಂ
ಸಕ್ಕರೆ ಕಾಯಿಲೆಗೆ ಉಪಯೋಗಿಸುವ ಔಷಧಿ - ಡಯಾನಾರ್ಮ್ ಎಂ
ರಕ್ತದೊತ್ತಡಕ್ಕೆ ಬಳಸುವ ಔಷಧಿ - ಪ್ರೆಸೋಲಾರ್ ಇತ್ಯಾದಿ
ಅಸ್ತಮಾ ಕಾಯಿಲೆ ಚಿಕಿತ್ಸೆಗೆ ಉಪಯೋಗಿಸುವ ಔಷಧಿ - ಅಸ್ಥಾಪಾಕ್ಸ್ ಇತ್ಯಾದಿ
ಎಲ್ಲ ಕೆಮ್ಮಿನ ಸಿರಪ್‌ಗಳು
ಎಲ್ಲ ಬಿ ಕಾಂಪ್ಲೆಕ್ಸ್ ಹಾಗೂ ಮಲ್ಟಿ ವಿಟಮಿನ್‌ಗಳು
ಎಲ್ಲ ರಕ್ತ ವೃದ್ಧಿಸುವ ಟಾನಿಕ್‌ಗಳು
ಎಲ್ಲ ಆಂಟ್ಯಾಸಿಡ್‌ಗಳು - ಡೈಜೀನ್
ಎಲ್ಲ ಮುಲಾಮುಗಳು - ಕ್ಯಾಂಡಿಡ್ ಬಿ.
ಮಾನಸಿಕ ಚಿಕಿತ್ಸೆಗೆ ಉಪಯೋಗಿಸುವ ಔಷಧಿಗಳು - ಟ್ರಿನಿಕಾಂ ಪ್ಲಸ್.
ಇತರೇ - ಸಾರ್ಬಿಲಿನ್

ಒಂದೊಂದು ಗುಂಪಿನ ಔಷಧಿಗಳಲ್ಲಿ ಸಾವಿರಗಟ್ಟಲೆ ಅನಗತ್ಯ ಔಷಧಿಗಳಿವೆ. ಆದ್ದರಿಂದ ಒಟ್ಟು ಔಷಧಿಯ ಸಂಖ್ಯೆ ಹೆಚ್ಚಾಗುತ್ತದೆ. ಆದ್ದರಿಂದ ಸಂಮಿಶ್ರ ಔಶಧಿಗಳನ್ನು ಕೂಡಲೇ ನಿಷೇದಿಸಬೇಕು.

ಕಾಗದದ ಕಥೆ

ಪುಟ 12 ರಿಂದ


ಸಮರ್‌ಖಂಡ್‌ನಲ್ಲಿ ಕಾಗದ ಉತ್ಪಾದನೆಯ ಪ್ರಯೋಗ ಶಾಲೆಯನ್ನು ತೆರೆದರು.


ಪೇಪರ್ ತಯಾರಿಕೆಗೆ ಬಳಕೆಯಾಗುವ ಬಂಬೂ(ಬಿದಿರು)

ಕ್ರಿ.ಶ 795ರಲ್ಲಿ ಬಾಗ್ದಾದ್ ನಗರದಲ್ಲಿ ಪ್ರಥಮ ಬಾರಿಗೆ ಕಾಗದ ಉತ್ಪಾದನಾ ಕಾರ್ಖಾನೆಯನ್ನು ಪ್ರಾರಂಭಿಸಿದ ಕೀರ್ತಿ ಅರಬರಿಗೆ ಸಲ್ಲಬೇಕು. ಮಧ್ಯ ಏಷ್ಯಾದಿಂದ ಕಾಗದ ಉತ್ಪಾದನಾ ತಿಳುವಳಿಕೆಯು ಐರೋಪ್ಯ ರಾಷ್ಟ್ರಗಳಿಗೆ ಹರಡಿತು. ದುರಾದೃಷ್ಟವಶಾತ್ ಕಾಗದ ಉತ್ಪಾದನಾ ತಂತ್ರಜ್ಞಾನ ಭಾರತಕ್ಕೆ ಯಾವಾಗ ಬಂತೆಂದು ತಿಳಿದಿಲ್ಲ. ಮೊಘಲರ ಕಾಲದಲ್ಲಿ ಈ ತಂತ್ರಜ್ಞಾನ ವ್ಯಾಪಕವಾಗಿ ಬಳಕೆಯಲ್ಲಿತ್ತು.

ಯುರೋಪಿನ ಕೈಗಾರಿಕಾ ಕ್ರಾಂತಿಗೆ ನಾಂದಿಯಾಗಿ ಇಂದು ಕಾಗದ ತಯಾರಿಕೆಯು ಒಂದು ಉದ್ದಿಮೆಯಾಗಿ ಬೆಳೆದುಬಂದಿದೆ. ಈ ಕೆಳಕಂಡ ಮೂರು ಮಹತ್ವದ ಘಟನೆಗಳು ಕಾಗದ ಉತ್ಪಾದನೆಯಲ್ಲಿ ಮಹತ್ವದ ಪಾತ್ರ ವಹಿಸಿದೆ. ಮೊದಲನೆಯದಾಗಿ ಫ್ರಾನ್ಸ್ ದೇಶದವರು 1798ರಲ್ಲಿ ಕಾಗದದ ಉತ್ಪಾದನೆಯಲ್ಲಿ ಹಾಳೆಗಳನ್ನು ಸುರುಳಿಯ ರೋಲ್ ಆಕಾರದಲ್ಲಿ ಉತ್ಪಾದನೆ ಪ್ರಾರಂಭಿಸಿದರು.

ಆ ನಂತರ ಸಲ್‌ಫ್ಯೂರಿಕ್ ಆಮ್ಲವನ್ನು ಬಳಸಿ ಕಟ್ಟಿಗೆಯಿಂದ ಫೈಬರ್‌ನ್ನು ಪ್ರತ್ಯೇಕಿಸಿ ಮತ್ತು ಸೋಡಿಯಂ ಸಲ್ಫೇಟ್‌ನ್ನು ಸೇರಿಸಿ ಕಾಗದ ಗಟ್ಟಿಗೊಳಿಸುತ್ತಿದ್ದರು. ಈ ಸಂಶೋಧನೆಯು ಕಾಗದ ಉತ್ಪಾದನೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಕಾಗದವನ್ನು ಎಲ್ಲೆಲ್ಲಿ ಬಳಸುತ್ತಾರೆಂದರೆ, ಕೇವಲ ಬರೆಯಲು ಮತ್ತು ಮುದ್ರಿಸಲು ಬಳಸುವುದಲ್ಲದೆ, ಹಗುರ ಪ್ಯಾಕಿಂಗ್ ಮಾಡಲು ಕೂಡ ಬಳಸುತ್ತಾರೆ. ಒಬ್ಬ ಅಮೇರಿಕನ್ ನಾಗರಿಕ ಸರಾಸರಿ 300 ಕೆ.ಜಿ. ಪೇಪರನ್ನು (ಕಾಗದ)ಬಳಸುತ್ತಾನೆ. ಭದ್ರಾವತಿಯಲ್ಲಿರುವ, ಮೈಸೂರು ಪೇಪರ್ ಮಿಲ್‌ನಲ್ಲಿ ಹೆಚ್ಚಾಗಿ ದಾಂಡೇಲಿ ಮತ್ತು ಶಿವಮೊಗ್ಗದ ಕಾಡುಗಳಿಂದ ಹೆಚ್ಚಾಗಿ ತರಲಾಗುವ ಕಟ್ಟಿಗೆ ಮತ್ತು ಬಂಬೂವನ್ನು ಬಳಸುತ್ತಾರೆ.


ಪೇಪರ್ ತಯಾರಿಕೆಯ ಅತ್ಯಾಧುನಿಕ [illegible]

ಕಾಗದ ತ್ಯಾಜ್ಯವು ಪ್ರಕೃತಿಯಲ್ಲಿ ತಂತಾನೆ ಕರಗಿ ಲೀನವಾಗಿ ಹೋಗುವ ವಸ್ತು. ಮತ್ತು ಈ ತ್ಯಾಜ್ಯ ಕಾಗದವನ್ನು ಹರಿದ ಚಿಂದಿ ಬಟ್ಟೆಗಳಿಂದಲೂ ತಯಾರಿಸಬಹುದು. ಮರದ ಕೊರಡು, ಬಟ್ಟೆ, ಮತ್ತು ಕಾಗದ ಈ ಎಲ್ಲವುಗಳ ಮೂಲ ವಸ್ತು ಒಂದೆ. ಅದನ್ನು 'ಸೆಲ್ಯುಲೋಸ್'ಎಂದು ಕರೆಯಲಾಗುತ್ತದೆ. ಮರವನ್ನು ಕಾಗದವನ್ನು ಪರಿವರ್ತಿಸಲು ಸಾಧ್ಯವಾಗುವಾಗ, ಕಾಗದವನ್ನು ಮರವಾಗಿ ಪರಿವರ್ತಿಸಲು ಸಾಧ್ಯವೇ? ಹೌದು, ಖಂಡಿತ ಸಾಧ್ಯವಾಗುತ್ತದೆ. ಹಳೆಯ ಪತ್ರಿಕೆಗಳನ್ನೆಲ್ಲಾ ಸೇರಿಸಿ ಪುನರ್‌ಬಳಕೆ ಮಾಡಿ ತಮಗೆ ಅಧ್ಯಯನಕ್ಕಾಗಿ ಟೇಬಲೊಂದನ್ನು ರಚಿಸಿಕೊಂಡ ವ್ಯಕ್ತಿಯನ್ನು ನಾನೇ ನೋಡಿದ್ದೇನೆ. ನಿಜ ಅದು ಒಂದು ಬಗೆಯ ಹವ್ಯಾಸಕ್ಕಾಗಿ ಮಾಡಿದ್ದದ್ದು. ಅದನ್ನೇ ನಾವು ಉದ್ಯೋಗಗಳನ್ನು ಸೃಷ್ಟಿಸುವ ದೃಷ್ಟಿಯಿಂದ ಮಾಡಲು ಸಾಧ್ಯವೇ ಎಂದು ಯೋಚಿಸಬಹುದು.

ಆದರೆ ಈಗ ತತ್‌ಕ್ಷಣ ಆಗಬೇಕಾಗಿರುವುದೇನೆಂದರೆ, ಕಾಗದ ಉತ್ಪಾದನೆಯ ವೆಚ್ಚ ಕಡಿಮೆಯಾಗುವಂತೆ ಮಾಡುವುದು ಮತ್ತು ನವ ಸಾಕ್ಷರರು ಸೇರಿದಂತೆ ಪ್ರತಿಯೊಬ್ಬರೂ ಸಹ ಸಾಕಷ್ಟು ಪಠ್ಯ ಪುಸ್ತಕಗಳು ಹಾಗೂ ಬರೆಯುವ ಪುಸ್ತಕಗಳನ್ನು ಕೊಳ್ಳುವಂತಹ ವಾತಾವರಣವನ್ನು ನಿರ್ಮಿಸುವುದು.



ಕಾಂ. ಮುಲ್ಲಾ ಕುಟುಂಬ ಸಹಾಯಾರ್ಥ ನಿಧಿ ಸಂಗ್ರಹ

ಹಿಂದಿನ ಸಂಚಿಕೆಯವರೆಗೆ ಒಟ್ಟು	3877.50
■ ಡಿವೈಎಫ್‌ಐ ಕಮಲಾಪುರ ವಲಯ ಸಮ್ಮೇಳನದಲ್ಲಿ ಸಂಗ್ರಹ ಗುಲ್ಬರ್ಗಾ ಜಿಲ್ಲೆ	674.50
■ ಕಾಳಕೆಂಪನದೊಡ್ಡಿ ಡಿವೈಎಫ್‌ಐ ಬೆಳ್ಳಿಹಬ್ಬ ಕಾರ್ಯಕ್ರಮದಲ್ಲಿ, (ಮಳವಳ್ಳಿ)	250.00
■ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘರಾಜ್ಯ ಸಮಿತಿ	5000.00
■ ಅಕ್ಷರ ದಾಸೋಹ ನೌಕರರ ಸಂಘ, ರಾಜ್ಯ ಸಮಿತಿಯಿಂದ	5000.00
ಒಟ್ಟು	14,802.00

ರಾಜ್ಯದ ಗ್ರಾಮೀಣ ಪ್ರದೇಶಗಳ ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಕಂಪ್ಯೂಟರ್ ಶಿಕ್ಷಣ ನೀಡುವ ಎರಡು ಸಾವಿರ ಶಿಕ್ಷಕರು ಅಕ್ಷರಶಃ ಬೀದಿ ಪಾಲಾಗುವ ಸನ್ನಿವೇಶ ಬಂದಿದೆ. ಜಾಗತೀಕರಣ, ಉದಾರೀಕರಣದ ನೀತಿಗಳು ದುಡಿಯುವ ಜನರ ಪ್ರಾಣಹರಣದ ನೀತಿಗಳು ಎಂಬುದಕ್ಕೆ ಇದು ಮತ್ತೊಂದು ಸಾಕ್ಷಿ. ಈ ಶಿಕ್ಷಕರು ಸರ್ಕಾರದಿಂದ ನೇರವಾಗಿ ನೇಮಕಗೊಂಡು ಸರ್ಕಾರಿ ನೌಕರರಾಗಿರಬೇಕಾಗಿತ್ತು. ಈ ಕಂಪ್ಯೂಟರ್ ಶಿಕ್ಷಕರು ಉದಾರೀಕರಣದ ಯುಗದಲ್ಲಿ ಸರ್ಕಾರ 'ಹೊರಗುತ್ತಿಗೆ' ನೀತಿಯ ಫಲವಾಗಿ ಐದು ವರ್ಷಗಳ ಸತತ, ಸುದೀರ್ಘ ಸೇವೆ - ಕಠಿಣ ಪರಿಶ್ರಮದ ನಂತರ ಈಗ ಸೇವೆಯಿಂದ 'ಸ್ವತಂತ್ರ'ರಾಗಿ ಬರಿಗೈಲಿ ಮನೆಗೆ ಹೋಗಬೇಕಿದೆ. ಹಳೇ ಗುತ್ತಿಗೆ ಮುಗಿಯುತ್ತ ಬಂದಿದ್ದು ಮುಂದಿನ ಹೊಸ ಗುತ್ತಿಗೆ ಯಾರಿಗೆ ದೊರೆಯಲಿದೆಯೋ? ಏನೋ? ಎಂಬ ಆತಂಕ ಎದುರಾಗಿದೆ. ಸರ್ಕಾರದ ಈ ಧೋರಣೆಯ ವಿರುದ್ಧ ಚಳುವಳಿ ತೀವ್ರಗೊಂಡಿದೆ.



ಹೊರಗುತ್ತಿಗೆ ಎಂಬ ಮಹಾಮಾರಿಗೆ ಕಂಪ್ಯೂಟರ್ ಶಿಕ್ಷಕರ ತಲೆದಂಡ

ಅಖಿಲ ಕರ್ನಾಟಕ ಮಾಹಿತಿ ಸಿಂಧೂ ಕಂಪ್ಯೂಟರ್ ಶಿಕ್ಷಕರ ಸಂಘ, ಎಸ್‌ಎಫ್‌ಐ, ಡಿವೈಎಫ್‌ಐ ಸಂಘಟನೆಗಳು ಹಾಗೂ 'ಸರ್ಕಾರಿ ಮಾಹಿತಿ ಸಿಂಧುಶಿಕ್ಷಕರ ಹೋರಾಟ ಸಮಿತಿ' ನೇತೃತ್ವದಲ್ಲಿ ಚಳುವಳಿ ನಡೆದಿದೆ.

5 ವರ್ಷಗಳ ಹಿಂದೆ ರಾಜ್ಯ ಸರ್ಕಾರವು ರಾಜ್ಯದ ಗ್ರಾಮೀಣ ಪ್ರದೇಶದ ಸರ್ಕಾರಿ ಶಾಲೆಗಳ ಮಕ್ಕಳಿಗೆ ಕಂಪ್ಯೂಟರ್ ತರಬೇತಿ ನೀಡುವ ಯೋಜನೆಯೊಂದನ್ನು ಜಾರಿಗೆ ತರಲು ಯೋಜಿಸಿತು. ಹೊಸ ಹೊಸ ಅವಕಾಶಗಳು ಕೇವಲ ನಗರ ಪ್ರದೇಶಗಳಿಗೆ ಮಾತ್ರ ಸೀಮಿತವಾಗುವ ಅಪಾಯವಿರುವ ಇಂದಿನ ಪರಿಸರದಲ್ಲಿ ಅದು ಒಂದು ಸ್ವಾಗತಾರ್ಹವಾದ ಕ್ರಮವಾಗಿತ್ತು. ಗ್ರಾಮೀಣ ವಿದ್ಯಾರ್ಥಿಗಳ ಬಗೆಗೆ, ಶಿಕ್ಷಣದ ಬಗೆಗೆ ಆಳುವ ಸರ್ಕಾರಗಳಿಗೆ ನಿಜವಾದ ಕಾಳಜಿ ಇದ್ದದ್ದೇ ಆಗಿದ್ದಲ್ಲಿ ಶಾಶ್ವತ ಸ್ವರೂಪದ ಈ ಯೋಜನೆಗೆ ನೇರ ನೇಮಕಾತಿಯ ಮೂಲಕ ಖಾಯಂ ಶಿಕ್ಷಕರನ್ನೇ ನೇಮಿಸಿಕೊಂಡು ಯೋಜನೆಯನ್ನು ಸರ್ಕಾರವೇ ಜಾರಿ ಮಾಡುತ್ತಿತ್ತು. ಆದರೆ ಹಾಗಾಗಲಿಲ್ಲ. ಸರ್ಕಾರ ಯೋಜನೆಯನ್ನು ಖಾಸಗಿ ಮತ್ತು ಬಹುರಾಷ್ಟ್ರೀಯ ಕಂಪನಿಗಳಿಗೆ ಹೊರಗುತ್ತಿಗೆ ನೀಡಿತು. ರಾಜ್ಯದ ಪ್ರತಿ ಹೋಬಳಿಗೊಂದರಂತೆ ಸುಮಾರು 1000 ಸರ್ಕಾರಿ ಪ್ರೌಢಶಾಲೆಗಳಲ್ಲಿ ಈ ಯೋಜನೆ ಜಾರಿಗೆ ಬಂತು. ಗುತ್ತಿಗೆ ಪಡೆದ ಎನ್‌ಐಐಟಿ, ಆಪ್ಟೆಕ್, ಎಜು ಡಾಟ್ ಕಾಮ್ ಮುಂತಾದ ಕಂಪನಿಗಳು ಉಪಗುತ್ತಿಗೆ ನೀಡಿದವು. ಒಟ್ಟಾರೆ ಸುಮಾರು ಎರಡು ಸಾವಿರ ಶಿಕ್ಷಕರು ಸುಮಾರು 4 ಲಕ್ಷ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಶಿಕ್ಷಣ ನೀಡಲಾರಂಭಿಸಿದರು.

ಸರ್ಕಾರ ಮತ್ತು ಖಾಸಗಿ ಕಂಪನಿಗಳ ನಡುವೆ ಆಗಿರುವ ಒಪ್ಪಂದದ ವಿವರಗಳನ್ನು ಇದುವರೆಗೂ ಬಹಿರಂಗ ಗೊಳಿಸಲಾಗಿಲ್ಲ. ಇದೊಂದೇ ಅಂಶವೇ ಹಲವು ಪ್ರಬಲ ಅನುಮಾನಗಳಿಗೆ ಅವಕಾಶ ನೀಡುತ್ತದೆ. ಈ ಮಾಹಿತಿ ಸಿಂಧು ಶಿಕ್ಷಕರು ಈ ಹಿಂದೆ ಚಳುವಳಿ ನಡೆಸಿ ಒತ್ತಾಯ ಮಾಡಿದಾಗಲೂ ಈ ಒಡಂಬಡಿಕೆ ಪತ್ರದ ಪ್ರತಿ ನೀಡಲು ಸರ್ಕಾರ ತಯಾರಿರಲಿಲ್ಲ.

ವೇತನ ಎಂಬ ಯಾತನ ಅನುಭವ

ಬಿ.ಎಸ್.ಸಿ -ಬಿ.ಇ ಜೊತೆಗೆ ಕಂಪ್ಯೂಟರ್ ಕೋರ್ಸುಗಳನ್ನು ಮುಗಿಸಿಕೊಂಡ ಪದವೀಧರರಿವರು. ಸರ್ಕಾರದ ಜೊತೆಗಿನ ಒಪ್ಪಂದದಲ್ಲಿ ಮಾಸಿಕ ಸುಮಾರು 6000 ರೂ.ಗಳ ವೇತನ ನೀಡಬೇಕೆಂಬ ಷರತ್ತಿದೆ ಎಂಬ ಅಂದಾಜಿದೆ. ಆದರೆ ಯಾವ ಕಂಪನಿಯು ಅದರ ಹತ್ತಿರಕ್ಕೂ ವೇತನವನ್ನು ಮಾಡಲಿಲ್ಲ. ಕೆಲಸ ಬೆಳಿಗ್ಗೆ 9 ಗಂಟೆಯಿಂದ 5 ಗಂಟೆಯವರೆಗೆ ಎಂಬ ಷರತ್ತಿದೆ. ಈ ಕೆಲಸಕ್ಕೆ ತಿಂಗಳಿಗೆ ಎನ್‌ಐಐಟಿ ನೀಡಿದ್ದು ಕೇವಲ 1800 ರೂ. ಆಪ್ಟೆಕ್ 2,300 ರೂ ಮತ್ತು edu.com ನೀಡಿದ್ದು 3400 ರೂಗಳನ್ನು ಮಾತ್ರ. 2002ರ ನವೆಂಬರ್ ಡಿಸೆಂಬರ್‌ನಲ್ಲಿ ತೀವ್ರ ಚಳುವಳಿ ನಡೆದು ಸರ್ಕಾರದ ಮಂತ್ರಿ-ಅಧಿಕಾರಿಗಳ ಸಮ್ಮುಖದಲ್ಲೇ ಮಾತುಕತೆಯಾಗಿ ಎಲ್ಲಾ ಕಂಪನಿಗಳು ಸಮಾನ ವೇತನ ಕೊಡಲು ತೀರ್ಮಾನವಾಯಿತು. ಆಗಲು ವೇತನ 6,000 ತಲುಪಲಿಲ್ಲ ಬದಲಿಗೆ edu.com ಕಂಪನಿಯ ವೇತನವೇ ಕುಸಿದು ಎಲ್ಲರಿಗೂ ಮಾಸಿಕ 2,900.00 ರೂ.ಗಳ ಸಮಾನ ವೇತನದ ಕ್ರಮ ಜಾರಿಗೆ ಬಂತು.

ಗುತ್ತಿಗೆ ಮೊತ್ತದ ಸುತ್ತ, ಸಂಶಯದ ಹುತ್ತ


5 ವರ್ಷಗಳ ಈ ಯೋಜನೆಗೆ ಸರ್ಕಾರ ಖಾಸಗಿ ಕಂಪನಿಗಳಿಗೆ ನೀಡಿದ ಮೊತ್ತ 229 ಕೋಟಿ ರೂಪಾಯಿಗಳು. (229,00,00,000 ರೂ.ಗಳು) ಸರ್ಕಾರವೇ ನೇರವಾಗಿ ಈ ಯೋಜನೆಯನ್ನು ಜಾರಿಮಾಡಿದ್ದೇ ಆಗಿದ್ದಲ್ಲಿ ಕೇವಲ ಈ ಮೊತ್ತದ ಅರ್ಧದಷ್ಟು ಮಾತ್ರ ವೆಚ್ಚವಾಗುತ್ತಿತ್ತು ಮತ್ತು ನೌಕರರಿಗೆ ಉದ್ಯೋಗ ಭದ್ರತೆಯೂ ಸಿಗಲು ಸಾಧ್ಯವಿತ್ತು ಎಂದು ನಿಖರವಾಗಿ ಅಂದಾಜು ಮಾಡುವುದು ಸಾಧ್ಯವಾಗಿದೆ. ಆಳುವ ಸರ್ಕಾರಗಳ ಮಂತ್ರಿ ಮಹೋದಯರು ಅಧಿಕಾರಿಗಳು ಯಾಕೆ ಯಾವಾಗಲೂ ಖಾಸಗೀಕರಣದತ್ತ ತುಡಿಯುತ್ತಾರೆ ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಬಹಳ ಕಷ್ಟವೇನಲ್ಲ. ಈ ಒಟ್ಟು 'ಒಡಂಬಡಿಕೆ'ಗಳಲ್ಲಿ ಯಾರು ಯಾರಿಗೆ ಎಷ್ಟೆಷ್ಟು ಪಾಲು ಸಂದಿದೆ ಎಂಬುದು ಮಾತ್ರ ಆ ಜಾಗತೀಕರಣದ ದೈವಗಳಾದ ತ್ರಿಮೂರ್ತಿ ಐಎಂಎಫ್-ವಿಶ್ವಬ್ಯಾಂಕ್-ಡಬ್ಲ್ಯುಟಿಒಗಳಿಗೇ ಗೊತ್ತು.

ಅಕ್ಕಿಯೂ ಖಾಲಿಯಾಗಬಾರದು
ಅಕ್ಕನ ಮಕ್ಕಳೂ ಬಡವಾಗಬಾರದು

ಎರಡು ಸಾವಿರ ಕಂಪ್ಯೂಟರ್ ಶಿಕ್ಷಕರ ಜೀವನಕ್ಕೆ, ಸೇವೆಗೆ ಭದ್ರತೆ ಎಂಬುದೇನಿಲ್ಲ. ಆದರೆ ಕಂಪ್ಯೂಟರ್ ಶಿಕ್ಷರ ಕಾರ್ಯಭಾರಕ್ಕೆ ಮಿತಿಯೂ ಇಲ್ಲ. ಹೇಳಿಕೇಳಿ ಕಂಪ್ಯೂಟರ್ ತರಬೇತಿಯನ್ನು ಸಮಾಜವಿಜ್ಞಾನ, ವಿಜ್ಞಾನ ತರಗತಿಗಳಂತೆ ದೊಡ್ಡ ದೊಡ್ಡ ಸಮೂಹಗಳಿಗೆ ಕಲಿಸಲಾಗದು. ಸಣ್ಣ ಸಣ್ಣ ತಂಡಗಳಾಗಿ ಕಲಿಸಬೇಕು. ಅದು ಸಾಕಷ್ಟು ಪರಿಶ್ರಮ ಸಮಯವನ್ನು ಬೇಡುವ ಕೆಲಸ. ಇದು ಸಾಲದೆಂದು ಇತರ ಶಿಕ್ಷಕರಂತೆ ಇವರು ಭಾಷೆಗಳು, ಸಮಾಜ ವಿಜ್ಞಾನ, ವಿಜ್ಞಾನಗಳನ್ನು ಕಲಿಸುವುದೂ ಇದೆ. ಏಕೆಂದರೆ ಶಾಲೆಗಳಲ್ಲಿ ಪಾಠ ಮಾಡಲು ಶಿಕ್ಷಕರ ಕೊರತೆ ಇದೆ. ಈ ಕೊರತೆಯನ್ನು ಮಾಹಿತಿ ಸಿಂಧು ಶಿಕ್ಷಕರು ಹಲವೆಡೆ ತುಂಬಿದ್ದಾರೆ. ಇಷ್ಟಾದರೂ ಇವರಿಗೆ ಉದ್ಯೋಗ ಭದ್ರತೆಯಿಲ್ಲ. ಶಿಕ್ಷಕರ ವೇತನದ ಶೇ.12ರಷ್ಟನ್ನು ಭವಿಷ್ಯ ನಿಧಿಗಾಗಿ ಶಿಕ್ಷಕರ ವೇತನದಿಂದ ಕಡಿತ ಮಾಡಬೇಕು, ಅಷ್ಟೇ ಮೊತ್ತವನ್ನು ನಿಧಿಗೆ ಕಂಪನಿಗಳು ಸಹ ತುಂಬಬೇಕು ಎಂಬ ತೀರ್ಮಾನವಿದ್ದರೂ ಸಹ ಬಹುತೇಕ ಶಿಕ್ಷಕರ ವೇತನದಿಂದ ಈ ಹಣ ಕಡಿತ ಮಾಡಲಾಗಿಲ್ಲ. ವಿಜಾಪುರದಂತಹ ಕಡೆಗಳಲ್ಲಿ ಶಿಕ್ಷಕರ ಮತ್ತು ಕಂಪನಿಯ ಈ ಎರಡೂ ಪಾಲನ್ನು ಅಂದರೆ ಶೇ.24ರಷ್ಟು ಹಣವನ್ನು ಶಿಕ್ಷಕರ ವೇತನದಲ್ಲೇ ಕಡಿತ ಮಾಡಲಾಗಿದೆ. ಈ ಬಗ್ಗೆ ಸರಿಯಾಗಿ ತಿಳಿದು ಕೊಳ್ಳೋಣವೆಂದರೆ ಶಿಕ್ಷಕರಿಗೆ ಬ್ಯಾಂಕ್‌ನ ಪಾಸ್‌ಬುಕ್ ಸಹ ಕೊಡುವುದಿಲ್ಲ. ಅದು 'ಕಂಪನಿ'ಗಳ ಕೈಯಲ್ಲೇ ಇರುತ್ತದೆ. ಇಂಟರ್‌ನೆಟ್ ಸೌಕರ್ಯಕ್ಕೆ ದೂರವಾಣಿ ಸೌಕರ್ಯ ಅಗತ್ಯವಾದ್ದರಿಂದ ಈ ಶಾಲೆಗಳಿಗೆ ದೂರವಾಣಿ ಸೌಲಭ್ಯ ಕಲ್ಪಿಸಲಾಗಿದೆ. ಹಲವಾರು ಕಡೆ ಈ ದೂರವಾಣಿಯಲ್ಲಿ ಇತರ ಕಾರಣಕ್ಕಾಗಿ ಕರೆ ಮಾಡಿದ ಕಾರಣಕ್ಕೆ ಹೆಚ್ಚು ಬಿಲ್ ಬಂದರೆ ಅದನ್ನು ಮಾಹಿತಿ ಸಿಂಧು ಶಿಕ್ಷಕರ ಸಂಬಳದಲ್ಲಿ ಕಡಿತ ಮಾಡಲಾಗುತ್ತಿದೆ. ಹಾಜರಾತಿ ನೀಡುವ ಅಧಿಕಾರ ಶಾಲೆಯ ಮುಖ್ಯೋಪಾಧ್ಯಾಯರ ಕೈಯಲ್ಲಿದೆ. ಹೆಚ್ಚು ಮಾತನಾಡುವಂತಿಲ್ಲ!

ಮುಗಿಯುತ್ತಿರುವ ಗಡುವು
ಮುಗಿಯದ ಆತಂಕ

ಈಗ ಡಿಸೆಂಬರ 31ಕ್ಕೆ ಸರ್ಕಾರವು ಖಾಸಗಿ ಕಂಪನಿಗಳೊಂದಿಗೆ ಮಾಡಿಕೊಂಡಿರುವ ಒಪ್ಪಂದದ ಅವಧಿಯು ಮುಗಿಯುತ್ತದೆ. ಹೊಸ ಗುತ್ತಿಗೆ ಸಂಬಂಧ ಸರ್ಕಾರವು 'ಟೆಂಡರ್' ಕರೆದಿದೆ. ಸರ್ಕಾರದ ಧೋರಣೆಯನ್ನು ಖಂಡಿಸಿ ಶಿಕ್ಷಕರ ಸಂಘಟನೆ ಹಾಗೂ ಎಸ್‌ಎಫ್‌ಐ, ಡಿವೈಎಫ್‌ಐ ಸಂಘಟನೆಗಳು ಸೆಪ್ಟೆಂಬರ್ 28, 29ರಂದು ರಸ್ತೆತಡೆ, ರೈಲುತಡೆ ನಡೆಸಲು ಕರೆ ನೀಡಿದ್ದವು. ಹಲವೆಡೆ ಈ ಕರೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಈದೀಗ ಸರ್ಕಾರ ಟೆಂಡರ್ ಕರೆದ ಮೇಲೆ ನವೆಂಬರ್ 28ರಿಂದ ರಾಜ್ಯವ್ಯಾಪಿ ಚಳುವಳಿ ತೀವ್ರಗೊಂಡಿದೆ. ಡಿಸೆಂಬರ್ 5ರಂದು ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನಾ ರ್‍ಯಾಲಿ ನಡೆದಿದೆ. ಅಂದು ಜಕ್ಕರಾಯನ ಕರೆ ಅಂಗಳದಲ್ಲಿ ಸೇರಿದ ಸಾವಿರಾರು ಶಿಕ್ಷಕರು ಮೆರವಣಿಗೆ ನಡೆಸಿದ್ದಾರೆ. ಅಂದಿನಿಂದಲೇ ಬನ್ನಪ್ಪ ಪಾರ್ಕ್ ಮೈದಾನದಲ್ಲಿ ಸಾಮೂಹಿಕ ಧರಣಿ ನಡೆಸಲಾಗುತ್ತಿದೆ. ಮುಖ್ಯಮಂತ್ರಿ-ಉಪಮುಖ್ಯಮಂತ್ರಿಗಳು ಮತ್ತು ಸಂಘಟನೆಯ ಮುಖಂಡರೊಂದಿಗೆ ಮಾತುಕತೆ ನಡೆದು ಟೆಂಡರ್ ಪೂರ್ವ ಸಭೆಯನ್ನು ಡಿಸೆಂಬರ್ 8ರಿಂದ 12ಕ್ಕೆ ಮುಂದೂಡಲಾಗಿದೆ. ಈ ಟೆಂಡರ್‌ನ್ನು ಅಂತಿಮಗೊಳಿಸುವುದು ಡಿಸೆಂಬರ್ 21ಕ್ಕೆ ನಿಗದಿಯಾಗಿದೆ. ಅದನ್ನೂ ಮುಂದೂಡುವ ಬಗ್ಗೆ ಸರ್ಕಾರ ಮೌಖಿಕ ಭರವಸೆ ನೀಡಿದೆ. ಆದರೆ ಲಿಖಿತ ಭರವಸೆ ಸಿಕ್ಕಿಲ್ಲ.



ದೃಢಗೊಂಡಿರುವ
ಚಳುವಳಿಯ ಸಂಕಲ್ಪ

ಭವಿಷ್ಯದ ಬಗೆಗಿನ ಆತಂಕ, ಎಸ್‌ಎಫ್‌ಐ,

ಪುಟ 11ಕ್ಕೆ

ಬಹುರಾಷ್ಟ್ರೀಯ ಕಂಪನಿಗಳ ಅಮೋಘ ದಕ್ಷತೆ, ಶಿಸ್ತು...

ಭಾರತದ ಕಾರ್ಮಿಕ ಕಾನೂನುಗಳ ಪ್ರಕಾರ ಕಾರ್ಮಿಕರ ಭವಿಷ್ಯ ನಿಧಿ (ಪಿ.ಎಫ್)ಗೆ ಹಣ ನೀಡದಿರುವುದು ಒಂದು ಕ್ರಿಮಿನಲ್ ಅಪರಾಧ. ಈ ಅಪರಾಧವನ್ನು ಈ ಖಾಸಗಿ ಮತ್ತು ಬಹುರಾಷ್ಟ್ರೀಯ ಕಂಪನಿಗಳು ಮಾಡಿವೆ. ಕಂಪನಿಗಳ ಈ ಧೋರಣೆ ವಿರುದ್ಧ ಪ್ರತಿಭಟನೆ ತೀವ್ರವಾದಾಗ ಅವರು ಪ್ರದರ್ಶಿಸಿದ ಅಮೋಘ ಬುದ್ಧಿವಂತಿಕೆ ನೋಡಿ. ಭವಿಷ್ಯ ನಿಧಿಯನ್ನು ಕಾರ್ಮಿಕರ ಮೂಲ ವೇತನದ ಶೇ.12ರಷ್ಟು ನೀಡಬೇಕು. ಚಳುವಳಿಗೆ ಮೊದಲು ಈ ಕಂಪನಿಗಳು 'ಕ್ರೋಢೀಕೃತ ವೇತನ' ಎಂದು 1800-2300 ರೂ. ಹೀಗೆ ನೀಡುತ್ತಿದ್ದವು. ಈ ವೇತನದ ಶೇ.12ರಷ್ಟು ಭವಿಷ್ಯನಿಧಿಗೆ ಕೊಡಬೇಕೆಂದು ಬೆದರಿದ ಕಂಪನಿಗಳು ಮಾಡಿದ್ದೇನು ಗೊತ್ತೆ?

ನೌಕರರ ವೇತನವನ್ನು ಹಲವು ವಿಭಾಗಗಳಲ್ಲಿ ವಿಭಜಿಸಿದರು. ಅದರಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಕೆಲಸ ಮಾಡುವ ಈ ಶಿಕ್ಷಕರಿಗೆ ಮನೆ ಬಾಡಿಗೆ ಭತ್ಯೆ ಎಂದು 1600 ರೂಗಳನ್ನು ತೋರಿಸಲು ಸಿದ್ಧರಾದರು. ಅವರ ಸೂಚನೆಯಂತೆ ವಿವಿಧ ಭತ್ಯೆ ಕಳೆದು ಮೂಲ ವೇತನವಷ್ಟೆ ಉಳಿಯಿತು. ಅದು ಎಷ್ಟು ಗೊತ್ತೆ? ಕೇವಲ 300.00 ರೂ. ಅಷ್ಟಾಗಿಯೂ ಭವಿಷ್ಯನಿಧಿಗೆ ಹಣ ತುಂಬಲಿಲ್ಲ ಎಂಬುದು ಬೇರೆ ವಿಚಾರ. ಹೀಗಿದೆ ಬಹುರಾಷ್ಟ್ರೀಯ ಕಂಪನಿಗಳ ದಕ್ಷತೆ, ಶಿಸ್ತು!

.... ವೇತನ ವಂಚನೆ

ಬಹುರಾಷ್ಟ್ರೀಯ ಕಂಪನಿಗಳು ಬಂದರೆ ಉತ್ತಮ ವೇತನ ನೀಡುತ್ತವೆ ಎಂದು ಹಲವರು ಭಾವಿಸುತ್ತಾರೆ. ಮಾಹಿತಿ ಸಿಂಧು ಶಿಕ್ಷಕರನ್ನು ಗುತ್ತಿಗೆ ನೇಮಿಸಿಕೊಂಡ ಕಂಪನಿಗಳನ್ನು ಒಂದು ದೇಶೀಯ ಕಂಪನಿಯಾದರೆ, ಎರಡು ವಿದೇಶಿ ಬಹುರಾಷ್ಟ್ರೀಯ. ಮೊದಲ ಹಂತದಲ್ಲಿ ಅವರು ಕೊಡುತ್ತಿದ್ದ ವೇತನಗಮನಿಸಿ

NIIT	1,800 ರೂ.
ಆಪ್ಟೆಕ್	2,300 ರೂ.
(ಎರಡೂ ಬಹುರಾಷ್ಟ್ರೀಯ ಕಂಪನಿಗಳು)	
Edu.com	3,400 ರೂ.
(ದೇಶೀಯ ಕಂಪನಿ)	

ಯಾವ ಕಂಪನಿಯೂ ಶಿಕ್ಷಕರಿಗೆ ಪೂರ್ತಿ ನ್ಯಾಯ ಕೊಡಲಿಲ್ಲ ಎಂಬುದು ಬೇರೆ ಮಾತು.

ಕೈಗಾರಿಕೆ-ಗಣಿಗಾರಿಕೆಗಳೆಲ್ಲಾ ಪರಿಸರ ವಿರೋಧಿ ಎನ್ನುವುದಾದರೆ ಮನುಷ್ಯ ಮೊತ್ತಮೊದಲು ನೇಗಿಲು ಹಿಡಿದು ಉಳುಮೆ ಮಾಡಿದ್ದೇ ಒಂದು ಅಪರಾಧ. ಇಂತಹ ಪರಿಸರ ಪ್ರೇಮ ಒಪ್ಪಲಾಗದ್ದು. ಅಭಿವೃದ್ಧಿ-ಪರಿಸರ ರಕ್ಷಣೆ ಒಟ್ಟೊಟ್ಟಿಗೆ ಸಾಗಬೇಕಿದೆ. ಹುಸಿ ಪರಿಸರ ಪ್ರೇಮಿಗಳ ಗದ್ದಲದಿಂದ ಸಾವಿರಾರು ಜನರ ಆಳುವ ಸರ್ಕಾರಗಳ ಹೊಣೆಗೇಡಿತನ, ಜೀವನಾಧಾರವಾಗಿರುವ ರಾಜ್ಯದ ಒಂದು ಪ್ರಮುಖ ಲಾಭದಾಯಕವಾದ ಸಾರ್ವಜನಿಕ ಉದ್ದಿಮೆಯಾದ ಕುದುರೆಮುಖ ಕಂಪನಿಯು ಕಣ್ಮುಚ್ಚುವುದರ ವಿರುದ್ಧ ಈಗಲಾದರೂ ಜವಾಬ್ದಾರಿಯುತವಾಗಿ ವರ್ತಿಸಿ ಹೊಣೆಗಾರಿಕೆಯ ಗಣಿಗಾರಿಕೆಗೆ ಅವಕಾಶ ಮಾಡಿಕೊಡಬೇಕಿದೆ.

‘ಕುದುರೆಮುಖ’ದ ಕತ್ತು ಹಿಚುಕಿದರು !

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ಮಲ್ಲೇಶ್ವರದಲ್ಲಿ 1976ರಲ್ಲಿ ಸ್ಥಾಪಿಸಲ್ಪಟ್ಟು 1980ರಿಂದ ಕಬ್ಬಿಣದ ಅದಿರಿನ ಗಣಿಗಾರಿಕೆ ನಡೆಸಿಕೊಂಡು ಬರುತ್ತಿದ್ದ ಮತ್ತು ಆ ಮೂಲಕ ನಮ್ಮ ದೇಶದ ಬೊಕ್ಕಸಕ್ಕೆ ಹೇರಳ ವಿದೇಶಿ ವಿನಿಮಯ ಸಂಪಾದಿಸಿಕೊಡುತ್ತಿದ್ದ, ಸಂಪೂರ್ಣ ರಫ್ತು ಆಧಾರಿತವಾಗಿದ್ದ ಸಾರ್ವಜನಿಕ ರಂಗದ ‘ಮಿನಿರತ್ನ’ ಉದ್ದಿಮೆಯಾಗಿರುವ ಕುದುರೆಮುಖ ಕಬ್ಬಿಣದ ಅದಿರು ಕಂಪನಿ (KIOCL) ಸುಪ್ರಿಂ ಕೋರ್ಟಿನ ತಾ.30.10.2002ರ ಆದೇಶದಂತೆ ಇದೇ ಡಿಸೆಂಬರ್ 31ರ ಒಳಗಾಗಿ ಗಣಿಗಾರಿಕೆಯನ್ನು ಸಂಪೂರ್ಣವಾಗಿ ನಿಲ್ಲಿಸಬೇಕಾಗಿ ಬಂದಿರುವುದು ಶೋಚನೀಯ.

ಗಣಿಗಾರಿಕೆಯನ್ನು ಸ್ಥಗಿತಗೊಳಿಸುವುದರೊಂದಿಗೆ ಕಂಪನಿಯ ಸುಮಾರು 2000 ನೌಕರರ ಬದುಕು ಅತಂತ್ರವಾಗಲಿರುವುದು ಮಾತ್ರವಲ್ಲ, ಒಂದು ಕಾಲದಲ್ಲಿ ಅತ್ಯಂತ ಹಿಂದುಳಿದ ಈ ಪ್ರದೇಶದಲ್ಲಿ ಕಂಪನಿಯ ತಾತ್ಕಾಲಿಕ ನೌಕರರಾಗಿ, ದಿನಗೂಲಿ ಕಾರ್ಮಿಕರಾಗಿ, ಕಟ್ಟಿಂಗ್, ವೆಲ್ಡಿಂಗ್ ಮುಂತಾದ ಕಾಂಟ್ರಾಕ್ಟ್ ಕೆಲಸಗಳಲ್ಲಿ ತೊಡಗಿಸಿಕೊಂಡು ಸಾಕಷ್ಟು ಸಂಪಾದನೆ ಮಾಡುತ್ತಿದ್ದ ಹತ್ತಾರು ಸಾವಿರ ಜನ ತಮ್ಮ ಬದುಕಿನ ಮುಖ್ಯ ಆದಾಯದ ಮೂಲವೊಂದನ್ನು ಕಳೆದುಕೊಳ್ಳಬೇಕಾಗಿ ಬಂದಿದೆ. ‘ಅದಿರುಸಾರ’ವನ್ನು ಉಂಡೆಕಟ್ಟಿ ರಫ್ತು ಮಾಡುವ ಸಲುವಾಗಿ ಕಂಪನಿ ಮಂಗಳೂರು ತಾಲೂಕಿನ ಕೂಳೂರಿನಲ್ಲಿ ಸ್ಥಾಪಿಸಿಕೊಂಡಿರುವ ಶಾಫ್ಟ್ ಪೆಲೆಟೈಸೇಶನ್ ಪ್ಲಾಂಟ್, ಹಾಗೂ ಬೀಡುಕಬ್ಬಿಣ (PIG IRON) ಮತ್ತು ‘ಡಕ್‌ಟೈಲ್ ಸ್ಪನ್ ಪೈಪ್’ ಉತ್ಪಾದಿಸುವ ಈ ಕಂಪನಿಯ ಸಹೋದರ ಸಂಸ್ಥೆ ಕುದುರೆಮುಖ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ (KISCO) ತೀವ್ರ ಸಂಕಷ್ಟಗಳಿಗೆ ಒಳಗಾಗಲಿವೆ. ಇದುವರೆಗೆ ಮಲ್ಲೇಶ್ವರದಿಂದ ಕೂಳೂರಿಗೆ ಭೂಗತ ಪೈಪ್‌ಲೈನ್ ಮುಖಾಂತರ ಕೇವಲ ಐದೇ ಗಂಟೆಗಳು ಹರಿದುಬರುತ್ತಿದ್ದ ಅದಿರುಸಾರದ ಪೂರೈಕೆ ನಿಂತುಹೋದರೆ ಕಂಪನಿ ತನ್ನ ಉಳಿವಿಗಾಗಿ ದೂರದ ರಮಣದುರ್ಗ ಅಥವಾ ಓಂಗೋಲ್‌ನಿಂದ ಅದಿರನ್ನು ದುಬಾರಿ ವೆಚ್ಚದಲ್ಲಿ ತರಿಸಿಕೊಳ್ಳಬೇಕಾಗುತ್ತದೆ. ಇದು ಕಂಪನಿಯನ್ನು ನಷ್ಟದಲ್ಲಿ ಕೆಡವಬಹುದು.

ಗಣಿಗಾರಿಕೆಗಾಗಿ 1969ರಲ್ಲಿ ರಾಷ್ಟ್ರೀಯ ಖನಿಜ ಅಭಿವೃದ್ಧಿ ನಿಗಮವು (ಎನ್‌ಎಂಡಿಸಿ) ಈ ಪ್ರದೇಶದ 4605 ಹೆಕ್ಟೇರ್ ಭೂಮಿಯನ್ನು ಕರ್ನಾಟಕ ಸರಕಾರದಿಂದ 30 ವರ್ಷಗಳ ಅವಧಿಗೆ ಭೋಗ್ಯಕ್ಕೆ ಪಡೆದಿತ್ತು. ಇದನ್ನು 1976ರಲ್ಲಿ ‘ಕುದುರೆಮುಖ’ ಕಂಪನಿಗೆ ಹಸ್ತಾಂತರಿಸಲಾಯಿತು. ಈ ಭೂಮಿಯಲ್ಲಿ 3700 ಹೆಕ್ಟೇರ್ ಭೂಮಿ ‘ಅರಣ್ಯಭೂಮಿ’ಯೆಂದು ಪರಿಗಣಿಸಲ್ಪಟ್ಟಿದೆ. ಕರ್ನಾಟಕ ಸರಕಾರವು 2.9.1987ರಂದು ‘ಕುದುರೆಮುಖ ರಾಷ್ಟ್ರೀಯ ಉದ್ಯಾನವನ್ನು ರಚಿಸುವ ಕರಡು ಅಧಿಸೂಚನೆಯನ್ನು ಹೊರಡಿಸಿದಾಗ ತಾನು ಕುದುರೆಮುಖ ಕಬ್ಬಿಣದ ಅದಿರು ಕಂಪನಿಗೆ ಭೋಗ್ಯಕ್ಕೆ ನೀಡಿದ್ದ ಈ 3700 ಹೆಕ್ಟೇರ್ ‘ಅರಣ್ಯಭೂಮಿ’ಯನ್ನು ಉದ್ಯಾನವನದೊಳಗೆ ಸೇರ್ಪಡೆಗೊಳಿಸಿತ್ತು. ಮುಂದೆ ಮೂವತ್ತು ವರ್ಷಗಳ ಭೋಗ್ಯದ ಅವಧಿ ಮುಗಿದು 1999ರಲ್ಲಿ ಅದನ್ನು ಮರಳಿ 20 ವರ್ಷಗಳ ಕಾಲ ನವೀಕರಿಸುವ ಪ್ರಸ್ತಾಪ ಬಂದಾಗ ಕರ್ನಾಟಕ ಸರಕಾರವು ಯಾವುದೇ ಮುಂಜಾಗ್ರತೆಯ ಕ್ರಮ ಕೈಗೊಳ್ಳದೆ ಭೋಗ್ಯಕ್ಕೆ ನೀಡಲಾಗಿದ್ದ 3700 ಹೆಕ್ಟೇರ್ ಅರಣ್ಯಭೂಮಿಯನ್ನು ಉದ್ಯಾನವನದ ವ್ಯಾಪ್ತಿಯಿಂದ ಹೊರಗಿಟ್ಟು ತಾ:16.6.2001ರಂದು ಅಂತಿಮ ಅಧಿಸೂಚನೆ ಹೊರಡಿಸಿತು. ಕಂಪನಿಗೆ ಗಣಿಗಾರಿಕೆ ಮುಂದುವರಿಸಲು ಎರಡು ವರ್ಷಗಳ ತಾತ್ಕಾಲಿಕ ಪರವಾನಗಿಯನ್ನು ನೀಡಲಾಯಿತು. ಹೀಗೆ ಮಾಡುವ ಮೊದಲು ಅರಣ್ಯ (ಸಂರಕ್ಷಣಾ) ಕಾಯಿದೆ, 1980ರ ಸೆಕ್ಷನ್ 2ರ ಪ್ರಕಾರ ಪರಿಸರದ ಮೇಲಾದ ಪರಿಣಾಮದ ಮೌಲ್ಯಾಂಕನ ನಡೆಸಿದ ವರದಿಯನ್ನು ಪಡೆಯಬೇಕಾದದ್ದು ಅಗತ್ಯವಾಗಿದ್ದ ಕಾರಣ ಈ ಅಂತಿಮ ಅಧಿಸೂಚನೆಯಲ್ಲಿ ನೀಡಲಾಗಿರುವ ವಿನಾಯತಿ ಕಾನೂನು ಬಾಹಿರವೆಂದು ಸುಪ್ರಿಂ ಕೋರ್ಟ್ ಸಾರಿದೆ. ಈ ಹಿನ್ನೆಲೆಯಲ್ಲಿ ‘ಕರ್ನಾಟಕ ಮುನಿಸಿಪಾಲಿಟೀಸ್ ಆ್ಯಕ್ಟ್‌ನ ಅನ್ವಯ ‘ನೋಟಿಫೈಡ್ ಏರಿಯಾ’ ಎಂದು ಘೋಷಿತವಾಗಿರುವ ಮಲ್ಲೇಶ್ವರ ಟೌನ್‌ಶಿಪ್ ಸೇರಿದಂತೆ ಗಣಿಗಾರಿಕೆಯ ಪ್ರದೇಶ, ಕಂಪನಿಗಾಗಿ ಭೂಮಿ ಕಳೆದುಕೊಂಡ ರೈತರನ್ನು ಪುನರ್ವಸತಿಗೊಳಿಸಲಾಗಿರುವ ಜಾಂಬಳೆ, ನೆಲ್ಲಿಬೀಡು, ಸಂಸೆ ಮತ್ತಿತರ ಪ್ರದೇಶಗಳೂ ‘ಕುದುರೆಮುಖ ರಾಷ್ಟ್ರೀಯ ಉದ್ಯಾನವನ’ದ ವ್ಯಾಪ್ತಿಯೊಳಗೆ ಬರುತ್ತದೆ. ಅರಣ್ಯ ಇಲಾಖೆ ಮನಸ್ಸು ಮಾಡಿದರೆ ಇಲ್ಲಿರುವ ಎಲ್ಲ ಕಟ್ಟಡ, ಕಛೇರಿ, ಶಾಲೆ, ಕಾಲೇಜು ಮತ್ತು ಆಸ್ಪತ್ರೆ ಹಾಗೂ ಜನರನ್ನು ಎತ್ತಂಗಡಿ ಮಾಡಬಹುದಾಗಿದೆ. ಇದು ಇಲ್ಲಿನ ಜನರ ಬದುಕಿನ ಸರ್ವನಾಶಕ್ಕೆ ಕಾರಣವಾಗಲಿದೆಯೆಂದು ಬೇರೆ ಹೇಳಬೇಕಾಗಿಲ್ಲ.


ಕುದುರೆಮುಖ ಗಣಿಗಾರಿಕೆ ಪ್ರದೇಶ

ಎ.ಎಸ್.ಆಚಾರ್ಯ, ಉಡುಪಿ


ಗಣಿಗಾರಿಕೆ ಪ್ರದೇಶದಲ್ಲಿ ಸ್ಥಾಪಿಸಲಾಗಿರುವ ಬೃಹತ್ ಯಂತ್ರ ಸ್ಥಾವರಗಳು, ಕಟ್ಟಡಗಳು, ಅದಿರುಸಾರ ಸಾಗಾಣಿಕೆಗಾಗಿ ಹಾಕಲಾಗಿರುವ 67 ಕಿ.ಮೀ. ಉದ್ದದ ಭೂಗತ ಪೈಪ್‌ಲೈನ್, ಕ್ಯಾಪ್ಟಿವ್ ಪವರ್ ಪ್ಲಾಂಟ್, ಇತ್ಯಾದಿಗಳಿಗಾಗಿ ಕಂಪನಿ ಮಾಡಿರುವ ಐದಾರು ಸಾವಿರ ಕೋಟಿ ರೂಪಾಯಿಗಳಷ್ಟು ಹೂಡಿಕೆ ವ್ಯರ್ಥವಾಗಲಿದೆ. ಒಟ್ಟಿನಲ್ಲಿ ಸಾರ್ವಜನಿಕ ರಂಗದ ಈ ಲಾಭದಾಯಕ ಉದ್ಯಮವನ್ನು ಕತ್ತು ಹಿಚುಕಿ ಸಾಯಿಸುವ ಪರಿಣಾಮವಾಗಿ ಉಂಟಾಗುವ ನಿರ್ವಾತ ಅತಿ ಕೆಟ್ಟ ಪರಿಣಾಮಗಳಿಗೆ ಕಾರಣವಾಗಬಹುದು.


ಸಂಕಷ್ಟದಲ್ಲಿರುವ KIOCL ನ ದಿನಗೂಲಿ ಕಾರ್ಮಿಕರು

ಅದಿರನ್ನು ತೆಗೆಯಬಹುದಾದ ಗರಿಷ್ಠ ಹಂತವನ್ನು (maximum pit level) ತಲುಪುವ ಮೊದಲೇ ಗಣಿಗಾರಿಕೆಯನ್ನು ಹಠಾತ್ತಾಗಿ ನಿಲ್ಲಿಸಿಬಿಟ್ಟರೆ ಅನರ್ಥವುಂಟಾಗಬಹುದೆಂದು ನ್ಯಾಶನಲ್ ಇನ್ಸ್ಟಿಟ್ಯೂಟ್ ಆಫ್ ರಾಕ್ ಮೆಕಾನಿಕ್ಸ್ ಎಚ್ಚರಿಕೆ ನೀಡಿದೆ. ಗಣಿಗಾರಿಕೆ ನಡೆದ ಸ್ಥಳದಲ್ಲಿ ಇಳಿಜಾರುಗಳನ್ನು ಸಮರ್ಪಕವಾಗಿ ನಿರ್ವಹಿಸಲು ಇನ್ನೂ ಸ್ವಲ್ಪಕಾಲ ಗಣಿಗಾರಿಕೆ ನಡೆಸಲು ಅವಕಾಶ ಅಗತ್ಯವಿದೆಯೆಂದು ಖ್ಯಾತ ಪರಿಸರವಾದಿ ಸುರೇಶ್ ಹೆಬ್ಳೀಕರ್ ಅವರ ನೇತೃತ್ವದ ಸಮಿತಿಯೂ ಶಿಫಾರಸು ಮಾಡಿದೆಯಂತೆ. ಕಂಪನಿಯಲ್ಲಿನ ಕಾರ್ಮಿಕ ಸಂಘಟನೆಯೊಂದು ಈ ವಿವಾದದಲ್ಲಿ ತಾನೂ ಆಸಕ್ತಿ ಹೊಂದಿರುವ ಕಾರಣ ಗಣಿಗಾರಿಕೆ ನಿಲ್ಲಿಸುವ ಆದೇಶವನ್ನು ಪುನಃ ಪರಿಶೀಲಿಸಬೇಕೆಂದು ನ್ಯಾಯಾಲಯವನ್ನು ವಿನಂತಿಸಿದೆ. ಆದರೂ ಈ ಎಲ್ಲ ಅಹವಾಲುಗಳನ್ನು ತಿರಸ್ಕರಿಸಿರುವ ಸುಪ್ರಿಂ ಕೋರ್ಟು ದಶಂಬರ ಅಂತ್ಯದೊಳಗಾಗಿ ಗಣಿಗಾರಿಕೆಯನ್ನು ಸ್ಥಗಿತಗೊಳಿಸ ಬೇಕೆಂದು ಕಟ್ಟಾಜ್ಞೆ ನೀಡಿದೆ.

“ಕರ್ನಾಟಕದ ಖನಿಜ ಸಂಪತ್ತನ್ನು ಲೂಟಿ ಮಾಡಲು ಬಿಡಲಾರೆವು” ಮತ್ತು “ತುಂಗಾನದಿ ಉಳಿಸಿ” (ತುಂಗಾ ನದಿಗೂ ಗಣಿಗಾರಿಕೆಗೂ ಏನೂ ಸಂಬಂಧ ಇಲ್ಲದಿದ್ದರೂ) ಮುಂತಾದ ಘೋಷಣೆಗಳ ನೆಲೆಯಲ್ಲಿ ಕುದುರೆಮುಖ ಗಣಿಗಾರಿಕೆಯನ್ನು ವಿರೋಧಿಸುವ ಮೂಲಕ ನಕ್ಸಲೀಯ ಪರ ಸಂಘಟನೆಗಳು ಇಲ್ಲಿ ನೆಲೆಕಂಡು ಕೊಳ್ಳುವಲ್ಲಿ ಯಶಸ್ವಿಯಾಗಿವೆ. ಕೆಲವು ಬುದ್ಧಿಜೀವಿಗಳು, ಸಾಹಿತಿಗಳು ಮತ್ತು ಪರಿಸರವಾದಿ ಗಳೆನಿಸಿ ಕೊಂಡವರೂ ಇದಕ್ಕೆ ಬಲಿಬಿದ್ದದ್ದೂ ಇದೆ. ಗಣಿಗಾರಿಕೆ ಸ್ಥಗಿತಗೊಂಡು ಕಂಪನಿ ಇಲ್ಲಿಂದ ಎತ್ತಂಗಡಿ ಮಾಡಲ್ಪಟ್ಟರೆ ನಕ್ಸಲೀಯ ಚಟುವಟಿಕೆ ಇನ್ನೂ ವ್ಯಾಪಕಗೊಳ್ಳಬಹುದು.

ಗಣಿಗಾರಿಕೆಯ ಪ್ರಶ್ನೆ ಇರಲಿ, ನೀರಾವರಿ ಅಥವಾ ಅಣೆಕಟ್ಟು ನಿರ್ಮಾಣದ ಪ್ರಶ್ನೆಯಿರಲಿ ಯಾವುದನ್ನು ಗಂಭೀರವಾಗಿ ಪರ್ಯಾಲೋಚಿಸದೆ ಲಘುವಾಗಿ ತೀರ್ಮಾನ ಕೈಗೊಳ್ಳುವ ಕರ್ನಾಟಕ ಸರಕಾರ ಹಾಗೂ ಅಂದಿನ ಎನ್‌ಡಿಎ ಕೂಟದ ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯಗಳು ಇದರಲ್ಲಿ ಮುಖ್ಯ ಅಪರಾಧಿಗಳು. ರಾಷ್ಟ್ರೀಯ ಉದ್ಯಾನವನದ ಅಧಿಸೂಚನೆಗಳನ್ನಾಗಲೀ, ಗಣಿಗಾರಿಕೆಗೆ ತಾತ್ಕಾಲಿಕ ಪರವಾನಗಿ ನೀಡುವಾಗ ಆಗಲೀ ಸಾಕಷ್ಟು ಎಚ್ಚರಿಕೆ ವಹಿಸದ ರಾಜ್ಯ ಸರಕಾರ ಸುಪ್ರಿಂ ಕೋರ್ಟಿನ ಮುಂದೆ ಪ್ರಮಾಣ ಪತ್ರ ಸಲ್ಲಿಸುವಾಗಲೂ ಪದೇ ಪದೇ ತನ್ನ ನಿಲುವನ್ನು ಬದಲಾಯಿಸಿತು. ಒಮ್ಮೆ ಅಂತಿಮ ಅಧಿಸೂಚನೆಯಲ್ಲಿ ಗಣಿಗಾರಿಕೆಯ ಪ್ರದೇಶಕ್ಕೆ ವಿನಾಯತಿ ನೀಡುವುದನ್ನು ಸಮರ್ಥಿಸಿಕೊಂಡರೆ ಇನ್ನೊಮ್ಮೆ ಐದು ವರ್ಷಗಳ ಕಾಲ ಮಾತ್ರ ಗಣಿಗಾರಿಕೆಗೆ ಅನುಮತಿ ನೀಡುವುದಾಗಿ ಹೇಳಿಕೊಂಡಿತು. ಈ ಪ್ರದೇಶದಲ್ಲಿ ಪರಿಸರದ ಮೇಲಾಗಿರುವ ಪರಿಣಾಮವನ್ನು ಕುರಿತು ಮಹಾರಾಷ್ಟ್ರದ ನಾಗಪುರದ ನೆಹರೂ ನಗರದಲ್ಲಿರುವ “ಪರಿಸರ ಸಂಶೋಧನಾ ಸಂಸ್ಥೆ”ಯಿಂದ ಮತ್ತು ಡೆಹರಾಡೂನ್‌ನ “ವನ್ಯಜೀವಿ ಸಂಸ್ಥೆ”ಯಿಂದಲೂ ಅಧ್ಯಯನ ನಡೆಸುವುದಾಗಿ ಹೇಳಿಕೊಂಡಿದ್ದರೂ ಅಂತಹ ಅಧ್ಯಯನ ಮಾಡಿಸಲೇ ಇಲ್ಲ. ಕೇಂದ್ರ ಸರಕಾರದ ಪರಿಸರ ಮತ್ತು ಅರಣ್ಯ ಸಚಿವಾಲಯ (MOEF) ವಂತೂ ಒಮ್ಮೆ ಇಪ್ಪತ್ತು ವರ್ಷಗಳಿಗೆ ಗುತ್ತಿಗೆಯನ್ನು ನವೀಕರಿಸುವುದಾಗಿಯೂ ಮತ್ತೊಮ್ಮೆ ಐದು ವರ್ಷಗಳಿಗೆ ನವೀಕರಿಸುವುದಾಗಿಯೂ ಕೊನೆಗೆ ಮರಳಿ ಇಪ್ಪತ್ತು ವರ್ಷವೆಂದೂ ತನ್ನ ಪ್ರಮಾಣ ಪತ್ರದಲ್ಲಿ ಹೇಳಿಕೊಂಡಿತು. ಪರಿಸರವಾದಿಗಳು, ಸಾಹಿತಿಗಳು ಮತ್ತು ಇತರ ಕೆಲವೆಡೆ ಮಾಡಿದ ಗದ್ದಲಕ್ಕೆ ಅಂಜಿದ ಕರ್ನಾಟಕ ಸರಕಾರವಂತೂ ಕೊಟ್ಟ ಕೊನೆಗೆ ತಾನು ಐದು ವರ್ಷಗಳಿಗೆ ಮಾತ್ರ ಗುತ್ತಿಗೆಯನ್ನು ನವೀಕರಿಸುವುದಾಗಿ ಪ್ರಮಾಣಪತ್ರ ಸಲ್ಲಿಸುವ ಮೂಲಕ ಕಳೆದ 25 ವರ್ಷಗಳಿಂದ ಪ್ರತಿವರ್ಷವೂ ಅಬಕಾರಿ ಸುಂಕ, ಕಸ್ಟಮ್ಸ್ ಶುಲ್ಕ, ರಾಯಧನ ಇತ್ಯಾದಿಗಳ ಮುಖಾಂತರ ನೂರಾರು ಕೋಟಿ ರೂಪಾಯಿ ಆದಾಯ ನೀಡುತ್ತಿದ್ದ ಕುದುರೆಮುಖ ಕಂಪನಿಗೆ ಬೆನ್ನಲ್ಲಿ ಇರಿಯಿತು. ನ್ಯಾಯಮೂರ್ತಿ ವೈ.ಕೆ.ಸಭರ್‌ವಾಲ್, ನ್ಯಾಯಮೂರ್ತಿ ಅರಿಜಿತ್ ಪಸಾಯತ್ ಮತ್ತು ಅಂದಿನ ಮುಖ್ಯ ನ್ಯಾಯಾಧೀಶರನ್ನೊಳಗೊಂಡಿದ್ದ ನ್ಯಾಯಪೀಠವು ಕರ್ನಾಟಕ ಸರಕಾರ ಹಾಗೂ ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯದ ವರ್ತನೆಯನ್ನು ‘ತಿಪ್ಪರಲಾಗ’ವೆಂದು ವರ್ಣಿಸಿದೆಯಲ್ಲದೆ ‘ಊಸರವಳ್ಳಿ’ಯಂತೆ ಪದೇ ಪದೇ ಬಣ್ಣ ಬದಲಾಯಿಸಿದುದಕ್ಕಾಗಿ ಅವುಗಳನ್ನು ಕಟುವಾದ ಶಬ್ದಗಳಲ್ಲಿ ತರಾಟೆಗೆ ತೆಗೆದುಕೊಂಡಿದೆ.


KIOCL ಪ್ಲಾಂಟ್

ಮುಂದಿನ ಜನವರಿಯಲ್ಲಿ, ಗಣಿಗಾರಿಕೆಯನ್ನು ಸ್ಥಗಿತಗೊಳಿಸುವ ಕುರಿತು ಕಂಪನಿ ಸಲ್ಲಿಸಿರುವ ಮರುಪರಿಶೀಲನಾ ಅರ್ಜಿ ಸುಪ್ರಿಂ ಕೋರ್ಟಿನ ಮುಂದೆ ಬರುವ ಸಾಧ್ಯತೆ ಇದ್ದರೂ ರಾಜ್ಯ ಸರಕಾರ ಮತ್ತು ಕೇಂದ್ರ ಸರಕಾರಗಳು ಧೃಡವಾದ ನಿರ್ಧಾರ ತೆಗೆದುಕೊಂಡು 1980ರ ಅರಣ್ಯ (ಸಂರಕ್ಷಣಾ) ಕಾಯ್ದೆ ಮತ್ತು 1972ರ ವನ್ಯಜೀವಿ (ಸಂರಕ್ಷಣಾ) ಕಾಯ್ದೆಗಳಿಗೆ ಸೂಕ್ತ ಮಾರ್ಪಾಟು ತಂದು ವಿವೇಚನಾಪೂರ್ಣ ಗಣಿಗಾರಿಕೆಗೆ ಅವಕಾಶ ನೀಡುವಂತಹ ಅಧಿಕಾರವನ್ನು ಹೊಂದದ ಹೊರತು ಕುದುರೆಮುಖ ಕಂಪನಿಗೆ ಬಂದಂತಹ ದುರವಸ್ಥೆಯನ್ನು ತಪ್ಪಿಸಲು ಸಾಧ್ಯವಿಲ್ಲ. ಎಲ್ಲರನ್ನೂ ಸಂತುಷ್ಟಗೊಳಿಸುವ ನಿಲುಮೆಯಿಂದ ಯಾರಿಗೂ ಒಳಿತಾಗದು. ಸರಕಾರ ಈ ನಿಟ್ಟಿನಲ್ಲಿ ಗಂಭೀರವಾಗಿ ಚಿಂತಿಸುವುದೇ?

ಡಬ್ಲ್ಯುಟಿಓ ಒಪ್ಪಂದ ಜನ ಹಿತಕ್ಕೆ ಮಾರಕ

ಡಿಸೆಂಬರ್ 13,2005ರಂದು ಹಾಂಕಾಂಗ್‌ನಲ್ಲಿ ವಿಶ್ವ ವ್ಯಾಪಾರ ಸಂಘಟನೆ ಸಭೆ ನಡೆಯಲಿದ್ದು, ಭಾರತ ಕಣ್ಣುಮುಚ್ಚಿ ಸಹಿ ಹಾಕಲು ಮುಂದಾಗಿದೆ. ಇದಕ್ಕೂ ಮುನ್ನ ಲೋಕಸಭೆಯಲ್ಲಿ ಈ ಬಗ್ಗೆ ಸಮಗ್ರ ಚರ್ಚೆ ನಡೆಸಿ ನಂತರ ನಿರ್ಧಾರ ಕೈಗೊಳ್ಳಬೇಕು ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾಂ. ಜಿ.ಎನ್.ನಾಗರಾಜ್ ಕೋಲಾರದಲ್ಲಿ ನಡೆದ ಸಮಾವೇಶದಲ್ಲಿ ಒತ್ತಾಯಿಸಿದರು.

'ಡಬ್ಲ್ಯುಟಿಒ ಸದಸ್ಯ ರಾಷ್ಟ್ರಗಳ ಮಂತ್ರಿ ಮಟ್ಟದ ಸಮಾವೇಶ'ಕ್ಕೆ ಸಂಬಂಧಿಸಿದಂತೆ ಸಿಪಿಐ(ಎಂ) ನಿಲುವು ಕುರಿತ ಕೋಲಾರ ಜಿಲ್ಲಾಮಟ್ಟದ ಸಭೆಯಲ್ಲಿ ಮಾತನಾಡಿ, ರಾಜಕೀಯ ಪಕ್ಷಗಳು ಈ ವಿಷಯವನ್ನು ಜನರಿಗೆ ತಿಳಿಸದೆ ಮುಚ್ಚಿಡುತ್ತಿವೆ. ಜನ-ಹಿತವನ್ನು ಕಡೆಗಣಿಸಿ ರೈತರನ್ನು ಕತ್ತಲೆಯಲ್ಲಿಟ್ಟು ಸಹಿ ಹಾಕಲು ಮುಂದಾಗಿವೆ. ಕೇಂದ್ರದ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಶ್ರೀಮಂತ ದೇಶಗಳ ಗುಲಾಮರಾಗಿ ಕೆಲಸ ಮಾಡಲು ಹೊರಟಿದ್ದು, ದ್ರೋಹ ಬಗೆಯುವ ಒಪ್ಪಂದಕ್ಕೆ ಸಹಿ ಹಾಕಲು ಮುಂದಾಗಿದೆ ಎಂದು ಅವರು ಹೇಳಿದರು.

ಆಮದು ನಿಷೇಧ : ಹಾಂಕಾಂಗ್‌ನಲ್ಲಿ ನಡೆಯುವ ಸಮಾವೇಶದಲ್ಲಿ ಕೃಷಿ, ಕೈಗಾರಿಕೆ, ಶಿಕ್ಷಣ, ಆರೋಗ್ಯ, ವ್ಯಾಪಾರಕ್ಕೆ ಸಂಬಂಧಿಸಿದಂತೆ ಸಹಿಮಾಡುವ ಪ್ರಯತ್ನ ನಡೆದಿದೆ. ಪ್ರಗತಿ ಹೊಂದಿದ ರಾಷ್ಟ್ರಗಳು ಕೃಷಿಗೆ ಶೇ.50 ರಿಂದ 60ರಷ್ಟು ಸಬ್ಸಿಡಿ ನೀಡುತ್ತಿವೆ. ಇದರಿಂದ ಉತ್ಪಾದನಾ ವೆಚ್ಚ ಕಡಿಮೆಯಾಗಿ ಬೆಲೆ ಕೂಡ ಕಡಿಮೆಯಾಗಲಿದೆ. ಆದರೆ ನಮ್ಮಲ್ಲಿ ಶೇ.1.5ರಷ್ಟು ಮಾತ್ರ ಸಬ್ಸಿಡಿ ನೀಡಲಾಗುತ್ತಿದ್ದು, ಬೆಲೆ ದುಬಾರಿಯಾಗಲಿದೆ. ಇಂತಹ ಸಂದರ್ಭದಲ್ಲಿ ವಿದೇಶಿ ಉತ್ಪನ್ನಗಳು ಬಂದು ದೇಶಿಯ ಕೃಷಿಯನ್ನು ನಾಶ ಮಾಡುವಂತಿದ್ದರೆ ಅದನ್ನು ನಿಷೇಧಿಸುವ ಅಧಿಕಾರವನ್ನು ಸರ್ಕಾರ ಹೊಂದುವಂತಹ ಒಪ್ಪಂದಗಳು ಇರುವಂತೆ ನೋಡಿಕೊಳ್ಳಬೇಕು ಎಂದು ಆಗ್ರಹಪಡಿಸಿದರು.

ಆಹಾರ ಭದ್ರತೆಯ ವಿಶೇಷ ರಕ್ಷಣೆ ಇರಬೇಕು. ಆತ್ಮಹತ್ಯೆ ಪರಿಸ್ಥಿತಿ ಬಂದರೆ ಅಂತಹ ಬೆಳೆಯ ಆಮದು ನಿಲ್ಲಿಸುವಂತಹ 'ಜೀವನ ಭದ್ರತೆ' ಅವಕಾಶ ಕಲ್ಪಿಸಬೇಕು. ದೇಶದಲ್ಲಿ ಬೆಳೆಯುವ ಉತ್ಪನ್ನಗಳನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳಬೇಕು ಎಂಬ ಕಡ್ಡಾಯ ನಿಯಮವನ್ನು ತೆಗೆದು ಹಾಕಬೇಕು. ಕೈಗಾರಿಕೆ ಉತ್ಪನ್ನಗಳಿಗೆ ಆಮದು ಶುಲ್ಕ ಅಥವಾ ತೆರಿಗೆ ಹಾಕಲು ಒಪ್ಪಂದದಲ್ಲಿ ಅವಕಾಶ ಇರಬೇಕು ಎಂದು ಒತ್ತಾಯಿಸಿದರು.



ಜೀವರಕ್ಷಕ ಔಷಧಿಯನ್ನು ಬೇರೆ ಯಾವುದೇ ಕಂಪನಿ ಉತ್ಪಾದನೆ ಮಾಡದಂತೆ ಮಾಡಿದರೆ ಜನಸಾಮಾನ್ಯರು ಆರೋಗ್ಯ ರಕ್ಷಣೆಯಿಂದ ವಂಚಿತರಾಗಬೇಕಾಗುತ್ತದೆ ಎಂದು ಎಚ್ಚರಿಸಿದರು. ಆರೋಗ್ಯ ಕ್ಷೇತ್ರದಲ್ಲಿ ವಿದೇಶಿ ಸಂಸ್ಥೆಗಳ ಬಂಡವಾಳ ಹೂಡಿಕೆ ಹಾಗೂ ವಿದೇಶಿ ಆಸ್ಪತ್ರೆ ತೆರೆಯುವುದನ್ನು ತಡೆಯಬೇಕು. ವಿದೇಶಿ ವಿಶ್ವವಿದ್ಯಾಲಯಗಳು ಹಾಗೂ ಕಾಲೇಜುಗಳನ್ನು ತೆರೆಯಲು ಅವಕಾಶ ನೀಡಬಾರದು. ಒಂದು ವೇಳೆ ಅವಕಾಶ ನೀಡಿದರೆ ಜನರು ಆರೋಗ್ಯ ಹಾಗೂ ಶಿಕ್ಷಣದಿಂದ ವಂಚಿತರಾಗುತ್ತಾರೆ. ವಿಶ್ವ ವಾಣಿಜ್ಯ ಒಪ್ಪಂದಕ್ಕೆ ಸಹಿ ಹಾಕುವ ಮೊದಲು ಚಿಂತಿಸಿ ಜನಹಿತ ಕಾಪಾಡಬೇಕು.

ಇಲ್ಲವಾದರೆ ಇಡೀ ದೇಶವನ್ನು ವಿದೇಶಿಯವರಿಗೆ ಒತ್ತೆಯಿಡಬೇಕಾಗುತ್ತದೆ ಎಂದು ಮುಂದಿನ ಪರಿಸ್ಥಿತಿಯ ಒಳ ಹೊರಗನ್ನೂ ಬಿಚ್ಚಿಟ್ಟರು.

'ಡಬ್ಲ್ಯುಟಿಒ ಒಪ್ಪಂದದಿಂದ ಕೃಷಿ ನಾಶ'

- ಜಿ.ವಿ.ಶ್ರೀರಾಮರೆಡ್ಡಿ

ವಿಶ್ವ ವ್ಯಾಪಾರ ಸಂಘಟನೆಯೊಂದಿಗೆ ಮಾಡಿಕೊಂಡಿರುವ ಒಪ್ಪಂದವನ್ನು ಯಥಾವತ್ತಾಗಿ ಜಾರಿ ಮಾಡಿದರೆ ಈಗಾಗಲೇ ಅವನತಿಯತ್ತ ಸಾಗಿರುವ ಕೃಷಿ ರಂಗ ಸಂಪೂರ್ಣ ದಿವಾಳಿಯಾಗಲಿದೆ ಎಂದು ಜಿಲ್ಲಾ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ ಹಾಗೂ ಬಾಗೇಪಲ್ಲಿ ಶಾಸಕರೂ ಆದ ಶಾಸಕ ಜಿ.ವಿ.ಶ್ರೀರಾಮರೆಡ್ಡಿ ಇಲ್ಲಿ ಸೋಮವಾರ ಎಚ್ಚರಿಸಿದರು.

ಈಗಿರುವಂತೆ ಡಬ್ಲ್ಯುಟಿಒ ಒಪ್ಪಂದಕ್ಕೆ ಸರ್ಕಾರ ಸಹಿ ಹಾಕಬಾರದು. ಈ ಒಪ್ಪಂದ ಜಾರಿಯಾದರೆ ಕೃಷಿ ಉತ್ಪಾದನೆ ಕಡಿಮೆಯಾಗಿ ರೈತರ ಆತ್ಮಹತ್ಯೆ ಹೆಚ್ಚುತ್ತವೆ. ಜನರ ಆದಾಯ ಕುಂಠಿತವಾಗಿ ಆಹಾರ ಸಾಮಗ್ರಿಗಳ ಉತ್ಪಾದನೆ ಕಡಿಮೆಯಾಗಲಿದೆ. ಇದರಿಂದ ದೇಶ ತನ್ನ ಸಾರ್ವಭೌಮತ್ವವನ್ನು ಕಳೆದುಕೊಂಡು, ಬಲಿಷ್ಠ ರಾಷ್ಟ್ರಗಳ ಗುಲಾಮರಾಗಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಅಭಿವೃದ್ಧಿ ಹೊಂದಿದ ಅಮೇರಿಕ, ಬ್ರಿಟನ್‌ನಂತಹ ರಾಷ್ಟ್ರಗಳು ತಮ್ಮಲ್ಲಿ ಕೃಷಿಗೆ ಸಬ್ಸಿಡಿ ನೀಡುತ್ತಿವೆ. ಆದರೆ ಅಭಿವೃದ್ಧಿ ಹೊಂದುತ್ತಿರುವ ಭಾರತದಂತಹ ದೇಶಗಳು ಸಬ್ಸಿಡಿ ನೀಡದಂತೆ ನಿರ್ಬಂಧ ಹೇರುತ್ತಿವೆ. ಕೃಷಿ ಉತ್ಪನ್ನಗಳ ಆಮದಿನ ಮೇಲೆ ಇದ್ದ ನಿರ್ಬಂಧಗಳನ್ನು ರದ್ದುಮಾಡಿ, ಮುಕ್ತ ಅವಕಾಶ ನೀಡಲಾಗುತ್ತಿದೆ. ಹಿಂದುಳಿದ ರಾಷ್ಟ್ರಗಳ ಮೇಲೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಧಾಳಿ ನಡೆಸುತ್ತಿದ್ದು, ಅಮೇರಿಕದಲ್ಲಿ ಕೃಷಿಗೆ ಸಬ್ಸಿಡಿ ನೀಡುವುದಾದರೆ ನಾವೇಕೆ ನೀಡಬಾರದು? ಎಂದು ಕೇಳಬೇಕಿದೆ. ಕಾನ್‌ಕೂನ್ ಸಮಾವೇಶದಲ್ಲಿ ಕೈಗೊಂಡ ನಿರ್ಧಾರಗಳನ್ನು ಬದಲಿಸಬಾರದು ಎಂದು ಒತ್ತಾಯಿಸಿದರು.

ಕೇಂದ್ರದ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರಕ್ಕೆ ಬೆಂಬಲ ನೀಡಿರುವ ಸಿಪಿಐ(ಎಂ) ತನ್ನ ನಿಲುವನ್ನು ಸ್ಪಷ್ಟಪಡಿಸಿದೆ. ವಿಶ್ವ ವ್ಯಾಪಾರ ಸಂಘಟನೆಗೆ ಸಂಬಂಧಿಸಿದಂತೆಯೂ ಸಲಹೆಗಳನ್ನು ನೀಡಲಾಗಿದೆ. ಯಾವುದೇ ಕಾರಣಕ್ಕೂ ದೇಶಕ್ಕೆ ಮಾರಕವಾಗುವ ನಿರ್ಧಾರಗಳನ್ನು ಕೈಗೊಳ್ಳಬಾರದು. ಡಿ.13ರಂದು ಹಾಂಕಾಂಗ್‌ನಲ್ಲಿ ಸಮಾವೇಶ ನಡೆಯಲಿದ್ದು, ಅಂದು ಸಿಪಿಐ(ಎಂ) ದೇಶದಾದ್ಯಂತ ಪ್ರತಿಭಟನೆ ನಡೆಸಲಿದೆ ಎಂದರು.

ಸಿಪಿಐ(ಎಂ) ಮುಖಂಡರಾದ ವೆಂಕಟಸ್ವಾಮಿರೆಡ್ಡಿ, ಸಿ.ಡಿ.ಗಂಗುಲಪ್ಪ, ಗಂಗಿರೆಡ್ಡಿ, ಚೌರಿದಾಸ್ ಗಾಂಧಿನಗರ ನಾರಾಯಣಸ್ವಾಮಿ, ಎ.ವಿ.ವೆಂಕಟರಾಂ, ಮುನಿವೆಂಕಟಪ್ಪ, ಸೂರ್ಯನಾರಾಯಣ ಮೊದಲಾದವರು ಉಪಸ್ಥಿತರಿದ್ದರು. ವಿ.ಗೀತಾ ಸ್ವಾಗತಿಸಿದರು.

— ಜಿ.ಎನ್.ನಾಗರಾಜ್

○

......ಕಂಪ್ಯೂಟರ್ ಶಿಕ್ಷಕರ ತಲೆದಂಡ

ಪುಟ 9 ರಿಂದ

ಡಿವೈಎಫ್‌ಐಗಳಂತಹ ಸಂಘಟನೆಗಳು ನೀಡುತ್ತಿರುವ ಬೆಂಬಲದಿಂದಾಗಿ ಶಿಕ್ಷಕರ ಹೋರಾಟದ ದೃಢತೆ ತೀವ್ರಗೊಂಡಿದೆ. ಈಗ ಕುಳಿತಿರುವ ಧರಣಿಯನ್ನು ಸಮಸ್ಯೆ ಬಗೆಹರಿಯುವವರೆಗೆ ಅನಿರ್ದಿಷ್ಟಾವಧಿಯವರೆಗೆ ಮುಂದುವರಿಸಲು ಶಿಕ್ಷಕರು ಖಚಿತವಾದ ನಿಲುವಿಗೆ ಬಂದಿದ್ದಾರೆ. ಅದು ಬರಿಯ ಧರಣಿ ಕಾರ್ಯಕ್ರಮವಲ್ಲ. ಡಿಸೆಂಬರ್ 19ರವರೆಗೆ ಸರದಿ ಉಪವಾಸ ಸತ್ಯಾಗ್ರಹ ನಡೆಸಲೂ ಹಾಗೂ ಡಿಸೆಂಬರ್ 20ರಿಂದಾಚೆಗೆ ಸಮಸ್ಯೆ ಬಗೆಹರಿಯದಿದ್ದರೆ ಆರಮಣಾಂತ ಉಪವಾಸ ಸತ್ಯಾಗ್ರಹ ನಡೆಸಲು ನಿರ್ಧರಿಸಿದ್ದಾರೆ.

ಶಿಕ್ಷಕರು ಕೇಳುತ್ತಿರುವುದಾದರೂ ಏನು?

ಚಳುವಳಿಕಾರರಿಂದ ಈ ಸಮಸ್ಯೆಯ ಪರಿಹಾರಕ್ಕೆ ಪ್ರಮುಖವಾಗಿ ಎರಡು ರೀತಿಯ ಸೂಚನೆಗಳಿವೆ. ಒಂದು ಹೊಸ ಟೆಂಡರ್ ಪ್ರಕ್ರಿಯೆ ರದ್ದು ಮಾಡಬೇಕು. ಇದು ಶೈಕ್ಷಣಿಕ ವರ್ಷದ ಮಧ್ಯಭಾಗವಾದ್ದರಿಂದ ಈ ಶೈಕ್ಷಣಿಕ ವರ್ಷದಲ್ಲಿ ಇದೇ ಶಿಕ್ಷಕರೇ ಮುಂದುವರಿಯುವಂತೆ ಸರ್ಕಾರ ಆದೇಶ ಹೊರಡಿಸಬೇಕು ಮತ್ತು ಮುಂದಿನ ಶೈಕ್ಷಣಿಕ ವರ್ಷಾರಂಭದೊಳಗೆ ವಿಶೇಷ ನೇಮಕಾತಿ ನಿಯಮಾವಳಿ ರೂಪಿಸಿ ಈ ಶಿಕ್ಷಕರ ನೇಮಕವನ್ನು ಕ್ರಮಬದ್ಧಗೊಳಿಸಬೇಕು. ಮತ್ತೊಂದು ಸೂಚನೆ ಏನೆಂದರೆ ಈ ಹಿಂದೆ ಖಾಸಗಿ ಕಂಪನಿಗಳು ಶಿಕ್ಷಕರನ್ನು ನೇಮಿಸಿಕೊಳ್ಳುವಾಗ ಮೀಸಲಾತಿ-ರೋಸ್ಟರ್ ನಿಯಮ ಇತ್ಯಾದಿ ಕ್ರಮಗಳನ್ನು ಪಾಲಿಸಿಲ್ಲವಾದ್ದರಿಂದ ಈ ಶಿಕ್ಷಕರ ಖಾಯಮಾತಿಗೆ ತಾಂತ್ರಿಕ ಅಡಚಣೆ ಇದೆ. ಹೀಗಾಗಿ ಸೂಕ್ತ ಉದ್ಯೋಗಭದ್ರತೆ ಸೇವಾ ಭದ್ರತೆಯೊಂದಿಗೆ ಟೆಂಡರ್‌ನ್ನು ನವೀಕರಿಸಿ ಇದೇ ಶಿಕ್ಷಕರನ್ನೇ ಮುಂದುವರಿಸುವುದು, ಆದರೆ ಖಾಸಗಿ ಗುತ್ತಿಗೆದಾರರ ಶೋಷಣೆಯ ವಿರುದ್ಧ ಸೂಕ್ತ ಕ್ರಮಗಳನ್ನು ವಹಿಸುವುದು.

ಹಳ್ಳದ ಹಾದಿ ಹಿಡಿದಿರುವ ಸರಕಾರದ ಚಿಂತನೆ

ಚಳುವಳಿ ಹೀಗೆ ಪರಿಹಾರಗಳಿಗಾಗಿ ಆಗ್ರಹಿಸುತ್ತಿದ್ದರೆ, ಜಾಗತೀಕರಣದ ಗ್ರಹಣ ಆವರಿಸಿಕೊಂಡಿರುವ ನಮ್ಮ ಸರ್ಕಾರದ ಚಿಂತನೆ ಹಳ್ಳದ ಹಾದಿ ಹಿಡಿದಿದೆ. ಹೊಸ ಗುತ್ತಿಗೆಗೆ ಟೆಂಡರ್ ಕರೆದಿರುವ ಸರ್ಕಾರ ಹಲವು ಷರತ್ತುಗಳನ್ನು ಸಡಿಲಿಸಿ ಶಿಕ್ಷಣ ವಿರೋಧಿ ದಾರಿ ಆಯ್ಕೆ ಮಾಡಿಕೊಂಡಿದೆ. ವಾಸ್ತವಿಕವಾಗಿ ಈ ಯೋಜನೆಯನ್ನು ರಾಜ್ಯದ ಎಲ್ಲಾ 3029 ಸರ್ಕಾರಿ ಮತ್ತು 2660 ಅನುದಾನಿತ ಶಾಲೆಗಳಿಗೂ ವಿಸ್ತರಿಸುವ ಅಗತ್ಯವಿದೆ. ಆದರೆ ಸರ್ಕಾರ ಮುಂದಿನ ಅವಧಿಗೆ ಎರಡು ಸಾವಿರಕ್ಕೆ ಬದಲಿಗೆ ಕೇವಲ ಒಂದು ಸಾವಿರ ಮಾತ್ರ 'ಪೂರ್ಣಾವಧಿ ಶಿಕ್ಷಕರು (permanent faculty) ಸಾಕು ಎನ್ನುತ್ತಿದೆ. ಶಿಕ್ಷಕರ ಅರ್ಹತೆಯನ್ನು ಬಿಇ, ಬಿಎಸ್‌ಸಿ ಮತ್ತು ಒಂದು ವರ್ಷದ ಕಂಪ್ಯೂಟರ್ ಕೋರ್ಸ್‌ಗೆ ಬದಲಿಗೆ ಯಾವುದೇ ಪದವಿ ಮತ್ತು ಒಂದು ವರ್ಷದ ಡಿಪ್ಲೋಮಾ ಕಂಪ್ಯೂಟರ್ ಕೋರ್ಸ್ ಎಂಬುದಾಗಿ ಬದಲಿಸಲು ಹೊರಟಿದೆ. ಶಿಕ್ಷಕರು ಸರ್ಕಾರದ ಇಂತಹ ನೀತಿಗಳ ವಿರುದ್ಧ ತೀವ್ರ ಪ್ರತಿಭಟನೆ ನಡೆಸಲು ಸಜ್ಜಾಗಿದ್ದಾರೆ. ಸರ್ಕಾರ ಈ ಹಿಂದೆ ಕೊಟ್ಟ ಮಾತಿನಂತೆ ನಡೆದುಕೊಳ್ಳದಿರುವುದರಿಂದ ಸರ್ಕಾರವು ಪಂಚಾಯ್ತಿ ಚುನಾವಣೆಯ ನಂತರ ಮಾತುಕತೆ ನಡೆಸುವುದಾಗಿ ಭರವಸೆ ನೀಡಿದ್ದರೂ ಚಳುವಳಿಯನ್ನು ನಿಲ್ಲಿಸದೇ ಮುಂದುವರಿಸಲು ಶಿಕ್ಷಕರು ನಿರ್ಧರಿಸಿದ್ದಾರೆ.

ಹೋರಾಟನಿರತ ಶಿಕ್ಷಕರಿಗೆ ಈಗಾಗಲೇ ವಿಮಾನೌಕರರ ಸಂಘ, ಜನವಾದಿ ಮಹಿಳಾ ಸಂಘಟನೆ, ಸಿಐಟಿಯು, ಕರ್ನಾಟಕ ಪ್ರಾಂತ ರೈತಸಂಘ ಇತ್ಯಾದಿ ಹಲವು ಸಂಘಟನೆಗಳ ಮುಖಂಡರು ಧರಣಿನಿರತ ಸ್ಥಳಕ್ಕೆ ಭೇಟಿ ನೀಡಿ ಬೆಂಬಲ ಘೋಷಿಸಿದ್ದಾರೆ. ಇನ್ನಷ್ಟು ಜನಪರ ಸಂಘಟನೆಗಳ ಬೆಂಬಲವೂ ಹರಿದುಬರಲಿದೆ.

ಇದೆಲ್ಲಕ್ಕಿಂತ ಮುಖ್ಯವಾಗಿ ಶಿಕ್ಷಕರು ತಮ್ಮ ಸಮಸ್ಯೆಗೆ ಕಾರಣವಾಗಿರುವ ಮೂಲ ಪ್ರಶ್ನೆಗಳನ್ನು ಸರಿಯಾಗಿ ಗ್ರಹಿಸಿ ಚಳುವಳಿ ನಡೆಸಿದಲ್ಲಿ ಮಾತ್ರ ಯಶಸ್ಸು ಸಾಧ್ಯ

ಮಾಹಿತಿ ಸಿಂಧು ಶಿಕ್ಷಕರ ಸಮಸ್ಯೆಗಳು ಆಕಸ್ಮಿಕವಲ್ಲ!

ವಿದೇಶಿ ಬಹುರಾಷ್ಟ್ರೀಯ ಕಂಪನಿಗಳು ಶ್ರೀಮಂತ ಬಂಡವಾಳಶಾಹಿ ದೇಶಗಳ ಲಾಭಕೋರ, ಲೂಟಿಕೋರ ಹಿತಾಸಕ್ತಿಗಳನ್ನು ಕಾಯಲು ಬದ್ಧವಾದ ಹಾಗೂ ಐಎಂಎಫ್, ವಿಶ್ವಬ್ಯಾಂಕ್‌ಗಳ ಸಾಲದ ಸುಳಿಗೆ ಸಿಕ್ಕಿ ಬಿದ್ದಿರುವ ಸರ್ಕಾರಗಳು ದೇಶದೊಳಗಿನ ನೌಕರರು, ಕಾರ್ಮಿಕರು ರೈತರನ್ನು ಸದೆಬಡಿಯುವ ನೀತಿಯನ್ನು ಅನುಸರಿಸುತ್ತಿವೆ. ಇಂತಹ ನೀತಿಯನ್ನು ದೇಶದ ಮೇಲೆ ಹೇರುತ್ತಿವೆ. ಈ ಜಾಗತೀಕರಣದ ಯುಗದಲ್ಲಿ ಯಾರಿಗೂ ಉದ್ಯೋಗಭದ್ರತೆ-ಸೇವಾ ಭದ್ರತೆ ಎಂಬುದು ಸಿಗಲಾರದು. ಎಲ್ಲವೂ ಖಾಸಗೀಕರಣ, ಹೊರಗುತ್ತಿಗೆ, ನೌಕರಿಯೆಲ್ಲಾ ತಾತ್ಕಾಲಿಕ, ಅರೆಕಾಲಿಕೆ, ಅತಂತ್ರ ಬದುಕು. ಅರಣ್ಯಪಾಲಕರು, ಗ್ರಾಮ ವಿದ್ಯುತ್ ಸಹಾಯಕರೂ, ಪರವಾನಗಿ ಭೂಮಾಪಕರು ಹೀಗೆ ಅಸಂಖ್ಯಾತ ನೌಕರರು ಇಂತಹದ್ದೇ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

ಸರ್ಕಾರದ ನೀತಿಗಳನ್ನು ಸಮಗ್ರವಾಗಿ ಅರ್ಥ ಮಾಡಿಕೊಂಡ ಸೈದ್ಧಾಂತಿಕ ಸ್ಪಷ್ಟತೆ ಹೊಂದಿದ ಒಂದು ಸದೃಢವಾದ ಚಳುವಳಿಯಿಂದ ಮಾತ್ರ ಸರ್ಕಾರದ ಇಂತಹ ನೀತಿಗಳನ್ನು ಹಿಮ್ಮೆಟ್ಟಿಸಲು ಸಾಧ್ಯ. ಇದನ್ನು ಸಾಧಿಸಬೇಕಾದರೆ ದುಡಿಯುವ ವರ್ಗದ ಚಳುವಳಿಯೊಂದಿಗೆ 'ಮಾಹಿತಿ' ಸಿಂಧು'.ಶಿಕ್ಷಕರು ಬೆರೆತು ಸರ್ಕಾರದ ನೀತಿಗಳ ವಿರುದ್ಧ ಸೆಣೆಸಬೇಕು.

ನಿರಾಶೆಗೆ ಕಾರಣವಿಲ್ಲ, ಚಳುವಳಿಗೆ ಸೋಲಿಲ್ಲ

ಇಷ್ಟೆಲ್ಲಾ ಕೇಳಿ ಯಾರೂ ನಿರಾಶರಾಗುವುದು ಅಗತ್ಯವಿಲ್ಲ. ಸರ್ಕಾರದ ನೀತಿಗಳ ವಿರುದ್ಧ ಸೆಣೆಸಿ ಗೆಲುವು ಪಡೆದ ಹಲವು ಚಳುವಳಿಗಳು ನಮ್ಮ ಕಣ್ಮುಂದೆಯೇ ಇವೆ. ಎಸ್‌ಎಫ್‌ಐ; ಡಿವೈಎಫ್‌ಐ ಮತ್ತು ಗ್ರಾಮೀಣ ಕೃಪಾಂಕ ನೌಕರರ ಸಂಘಟನೆಯ ನೇತೃತ್ವದಲ್ಲಿ ನಡೆದ ಸುದೀರ್ಘ ಚಳುವಳಿ ಸುಮಾರು 13 ಸಾವಿರ ನೌಕರರ ಬದುಕಿಗೆ ಒಂದು ಶಾಶ್ವತ ನೆಲೆ ಒದಗಿಸುವಲ್ಲಿ ಯಶಸ್ವಿಯಾಯಿತು ಎಂಬುದನ್ನು ನಾವು ಯಾರು ಮರೆಯಬಾರದು

○ ರಾಮಕೃಷ್ಣ.ಆರ್

ನಾಟಕ

'ಆಧುನಿಕ' ಸಮಾಜದಲ್ಲಿ ತೀವ್ರಗೊಳ್ಳುತ್ತಿರುವ ಹೆಣ್ಣು ಭ್ರೂಣ ಹತ್ಯೆಯ ಸಮಸ್ಯೆಯ ಕುರಿತ ನಾಟಕವೊಂದನ್ನು ಬೆಂಗಳೂರಿನ ಜಯನಗರದ ನ್ಯಾಷನಲ್ ಕಾಲೇಜಿನ 'ಎಚ್.ನರಸಿಂಹಯ್ಯ' ಸಭಾಂಗಣದಲ್ಲಿ ಪ್ರದರ್ಶಿಸಲಾಯಿತು. ಕಾರ್ಪೊರೇಷನ್ ಬ್ಯಾಂಕ್ ನೌಕರರೇ ಪೂರ್ಣವಾಗಿ ನಟಿಸಿದ ಈ ನಾಟಕ ರಾಷ್ಟ್ರೀಯ ಅಂತರ್ ಬ್ಯಾಂಕ್ ನಾಟಕ ಸ್ಪರ್ಧೆಯಲ್ಲಿ ವಿಶೇಷ ಕಾಸ್ಮಾಸ್ ಟ್ರೋಫಿ ಪ್ರಶಸ್ತಿಯನ್ನು ಗಳಿಸಿದೆ. ಇದೇ ಕಾರ್ಪೊರೇಷನ್ ಬ್ಯಾಂಕ್ ಉದ್ಯೋಗಿ ರಾಜೇಂದ್ರ ಕಾರಂತರು ರಚಿಸಿ ನಿರ್ದೇಶಿಸಿರುವ ಈ ನಾಟಕ ನೋಡುಗರ ಮನಸ್ಸನ್ನು ತಟ್ಟಿ, ನಮ್ಮೊಳಗೇ ಅಡಗಿರುವ ಹಲವು ಪುರುಷಪ್ರಧಾನ ಮೌಲ್ಯಗಳ ಬಗ್ಗೆ ಲಿಂಗ ತಾರತಮ್ಯ ಭ್ರೂಣಹತ್ಯೆ ಬಗೆಗೆ ನಮ್ಮನ್ನು ಚಿಂತನೆಗೆ ಹಚ್ಚುವಲ್ಲಿ ಯಶಸ್ವಿಯಾಗುತ್ತದೆ.

ಮನಸ್ಸು ತಟ್ಟುವ 'ಭ್ರೂಣ'

ವಿದ್ಯಾ ಮತ್ತು ಪ್ರಸಾದ್ ಗಂಡ ಹೆಂಡತಿಯರು. ಪ್ರಸಾದ್ ಬ್ಯಾಂಕ್‌ನೌಕರ. ವಿದ್ಯಾ ಮಹಿಳಾ ಸಂಘಟನೆಯ ನಾಯಕಿ. ಆಕೆ ದೌರ್ಜನ್ಯ, ಲಿಂಗತಾರತಮ್ಯದ ವಿರುದ್ಧ ಹೋರಾಡುವವಳು. ಹೆಂಡತಿಯನ್ನು ಪ್ರೀತಿಸುವ-ಆಕೆಯ ಬಗ್ಗೆ ಸಾಕಷ್ಟು ಕಾಳಜಿ ವಹಿಸುವ ಪ್ರಸಾದ್‌ಗೆ ಆಕೆಯ ಚಳುವಳಿ, ಹೋರಾಟಗಳ ಬಗೆಗೇನು ನಂಬಿಕೆ, ವಿಶ್ವಾಸ ಇಲ್ಲ. ಆತ 'ಪ್ರಾಕ್ಟಿಕಲ್' ಮನುಷ್ಯ. ಹೆಂಡತಿಯ ಮುಂದೆ ಕೆಲವೊಮ್ಮೆ ಸಾಮಾಜಿಕ ಕಾಳಜಿಯನ್ನು ತೋರಿಸುವ ತೋರಿಕೆಯ ಮಾತನಾಡುತ್ತಾನೆ.

ವಿದ್ಯಾಳ ಸ್ನೇಹಿತೆ ಶೋಭಾ. ಅವಳ ಹೊಟ್ಟೆಯಲ್ಲಿ ಬೆಳೆಯುತ್ತಿರುವುದು ಹೆಣ್ಣು ಮಗು ಎಂಬ ಕಾರಣಕ್ಕೆ ಆಕೆಯ ಅತ್ತೆ ಗಂಡ ಎಲ್ಲ ಸೇರಿ 'ಗರ್ಭಪಾತ'ಕ್ಕೆ ಒತ್ತಡ ಹಾಕುತ್ತಾರೆ. ವಿದ್ಯಾ ಅದನ್ನು ವಿರೋಧಿಸುತ್ತಾಳೆ. ಇದಾಗುವಾಗಲೇ ಪ್ರಸಾದ್ ತನ್ನ ಮಾಲಿಕತ್ವದ ಕಟ್ಟಡದಲ್ಲೇ 'ಭ್ರೂಣದ ಲಿಂಗ ಪರೀಕ್ಷೆ' ಮತ್ತು 'ಗರ್ಭಪಾತ' ನಡೆಸುವ ಕ್ಲಿನಿಕ್‌ಗೆ ಜಾಗವನ್ನು ಬಾಡಿಗೆಗೆ ಕೊಡುತ್ತಾನೆ. ಗರ್ಭಪಾತದ ಈ ಅಪಾರ ಲಾಭದ ವ್ಯವಹಾರದಲ್ಲಿ ಕಮಿಷನನ್ನು ಪಡೆಯುತ್ತಾನೆ.

ಈ ನಡುವೆ ಮದುವೆಯಾಗಿ ಬಹಳ ವರ್ಷಗಳಾಗಿದ್ದರೂ ಮಕ್ಕಳೇ ಆಗಿಲ್ಲದ ವಿದ್ಯಾ ಗರ್ಭಿಣಿಯಾಗುತ್ತಾಳೆ. ಹುಟ್ಟುವ ಮಗುವಿನ ಬಗೆಗೆ ಅಪಾರ ಕನಸುಗಳು ಪ್ರಸಾದನಿಗೆ. ವಿದ್ಯಾ ಸ್ನೇಹಿತೆ ಶೋಭಾಗೆ ಇದೇ ಕೇಂದ್ರದಲ್ಲಿ ಗರ್ಭಪಾತ ಮಾಡಲ್ಪಟ್ಟು, ಅದು ಅವಧಿ ಮೀರಿದ ಗರ್ಭಪಾತ ವಾದ್ದರಿಂದ ಗರ್ಭಕೋಶಕ್ಕೆ ಹಾನಿಯಾಗುತ್ತದೆ. ಆಕೆಯ ದೇಹದ ಸೊಂಟದ ಕೆಳಗಿನ ಭಾಗ ನಿಷ್ಕ್ರಿಯವಾಗಿ ಆಕೆ 'ಜೀವಂತ ಶವ'ದಂತಾಗುತ್ತಾಳೆ. ತನ್ನ ಸ್ನೇಹಿತೆಗೆ 'ಗರ್ಭಪಾತ'ಕ್ಕೆ ವೈದ್ಯರನ್ನು ಪರಿಚಯಿಸಿದ್ದು ತನ್ನ ಗಂಡನೇ ಎಂಬುದು ಮತ್ತು ಅಂತಹ ವ್ಯವಹಾರಗಳಿಂದ ಆತ ಕಮಿಷನ್ ಪಡೆಯುತ್ತಿರುವುದು ತಿಳಿದು ವಿದ್ಯಾಗೆ ಆಘಾತವಾಗುತ್ತದೆ. ವೈದ್ಯೆ ಮತ್ತು ಗಂಡನೊಂದಿಗೆ ಜಗಳವಾಡುತ್ತಾಳೆ ಮತ್ತು ತನ್ನ ಹೊಟ್ಟೆಗೆ ತಾನೇ ಹೊಡೆದುಕೊಂಡು ಆಕೆಗೂ ಗರ್ಭಪಾತವಾಗುತ್ತದೆ.

ಈ ಘಟನೆ ವೈದ್ಯೆ ಮತ್ತು ಮಗುವಿನ ಬಗ್ಗೆ ಅಪಾರ ನಿರೀಕ್ಷೆ ಹೊಂದಿದ್ದ ಗಂಡ ಇಬ್ಬರ ಮನಸ್ಸನ್ನು ಕಲಕಿ ಅವರೂ ಬದಲಾಗುತ್ತಾರೆ. ನಾಟಕದ ಕೊನೆಯಲ್ಲಿ ವಿದ್ಯಾಳಿಗೆ ಒಂದು ಹೆಣ್ಣು ಮಗು ಹುಟ್ಟಿರುತ್ತದೆ. ಹಿಂದೆ 'ಗಂಡುಮಗು'ವಿಗಾಗಿ ಹಂಬಲಿಸುತ್ತಿದ್ದ ಪ್ರಸಾದ್ ಆ ಹೆಣ್ಣು ಮಗುವನ್ನು ಪ್ರೀತಿಯಿಂದ ನೋಡುತ್ತಿರುತ್ತಾನೆ. ವಿದ್ಯಾ ಮಹಿಳಾ ಸಂಘಟನೆ ಹಾಗೂ ಚಳುವಳಿಯಲ್ಲಿ ಇನ್ನಷ್ಟು ಹೆಚ್ಚು ತೊಡಗಿರುತ್ತಾಳೆ. 'ಗರ್ಭಪಾತ' ವೈದ್ಯೆ ತಾನು ಅಕ್ರಮವಾಗಿ ಗಳಿಸಿದ ಹಣವನ್ನು ಅನಾಥ ಮಕ್ಕಳ ಅಭ್ಯುದಯಕ್ಕಾಗಿ ಬಳಸುವಂತಾಗಿರುತ್ತಾಳೆ.

ನಾಟಕದ ಆರಂಭದಲ್ಲಿಯೇ ರಂಗದ ಮೇಲೆ ತೆರೆದುಕೊಳ್ಳುವ ಒಂದು ದೃಶ್ಯ ನೋಡುಗರನ್ನು ಬೆಚ್ಚಿಬೀಳಿಸುತ್ತದೆ. ಆಗ ವಿದ್ಯಾ ತನ್ನ ಮನೆಯಲ್ಲಿ ಅನ್ಯಾಯಕ್ಕೆ ತುತ್ತಾದ ಹೆಣ್ಣೊಂದರ ಸಂದರ್ಶನ ನಡೆಸುತ್ತಾಳೆ. ಆಕೆ ಉತ್ತರಕರ್ನಾಟಕದ ಹಳ್ಳಿಯೊಂದರಿಂದ ಹರ್ಯಾಣಕ್ಕೆ ಮಾರಲ್ಪಟ್ಟ ಹೆಣ್ಣು. ಅಲ್ಲಿನ ಕುಟುಂಬವೊಂದರಲ್ಲಿ ಆಕೆ ಅನುಭವಿಸಿದ ಹಿಂಸೆ ಏನು? ಆಕೆ ಮುದುಕರಿಂದ ಯುವಕರವರೆಗೆ ಕುಟುಂಬದ ಎಲ್ಲ ಪುರುಷರಿಗೂ ಲೈಂಗಿಕ ತೃಷೆ ತೀರಿಸುವವಳಾಗಿದ್ದಳು. ಇಂತಹ ಅನಾಗರಿಕ ಅವಸ್ಥೆ ಏಕೆ ಬಂದಿದೆ ಅಲ್ಲಿ? ಏಕೆಂದರೆ ಹೆಣ್ಣು ಭ್ರೂಣ ಹತ್ಯೆಯ ಪಿಡುಗಿನಿಂದಾಗಿ ಪಂಜಾಬ್, ಹರ್ಯಾಣ, ದೆಹಲಿ ಮುಂತಾದ ರಾಜ್ಯಗಳಲ್ಲಿ ಹೆಣ್ಣು ಮಕ್ಕಳ ಸಂಖ್ಯೆ ಗಂಭೀರವಾಗಿ ಕುಸಿದಿದೆ. ಮದುವೆಯಾಗಲು ಪುರುಷರಿಗೆ ಹೆಣ್ಣುಗಳು ಸಿಗುತ್ತಿಲ್ಲ. ಹಾಗಾಗಿ ಇಂತಹ ವ್ಯವಸ್ಥೆ!!

ಹೆಣ್ಣು ಭ್ರೂಣ ಹತ್ಯೆಯ ಭೀಕರ ಸಾಮಾಜಿಕ ಪರಿಣಾಮವೊಂದನ್ನು ತೆರೆದಿಡುತ್ತಲೇ ನಾಟಕ ಆರಂಭವಾಗುತ್ತದೆ. ನಾಟಕದ ಕಥೆಯುದ್ದಕ್ಕೂ ಮಹಿಳಾ ಚಳುವಳಿ, ಹೋರಾಟ, ಸಂಘಟನೆ ಹಾಸುಹೊಕ್ಕಾಗಿ ಬೆಸೆದುಕೊಂಡಿದೆ. ಆದರೆ ರಂಗದ ಮೇಲೆ ಎಲ್ಲಿಯೂ ಒಂದೇ ಒಂದು ಧರಣಿ, ಧಿಕ್ಕಾರ, ಸಂಘಟಿತ ಪ್ರತಿಭಟನೆ ಕಾಣಿಸಿಕೊಳ್ಳುವುದಿಲ್ಲ. ಅದು ನಾಟಕದ ಕರ್ತೃ ಮತ್ತು ನಿರ್ದೇಶಕರ ಪ್ರಬುದ್ಧತೆಗೆ ಸಾಕ್ಷಿಯಾಗಿದೆ. ಹೀಗಾಗಿ ನಾಟಕ ಸಿದ್ಧ ಸೂತ್ರಗಳ, ಕ್ಲೀಷೆ ಅಥವಾ ಯಾಂತ್ರಿಕ ಆಲೋಚನಾ ಕ್ರಮಗಳ ಪಡಿಯಚ್ಚಾಗದೆ ಸೃಜನಶೀಲತೆ ಉಳಿಸಿಕೊಳ್ಳುವುದು ಸಾಧ್ಯವಾಗಿದೆ.

ನಾಟಕದುದ್ದಕ್ಕೂ ಪ್ರೇಕ್ಷಕರ ನಡುವೆ ನಗೆಯ ಅಲೆಯೆಬ್ಬಿಸುವಂತಹ ಪರಿಣಾಮಕಾರಿ ಸಂಭಾಷಣೆ ಮತ್ತು ಹಾಸ್ಯ ಇದೆ. ವಿಶೇಷ ಎಂದರೆ ಈ ಹಾಸ್ಯದ ಒಳಗಿನ ಹೂರಣ ಸಮಾಜದ ಲಿಂಗ ತಾರತಮ್ಯ ಮನೋಭಾವ, ಪುರುಷನ 'ದ್ವಂದ್ವ ಮತ್ತು ಆಷಾಢಭೂತಿತನಗಳು, ಜನರ ಮೇರೆ ಮೀರುತ್ತಿರುವ ಧನದಾಹಿ ಪ್ರವೃತ್ತಿಗಳನ್ನು ಪರಿಣಾಮಕಾರಿಯಾಗಿ ಗೇಲಿ ಮಾಡುತ್ತಾ ಹಾಸ್ಯವನ್ನು ಹೊಮ್ಮಿಸುವುದು. ಇದು ನಾಟಕದ ಒಂದು ಯಶಸ್ಸು.

ಹೆಣ್ಣನ್ನು, ರಾಜಕಾರಣಿಗಳನ್ನು, ಕವಿ ಸಾಹಿತಿಗಳನ್ನು ಕುಟುಂಬದ ಹಲವು ಜವಾಬ್ದಾರಿ ಹೊರುವ ಪುರುಷರನ್ನು ಬೇಜವಾಬ್ದಾರಿ ರೀತಿಯಲ್ಲಿ ಗೇಲಿ ಮಾಡುವುದನ್ನೇ ಹಾಸ್ಯ ಎಂದು ಬಿಂಬಿಸುವ 'ಹಾಸ್ಯ ದಾರಾವಾಹಿ'ಗಳು ಎಲ್ಲ ಕಡೆ ವಿಜೃಂಭಿಸುತ್ತಿರುವಾಗ ಈ ಅಂಶ ಬಹಳ ಮುಖ್ಯವಾಗುತ್ತದೆ. ಮಹಿಳೆ ಯರನ್ನು ಹಾಗೂ ಚಳುವಳಿ, ಹೋರಾಟಗಳನ್ನು ತಮಾಷೆ ಮಾಡುವ ಮಾತುಗಳಿದ್ದರೂ ಒಟ್ಟು ಪರಿಣಾಮದಲ್ಲಿ ನಾಟಕ ಹಾಗಿರುವುದಿಲ್ಲ.

ಇದು ಒಂದು ರಂಗ ನಾಟಕವಾದರೂ ಬೀದಿ ನಾಟಕದ ಕೆಲವು ನಾಟಕೀಯ ಗುಣಗಳು ಮತ್ತು ವೇಗ ಈ ನಾಟಕದಲ್ಲಿದೆ. ಇದರಿಂದಾಗಿ ಕೆಲವೆಡೆ ನಾಟಕದ ಸಹಜತೆಗೆ ಧಕ್ಕೆಯಾಗಿದೆ. 'ವಿದ್ಯಾ' ಉದ್ವೇಗಕ್ಕೊಳಗಾಗಿ ದುಡುಕಿ ಮಾತನಾಡುವಂತೆ, ವ್ಯವಹರಿಸುವಂತೆ ಕಾಣುತ್ತದೆ. ಮನಸ್ಸನ್ನು ಗಾಢವಾಗಿ ಕಲಕುವ ಸತ್ವಶಾಲಿ ಕಥೆಯೇ ಇರುವ ಈ ನಾಟಕಕ್ಕೆ ನಾಟಕೀಯತೆ ತರಲು ಚಳುವಳಿಯ ನಾಯಕಿ ಉದ್ವಿಗ್ನಗೊಂಡು ವರ್ತಿಸುವುದು ಅಗತ್ಯವಿರಲಿಲ್ಲ. ಮಹಿಳಾ ಚಳುವಳಿಯ ಒರೆಕೊರೆಗಳೂ ಇಲ್ಲಿ ವಿಮರ್ಶೆಗೊಳಗಿವೆ. ಮಹಿಳಾ ಚಳುವಳಿಯ ಮೇಲಿನ ಕೆಲವು ಸರಳೀಕೃತ ಆರೋಪಗಳಿಗೂ ನಾಟಕ ಉತ್ತರ ನೀಡಿದೆ. ಒಟ್ಟಾರೆ, ಭ್ರೂಣಹತ್ಯೆ ಲಿಂಗತಾರತಮ್ಯದ ಬಗ್ಗೆ ನೋಡುಗರನ್ನು ಚಿಂತನೆಗೆ ಹಚ್ಚುವ ಸಂವಿಧಾನಶೀಲರನ್ನಾಗಿರುವ ಶಕ್ತಿ ನಾಟಕಕ್ಕಿದೆ. ಈ ನಾಟಕಕ್ಕೆ ಅಭಿನಯಕ್ಕೆ ಸಹ ಬಹುಮಾನಗಳು ಸಿಕ್ಕಿವೆ. ಕೆ.ಎಸ್.ವಿಮಲಾ (ವಿದ್ಯಾ), ರಾಜೇಂದ್ರ ಕಾರಂತ್ (ಪ್ರಸಾದ್) ಅತ್ಯುತ್ತಮ ಅಭಿನಯಕ್ಕಾಗಿ ಈ ಬಹುಮಾನ ಗಳಿಸಿದ್ದಾರೆ. ಇತರ ಪಾತ್ರಧಾರಿಗಳ ಅಭಿನಯ, ಸಂಗೀತ, ಬೆಳಕು ಇತರೆ ಅಂಶಗಳು ಚೆನ್ನಾಗಿವೆ.

■ ಆರ್.ರಾಮಕೃಷ್ಣ

ಜ್ಞಾನ ವಿಜ್ಞಾನ

ಕಾಗದದ ಕಥೆ

ಜ್ಞಾನ-ವಿಜ್ಞಾನಗಳು ಜನ ಸಾಮಾನ್ಯರಿಂಗೆ ದಕ್ಕದೇ ಉಳಿದುಬಿಟ್ಟರೆ ಸ್ಥಾಪಿತ ಹಿತಾಸಕ್ತಿಗಳ ಶೋಷಣೆಯ ಸಾಧನವಾಗುತ್ತದೆ.


ಅರ್ಜುನ್‌ರಾವ್
ವಿಜ್ಞಾನಿಗಳು

ಖ್ಯಾತ ಕಲಾಕಾರರಾದ ವಿವಂ ಸುಂದರಂರವರ ದೃಷ್ಟಿಯಲ್ಲಿ ಒಬ್ಬ ಕಲಾಕಾರನಿಗೆ ಕೆಲಸಕ್ಕಾಗಿ ಮೂಲ ತತ್ವಗಳನ್ನು ವಿಜ್ಞಾನವೇ ರೂಪಿಸಿಕೊಡುತ್ತದೆ.

ನಮ್ಮನ್ನು ನಾವೇ ಪ್ರಶ್ನಿಸಿಕೊಳ್ಳೋಣ : ವಿಜ್ಞಾನ ಮಾನವನಿಗೆ ಕೊಟ್ಟ ಯಾವ ಮೂಲ ಅಂಶದಿಂದ ವಿಜ್ಞಾನ ಹಾಗೂ ತಂತ್ರಜ್ಞಾನ ಇಂದು ನಾವು ಕಾಣುತ್ತಿರುವ ಮಟ್ಟಿಗೆ ವಿಸ್ತಾರಗೊಂಡಿದೆ?

ಈ ಪ್ರಶ್ನೆಗೆ ವಿವಿಧ ಅಭಿಪ್ರಾಯಗಳಿರಬಹುದು. ಆದರೆ "ಕಾಗದ"ದ ಶೋಧನೆ ವಿಜ್ಞಾನ ಮತ್ತು ತಂತ್ರಜ್ಞಾನದ ವಿಸ್ತರಣೆಯಲ್ಲಿ ಒಂದು ಮಹತ್ವದ ಪಾತ್ರವಹಿಸಿದೆ. ಕಾಗದದ ಶೋಧನೆಯಿಲ್ಲದೆ 'ಐಕ್ಯರಂಗ' ಪತ್ರಿಕೆಯ ಪ್ರಕಟಣೆ ಸಾಧ್ಯವಾಗುವುದೇ?

'ಪೇಪರ್' ಎಂಬ ಪದವು, 'ಪ್ಯಾಪಿರಸ್' ಎಂಬ ಒಂದು ಜಲಸಸ್ಯದ ಹೆಸರಿನಿಂದ ವಿಕಾಸಗೊಂಡಿದೆ. 'ಪ್ಯಾಪಿರಸ್' ಎಂಬ ಈ ಜಲಸಸ್ಯವು ಪ್ರಾಚೀನ ಈಜಿಪ್ತಿನಲ್ಲಿ ಬಳಕೆಯಲ್ಲಿತ್ತು. 40 ವರ್ಷಗಳ ಹಿಂದೆ, ಥೊರ್ ಹಾಯರ್‌ದಾಲಿಲ್ ಎಂಬ ಹೆಸರಾಂತ ವಿಜ್ಞಾನಿಯೊಬ್ಬನು ಈ ಪ್ಯಾಪಿರಸ್ ಗಿಡಗಳಿಂದ ಒಂದು ದೋಣಿಯನ್ನು ತಯಾರಿಸಿ, ಅದರಲ್ಲಿಯೇ ಅಟ್ಲಾಂಟಿಕ್ ಮಹಾಸಾಗರವನ್ನು ದಾಟಿದ. ಪ್ರಾಚೀನ ಈಜಿಪ್ತಿನಲ್ಲಿ ಈ ಪ್ಯಾಪರಿಸ್ಸನ್ನೇ ಸಾಲುಸಾಲಾಗಿ ಒಂದರ ಮೇಲೊಂದು ಕ್ರಮವಾಗಿ ಜೋಡಿಸಿ, ಅದನ್ನು ಒತ್ತುವುದರ ಮೂಲಕ, ಕಾಗದವನ್ನು ತಯಾರಿಸುತ್ತಿದ್ದರು. ಇದೇ ವಿಶ್ವದ ಪ್ರಪ್ರಥಮ 'ಪೇಪರ್'. ಈ ಮೊದಲನೆಯ ಪೇಪರ್ ಬಿಳಿ ಬಣ್ಣದಾಗಿತ್ತು, ಸಣ್ಣ ಸಣ್ಣ ರಂಧ್ರಗಳಿಂದ ಕೂಡಿತ್ತು. ನಾವು ಇಂದು ಬಳಸುವ ಕಾಗದಗಳು ಮೊಟ್ಟಮೊದಲ ಬಾರಿಗೆ ಚೀನಾ ದೇಶದಲ್ಲಿ ತಯಾರಿಸಲ್ಪಟ್ಟಿತ್ತು. ಕ್ರಿ.ಶ.105ರಲ್ಲಿ, ತ್ಸಾಯ್‌ಹುನ್ ಎಂಬುವನು ಮೊದಲ ಬಾರಿಗೆ ಈ ಪ್ರಕಾರದ ಕಾಗದವನ್ನು ತಯಾರಿಸಿದ್ದು ದಾಖಲಾಗಿದೆ. ಇಲ್ಲಿಗೆ 2 ಸಾವಿರ ವರ್ಷಗಳ ಹಿಂದಕ್ಕೆ ತಿರುಗಿ ನೋಡಿದರೆ, ಬರೆಯಲಿಕ್ಕಾಗಿ ಯಾವುದೇ ವಸ್ತು ಸಿಗುವುದು ದುಸ್ತರವಾಗಿತ್ತು. ಪ್ರಾಚೀನ ನಾಗರೀಕತೆಯ ಸಮಯದಲ್ಲಿ ಜನರು ಕಲ್ಲು, ಕಟ್ಟಿಗೆ, ಚರ್ಮ, ಬಟ್ಟೆಗಳ ಮೇಲೆ ಬರೆಯುವ ಒಂದು ಅನಿವಾರ್ಯತೆ ನಿರ್ಮಾಣಗೊಂಡಿತ್ತು. ಆ ಕಾಲದಂತೆ, ನಾವು ಈಗ ಚರ್ಮ, ಬಟ್ಟೆ ಇತ್ಯಾದಿಗಳ ಮೇಲೆ ಬರೆಯಲು ಪ್ರಯತ್ನಿಸಿ ನೋಡಿದರೆ ಅದು ಎಷ್ಟು ಕಷ್ಟಕರವಾದುದೆಂದು ನಮಗೆ ತಿಳಿದುಬರುತ್ತದೆ. ಈ ಕಾಗದದ ಸಂಶೋಧನೆಯಿಂದ ಆಧುನಿಕ ಮಾನವ ನಾಗರಿಕತೆ ಬೆಳವಣಿಗೆ ಹೊಂದಲು ಒಂದು ಪ್ರಮುಖ ಕಾರಣವಾಗಿದೆಯೆಂದು ತಿಳಿಯುತ್ತದೆ. ಆ ಕಾಲದ ಜನರು ಹಿಪ್ಪು ನೇರಳೆ ಮರದ



ಪ್ರಾಚೀನ ಕಾಲದಲ್ಲಿ ಬರವಣಿಗೆಗಾಗಿ ಮರದ ತೊಗಟೆಗಳನ್ನು ಬಳಸುತ್ತಿದ್ದರು.

ತೊಗಟೆಯ ಒಳಗಿನ ಭಾಗವನ್ನು ಮೊದಲ ಬಾರಿಗೆ ಕಚ್ಚಾ ವಸ್ತುವಾಗಿ ಕಾಗದ ತಯಾರಿಕೆಯಲ್ಲಿ ಬಳಸುತ್ತಿದ್ದರು (ನಮ್ಮ ರಾಜ್ಯದಲ್ಲಿ ಈ ಮರವನ್ನು ಪ್ರಮುಖವಾಗಿ ರೇಷ್ಮೆ ಉತ್ಪಾದಿಸಲು ಬಳಸುತ್ತಾರೆ). ಕಾಲಕ್ರಮೇಣ ಚೀನಾದಲ್ಲಿ ಚಿಂದಿ ಬಟ್ಟೆಯನ್ನೂ ಕಾಗದ ತಯಾರಿಕೆಯಲ್ಲಿ ಕಚ್ಚಾ ವಸ್ತುವಾಗಿ ಬಳಸುತ್ತಿದ್ದರು. ಕಾಗದದ ಶೋಧನೆಯ ನಂತರ ಕಡಿಮೆ ಕಾಲದಲ್ಲಿಯೇ ಅರಬ್ ದೇಶದವರಿಗೆ ಅದರ ಮಹತ್ವ ಅರಿವಾಯಿತು. ಅರಬರು ಚೀನಾ ದೇಶದ ಕಾಗದ ಉತ್ಪಾದಕರನ್ನು ತಮ್ಮ ದೇಶಕ್ಕೆ ಕರೆತಂದು, ಮಧ್ಯ ಏಷ್ಯಾದ,

ಪುಟ 8 ನೋಡಿ

PRB DECR 319-79/79 AIKYARANGA WEEKLY Reg.No.17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 22236462,
ಮುದ್ರಣ: ಹರಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee Editor : S.Y.GURUSHANTH